ಬ್ಯಾಡಗಿ ಪಟ್ಟಣ ಹಾವೇರಿ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001 ರ ಜನಗಣತಿಯಂತೆ 25658 ಜನಸಂಖ್ಯೆ ಇದ್ದು ಪ್ರಸ್ತುತ 31000 ಇರುತ್ತದೆ. 2025 ರಲ್ಲಿ ಯೋಜನೆಯ ಮಧ್ಯಂತರ ಅವಧಿಗೆ 37000 ಜನಸಂಖ್ಯೆಯನ್ನು ಮತ್ತು 2040ರ ಯೋಜನೆಯ ಅಂತಿಮ ಹಂತದಲ್ಲಿ 47000 ಜನಸಂಖ್ಯೆಯನ್ನು ಅಂದಾಜಿಸಲಾಗಿದೆ.

ಬ್ಯಾಡಗಿ ಪಟ್ಟಣಕ್ಕೆ ಹಾಲಿ ತುಂಗಭದ್ರಾ ನದಿ ಮೂಲದಿಂದ ವ್ಯಾಪಕ ನೀರು ಸರಬರಾಜು ಯೋಜನೆಯಡಿಯಲ್ಲಿ ರಾಣೆಬೆನ್ನೂರು, ಬ್ಯಾಡಗಿ ಮತ್ತು ಮಾರ್ಗ ಮಧ್ಯದ ಹಳ್ಳಿಗಳಿಗೆ ನೀರು ಸರಬರಾಜು ಯೋಜನೆಯನ್ನು ಜನವರಿ 2002 ರಲ್ಲಿ ರಾಣೆಬೆನ್ನೂರಿಗೂ ಮತ್ತು ಜನವರಿ 2003 ರಲ್ಲಿ ಬ್ಯಾಡಗಿ ಪಟ್ಟಣಕ್ಕೆ ಅನುಷ್ಠಾನಗೊಳಿಸಿ ಚಾಲನೆಗೊಳಿಸಲಾಗಿದೆ. ಈ ಯೋಜನೆಯಡಿ ತುಂಗಭದ್ರಾ ನದಿಯ ಬಳಿ ಕುದರಿಹಾಳದ ಮೂಲ ಸ್ಥಾವರದ ಬಳಿ ಹಾಲಿ ಇದ್ದ 4.5 ಎಂ.ಎಲ್.ಡಿ. ಸಾಮರ್ಥ್ಯದ ನೀರು ಶುದ್ಧೀಕರಣ ಘಟಕವನ್ನು ಉಪಯೋಗಿಸಿಕೊಳ್ಳಲು ಯೋಜಿಸಲಾಗಿತ್ತು. ಈ ಯೋಜನೆಯಡಿ ಒಟ್ಟು 18.04 ಎಂ.ಎಲ್.ಡಿ. ನೀರನ್ನು ಪಡೆಯಲು ವಿನ್ಯಾಸಿಸಿ ಸದರಿ ನೀರಿನಲ್ಲಿ ರಾಣೆಬೆನ್ನೂರು ನಗರಕ್ಕೆ 12.73 ಎಂ.ಎಲ್.ಡಿ. ನೀರನ್ನು, ಬ್ಯಾಡಗಿ ಪಟ್ಟಣಕ್ಕೆ 3.33 ಎಂ.ಎಲ್.ಡಿ. ನೀರನ್ನು ಮತ್ತು ಮಾರ್ಗ ಮಧ್ಯದ ಹಳ್ಳಿಗಳಿಗೆ 1.98 ಎಂ.ಎಲ್.ಡಿ. ನೀರನ್ನು ಯೋಜನೆಯ ಅಂತಿಮ ಹಂತಕ್ಕೆ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಿಸಿ ಅನುಷ್ಠಾನಗೊಳಿಸಲಾಗಿದೆ.

ಪ್ರಸ್ತುತ ರಾಣೆಬೆನ್ನೂರು ನಗರಸಭೆಯಿಂದ ಹಳೆಯ ಯೋಜನೆಯಡಿ ಉಪಯೋಗಿಸಿಕೊಂಡಿದ್ದ 4.54 ಎಂ.ಎಲ್.ಡಿ. ಸಾಮರ್ಥ್ಯದ ಕುದರಿಹಾಳ್ ಬಳಿ ಇರುವ ಮೂಲಸ್ಥಾವರವನ್ನು ಕಾರ್ಯಗತವಾಗುತ್ತಿಲ್ಲವೆಂದು ನಿಲ್ಲಿಸಲಾಗಿದೆ. ಇದರಿಂದ ಬ್ಯಾಡಗಿ ಪಟ್ಟಣ ಹಾಗೂ ಮಾರ್ಗ ಮಧ್ಯದ ಹಳ್ಳಿಗಳಿಗೆ ಅಗತ್ಯವಿರುವ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಪ್ರಸಕ್ತ ಸಿಪಿಹೆಚ್ಇಇಒ ನಿಯಮಾವಳಿಯ ಪ್ರಕಾರ ತಲಾ ದಿನಂಪ್ರತಿ 135 ಎಲ್.ಪಿ.ಸಿ.ಡಿ. ನೀರನ್ನು ಸರಬರಾಜು ಮಾಡುವ ಉದ್ದೇಶದಿಂದ ಮತ್ತು ಪ್ರಸ್ತುತ ಬ್ಯಾಡಗಿ ಪಟ್ಟಣವು ಎದುರಿಸುತ್ತಿರುವ ನೀರಿನ ಅಭಾವದಿಂದ ಬ್ಯಾಡಗಿ ಪಟ್ಟಣಕ್ಕೆ ಪ್ರತ್ಯೇಕ ನೀರು ಸರಬರಾಜು ಯೋಜನೆಯ ಅಗತ್ಯತೆ ಇರುತ್ತದೆ.

ಬ್ಯಾಡಗಿ ಪಟ್ಟಣಕ್ಕೆ ಹಾಗೂ ಮಾರ್ಗ ಮಧ್ಯದ 3 ಹಳ್ಳಿಗಳಿಗೆ ತುಂಗಭದ್ರಾ ನದಿ ಮೂಲದಿಂದ ಪ್ರತ್ಯೇಕ ನೀರು ಸರಬರಾಜು ವ್ಯವಸ್ಥೆಯ ಅಂದಾಜನ್ನು 2009–10ನೇ ಸಾಲಿನ ಮಂಡಳಿಯ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ವಯ ರೂ.2805.00 ಲಕ್ಷಗಳಲ್ಲಿ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುದಾನ	ರೂ. 1130.50 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ	ರೂ. 1130.50 ಲಕ್ಷಗಳು
ಆರ್.ಡಿ.ಪಿ.ಆರ್. ಪಾಲು	ರೂ. 544.00 ಲಕ್ಷಗಳು
ಒಟ್ಟು	**ರೂ. 2805.00 ಲಕ್ಷಗಳು**

ಈ ಯೋಜನೆಗೆ ಅಗತ್ಯವಿರುವ 9.08 ಎಂ.ಎಲ್.ಡಿ. ನೀರನ್ನು ಮುದೇನೂರು ಗ್ರಾಮ ಹತ್ತಿರ ತುಂಗಭದ್ರಾ ನದಿಯ ಮೂಲದಿಂದ ಪಡೆಯಲು ಜಲಸಂಪನ್ಮೂಲ ಇಲಾಖೆಯ ಸಹಮತಿಯು ಅ.ಟಿ. ಸಂಖ್ಯೆ : ಜಸಂಇ 50 ಎಂಎಂಬಿ 2010, ದಿನಾಂಕ 24–1–2011 ರಲ್ಲಿ ಈ ಕೆಲವು ಷರತ್ತುಗಳಿಗೆ ಒಳಪಟ್ಟಂತೆ ತಾತ್ವಿಕ ಸಹಮತಿ ನೀಡಿದೆ.

ಈ ಯೋಜನೆಯಡಿ ಮಾರ್ಗ ಮಧ್ಯದಲ್ಲಿ ಬರುವ 3 ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವಂತಿಕೆಯಾದ ರೂ. 544.00 ಲಕ್ಷಗಳಿಗೆ ಸಹಮತಿಯನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ : ಗ್ರಾಅಪ 37 ಗ್ರಾನೀಸ (5)10 ದಿನಾಂಕ 25–04–2011 ರಲ್ಲಿ ಯೋಜನೆಯ ಬಾಬ್ತು ವಾಸ್ತವಿಕ ಇಂಕ್ರಿಮೆಂಟಲ್ ವೆಚ್ಚದ ಆಧಾರದ ಮೇಲೆ ಇಲಾಖೆ ಪಾಲಿನ ಮೊತ್ತವಾದ ರೂ.3.573 ಕೋಟಿ ಅನುದಾನವನ್ನು ಯೋಜನೆಯ ಪ್ರಗತಿ ಮತ್ತು ಬೇಡಿಕೆ ಆಧರಿಸಿ ನೀಡಲು ಸಹಮತಿ ನೀಡಿರುತ್ತದೆ. ಇದರಿಂದ ವ್ಯತ್ಯಾಸದ ಮೊತ್ತವಾದ ರೂ. 186.70 ಲಕ್ಷಗಳನ್ನು ಯೋಜನಾ ವೆಚ್ಚದಿಂದ ಕಡಿತಗೊಳಿಸಬೇಕಾಗಿರುತ್ತದೆ.

ಇದಲ್ಲದೆ ಸರ್ಕಾರವು ಯೋಜನೆಯ ಅಂದಾಜು ವೆಚ್ಚದಲ್ಲಿ ಎಕ್ಸಲೇಷನ್ ದರಗಳನ್ನು ಸ್ಥಳೀಯ ಸಂಸ್ಥೆಯೇ ಭರಿಸಬೇಕಾಗಿರುವುದರಿಂದ ಸದರಿ ಮೊತ್ತವನ್ನು ಅಂದಾಜು ಮೊತ್ತದಿಂದ ಹೊರತುಪಡಿಸಬೇಕಾಗಿರುತ್ತದೆ. ಇದರಿಂದ ಯೋಜನೆಯ ಅಂದಾಜು ವೆಚ್ಚವು ರೂ.258.42 ಲಕ್ಷಗಳಷ್ಟು ಕಡಿಮೆಯಾಗುತ್ತದೆ. ಇದಲ್ಲದೆ ಸಾದಿಲ್ವಾರು ವೆಚ್ಚ ಮತ್ತು ಇ.ಟಿ.ಪಿ. ದರಗಳನ್ನು ಶೇ.5 ಕ್ಕೆ ಮಿತಿಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಯೋಜನೆಯ ಅಂದಾಜಿನಲ್ಲಿ ರೂ.254.11 ಲಕ್ಷಗಳನ್ನು ಕಡಿತಗೊಳಿಸಬೇಕಾಗಿರುತ್ತದೆ. ಇದರಿಂದ ಯೋಜನಾ ವೆಚ್ಚವನ್ನು ರೂ.2805.00 ಲಕ್ಷಗಳಿಂದ ರೂ.2292.47 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿರುತ್ತದೆ.

ಸದರಿ ಯೋಜನೆಯನ್ನು 2009–10ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕ್ರಿಯಾ ಯೋಜನೆಯ ಪ್ರವರ್ಗ–ಡಿ ಯಡಿಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ರೂ.573.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 33 ಯುಡಬ್ಲ್ಯೂಎಸ್ 2009, ಬೆಂಗಳೂರು, ದಿನಾಂಕ 8ನೇ ಜೂನ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ ಬ್ಯಾಡಗಿ ಪಟ್ಟಣ ಮತ್ತು ಮಾರ್ಗ ಮಧ್ಯದ 3 ಹಳ್ಳಿಗಳಿಗೆ ತುಂಗಭದ್ರಾ ನದಿ ಮೂಲದಿಂದ ಪ್ರತ್ಯೇಕ ನೀರು ಸರಬರಾಜು ವ್ಯವಸ್ಥೆಯನ್ನು ಅಂದಾಜು ರೂ. 2292.47 ಲಕ್ಷಗಳಲ್ಲಿ (ರೂ. ಎರಡು ಸಾವಿರದ ಇನ್ನೂರ ತೊಂಬತ್ತೆರಡು ಲಕ್ಷಗಳು ಮತ್ತು ನಲವತ್ತೇಳು ಸಾವಿರ ಮಾತ್ರ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು "ನಗರ ನೀರು ಸರಬರಾಜು ಯೋಜನೆಯಡಿ" ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. The Escalation charges should not form part of the estimate. It should be borne by the concerned ULB. The estimate should be reduced to such extent.
2. ETP & contingencies to be restricted to 5%.
3. Resolution of the Local body to bear the project cost should be sought and if any deviations and extra item works or variations should be taken up only after the consent of the Urban Local Body with a condition for the commitment of the ULB for the extra cost.
4. Adequate provision to be made by the Board in the following Years for timely completion of the Project.
5. Escalations and Tender premium should be approved with the prior consent of the ULB.
6. Water rates as proposed by KUWS&DB have to be implemented to meet O & M cost.
7. KTPP provisions, quality control and timely completion should ensured.
8. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
9. ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.
10. ತುಂಗಭದ್ರಾ ನದಿಯಿಂದ ಪಡೆಯುವ ನೀರನ್ನು ಕುಡಿಯುವ ನೀರಿಗಾಗಿ ಬಳಸುವುದಲ್ಲದೇ ಇನ್ಯಾವುದೇ ಉದ್ದೇಶಕ್ಕಾಗಿ ಬಳಸಿಕೊಳ್ಳುವುದಾಗಲೀ ಸಂಗ್ರಹಿಸುವುದಕ್ಕಾಗಲೀ ಅವಕಾಶವಿರುವುದಿಲ್ಲ.
11. ನೀರೆತ್ತುವ ಪ್ರಮಾಣವನ್ನು ಸೂಕ್ತ ರೀತಿಯಲ್ಲಿ ಅಳತೆ ಮಾಡುವ ಸಲುವಾಗಿ ಅಗತ್ಯ ಮಾಪಕವನ್ನು ಮಂಡಳಿಯು ತನ್ನ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳತಕ್ಕದ್ದು.
12. ಯಾವುದೇ ಕಾರಣದಿಂದ ನೀರನ್ನು ಜಲಸಂಪನ್ಮೂಲ ಇಲಾಖೆಯು ಒದಗಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಉಂಟಾಗುವ ತೊಂದರೆಗೆ ಸರ್ಕಾರವು ಜವಾಬ್ದಾರಿಯಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 112 Exp-9/2011, ದಿನಾಂಕ 07–03–2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಂ. ಹಿರೇಮಠ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 1591

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಭಾಗ್ಯಶ್ರೀ ವೈದ್ಯಾಧಿಕಾರಿ, ಐಪಿಪಿ.–8 ಹೆರಿಗೆ ಆಸ್ಪತ್ರೆ, ತಾರಾಪೈಲ್, ಗುಲ್ಬರ್ಗ ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಓ (ಎಂ)/18/2008–09 ದಿನಾಂಕ: 28–3–2009.

ಪ್ರಸ್ತಾವನೆ:

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಡಾ॥ ಭಾಗ್ಯಶ್ರೀ ವೈದ್ಯಾಧಿಕಾರಿ, ಐಪಿಪಿ–8 ಹೆರಿಗೆ ಆಸ್ಪತ್ರೆ, ತಾರಾಪೈಲ್, ಗುಲ್ಬರ್ಗಾ ಇವರು ವಿಶೇಷ ನೇಮಕಾತಿ ಮೂಲಕ ಆಯ್ಕೆಗೊಂಡು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ/135/ಹೆಚ್‌ಎಸ್‌ಹೆಚ್/2007 ದಿನಾಂಕ: 18/12/2007 ಮತ್ತು 08/01/2008 ರ ಪ್ರಕಾರ ದಿನಾಂಕ: 11/01/2008 ರಂದು ಹುದ್ದೆಗೆ ಹಾಜರಾಗಿರುತ್ತಾರೆ. ತದನಂತರ ದಿನಾಂಕ: 04/06/2008 ರಂದು ಮನವಿ ಸಲ್ಲಿಸಿ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ದಿನಾಂಕ: 05/06/2008 ರಿಂದ 3 ವರ್ಷಗಳ ವ್ಯಾಸಂಗ ರಜೆ ಮಂಜೂರು ಮಾಡುವಂತೆ ಕೋರಿ, ಸೇವೆಗೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಆದರೆ, ನೇಮಕಾತಿ ಷರತ್ತಿನನ್ವಯ ಖಾಯಂಪೂರ್ವ ಸೇವಾವಧಿಯಲ್ಲಿ ಸ್ನಾತಕೋತ್ತರ ವ್ಯಾಸಂಗ ನಡೆಸಲು ಅಥವಾ ಮುಂದುವರಿಸಲು ಅವಕಾಶವಿಲ್ಲದಿರುವುದರಿಂದ ಪ್ರೊಬೆಷನರಿ ನಿಯಮಗಳ ಪ್ರಕಾರ ಸೇವೆಯಿಂದ ವಿಮೋಚನೆಗೊಳಿಸುವಂತೆ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 130 ಹೆಚ್‌ಎಸ್‌ಹೆಚ್ 2009 ಬೆಂಗಳೂರು, ದಿನಾಂಕ 21–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಭಾಗ್ಯಶ್ರೀ ವೈದ್ಯಾಧಿಕಾರಿ, ಐಪಿಪಿ–8 ಹೆರಿಗೆ ಆಸ್ಪತ್ರೆ ತಾರಾಪೈಲ್, ಗುಲ್ಬರ್ಗಾ ಇವರು ಖಾಯಂಪೂರ್ವ ಸೇವಾವಧಿಯಲ್ಲಿ ದಿನಾಂಕ: 05/06/2008 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಇಲಾಖೆಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತರಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6 ರಡಿಯಲ್ಲಿ ಸದರಿಯವರನ್ನು ದಿನಾಂಕ: 05/06/2008 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1593

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಸೇವೆಗಳು–1)

ಯುವಜನ ಸೇವಾ ಸಚಿವಾಲಯ

ವಿಷಯ : 2011–12ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಗಿರಿಜನ ಉಪಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

ಓದಲಾಗಿದೆ :

1. ದಿನಾಂಕ: 25/03/2011ರ ಡಿವೈಎಸ್‌ಎಸ್/ಆವ್ಯ–46/10–11ರ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರ ಪತ್ರ.
2. ದಿನಾಂಕ: 18/04/2011ರ ಡಿವೈಎಸ್‌ಎಸ್/ಆವ್ಯ–46/10–11ರ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರ ಪತ್ರ.
3. 2011–12ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಬಗ್ಗೆ ದಿನಾಂಕ: 09/05/2011ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.
4. ದಿನಾಂಕ: 24/05/2011ರ ಡಿವೈಎಸ್‌ಎಸ್/ಆವ್ಯ–46/ಎಸ್‌ಸಿ.ಪಿ/2010–11/11–12ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರ ಪತ್ರಗಳು.

ಪ್ರಸ್ತಾವನೆ:

2011–12ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ವರ್ಗ ಉಪಯೋಜನೆಗಳ ಅಡಿಯಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಕ್ರಮವಾಗಿ ರೂ. 553.00 ಲಕ್ಷ ಮತ್ತು ರೂ. 425.75 ಲಕ್ಷಗಳನ್ನು ಒದಗಿಸಲಾಗಿರುತ್ತದೆ. ಈ ಯೋಜನೆಗಳ ಅನುಷ್ಠಾನಕ್ಕಾಗಿ ಕೆಳಕಂಡಂತೆ ಕ್ರಿಯಾಯೋಜನೆಗಳನ್ನು ತಯಾರಿಸಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರು ಉಲ್ಲೇಖ (1) ಮತ್ತು (2)ರ ಮೂಲಕ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಪರಿಶಿಷ್ಟ ಜಾತಿ ಉಪಯೋಜನೆ (Special Component Programme-SCP)

(ಲೆಕ್ಕ ಶೀರ್ಷಿಕೆ 2204–00–800–015–422)

ಕ್ರ.ಸಂ.	ಯೋಜನೆಗಳ ವಿವರ	ಅನುದಾನ (ರೂ.ಲಕ್ಷಗಳಲ್ಲಿ)
1.	ಗ್ರಾಮೀಣ ಪ್ರದೇಶಗಳಲ್ಲಿ ಅಂಬೇಡ್ಕರ್ ಯುವಜನ ಅಭಿವೃದ್ಧಿ ಕೇಂದ್ರಕ್ಕೆ (30 X 10)	300.00
2.	ಎಸ್.ಸಿ ಯುವಜನ ವಿದ್ಯಾ ಸಂಸ್ಥೆಯ ಆಟದ ಮೈದಾನ ಅಭಿವೃದ್ಧಿಪಡಿಸಲು (4.86X30)	145.82

3.	ಯುವಕ ಸಂಘಗಳಿಗೆ ಭಜನೆ ಸಾಮಗ್ರಿಗಳು, ಸಾಂಸ್ಕೃತಿಕ ಹಾಗೂ ಕ್ರೀಡಾ ಸಲಕರಣೆ (ವಾಲಿಬಾಲ್, ಅಥ್ಲೆಟಿಕ್, ಹಾಕಿ ರೋಲ್ ಮತ್ತಿತರೇ ಸಲಕರಣೆಗಳಿಗಾಗಿ)	94.58
4.	ರಾಜ್ಯಮಟ್ಟದ ಜಾನಪದ ಕಲಾಮೇಳ ಹಾಗೂ ತರಬೇತಿ ಕಾರ್ಯಕ್ರಮ (4 ಕಾರ್ಯಕ್ರಮಗಳು), ಪ್ರತಿ ಕಾರ್ಯಕ್ರಮಕ್ಕೆ ರೂ. 3.15 ಲಕ್ಷದಂತೆ ವಿಭಾಗ ಮಟ್ಟದಲ್ಲಿ	12.60
	ಒಟ್ಟು	553.00

ಪರಿಶಿಷ್ಟ ಪಂಗಡ ಉಪಯೋಜನೆ (Tribal Area Sub Plan)

(ಲೆಕ್ಕ ಶೀರ್ಷಿಕೆ 2204–00–796–0–01–423)

ಕ್ರ.ಸಂ.	ಯೋಜನೆಗಳ ವಿವರ	ಅನುದಾನ (ರೂ.ಲಕ್ಷಗಳಲ್ಲಿ)
1.	ಗಿರಿಜನ ಜಾತಿಗೆ ಸೇರಿದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನ್ವೇಷಣೆ ಮತ್ತು ತರಬೇತಿಗಾಗಿ ಗಿರಿಜನ ಸಂಖ್ಯೆ ಇರುವ ಜಿಲ್ಲೆಗಳಿಗೆ ತಲಾ ರೂ. 7.40 ಲಕ್ಷದಂತೆ 30 ಕಾರ್ಯಕ್ರಮಗಳಿಗೆ: (ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನ್ವೇಷಣೆ ತರಬೇತಿಗಾಗಿ ರೂ. 100 ರಂತೆ 370 ಮಂದಿಗೆ 20 ದಿನಕ್ಕೆ ಊಟೋಪಚಾರಕ್ಕೆ) (100x370x20=7.40 ಲಕ್ಷ x30)	222.00
2.	(ಎ) ಯುವ ಚೇತನ ಯುವ ಪ್ರೇರಣಾ ಯುವ ಸಂವಹನ ಹಾಗೂ ತರಬೇತಿ ಸಲಕರಣೆಗಳ ಖರೀದಿಗಾಗಿ (ಬಿ) ತರಬೇತಿ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಒಂದು ದಿನಕ್ಕೆ ರೂ. 150/–ರಂತೆ 178 ಮಂದಿಗೆ 10 ದಿನಕ್ಕೆ 50 ಕಾರ್ಯಕ್ರಮಗಳಿಗೆ.	41.00 133.50
3.	ಆಡಳಿತಾತ್ಮಕ ವೆಚ್ಚಕ್ಕಾಗಿ ಮತ್ತು ವಾಹನಗಳನ್ನು ಹೊರಗುತ್ತಿಗೆಯಿಂದ ಪಡೆಯಲು	29.25
	ಒಟ್ಟು	425.75

ಈ ಕ್ರಿಯಾಯೋಜನೆಗೆ ದಿನಾಂಕ: 09/05/2011 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಒಪ್ಪಿಗೆ ನೀಡಲಾಗಿರುತ್ತದೆ.

2011–12ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ವರ್ಗ ಉಪಯೋಜನೆ ಕಾರ್ಯಕ್ರಮಗಳನ್ನು ಮೇಲ್ಕಂಡ ಕ್ರಿಯಾಯೋಜನೆಯ ಪ್ರಕಾರ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆಯನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರು ಮೇಲೆ ಓದಲಾದ (4)ರ ಪತ್ರದ ಮೂಲಕ ಕೋರಿದ್ದಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಯುಸೇಇ 28 ಯುಸೇಕ್ರೀ 2011, ಬೆಂಗಳೂರು, ದಿನಾಂಕ: 24–06–2011

ಪ್ರಸ್ತಾವನೆಯಲ್ಲಿನ ವಿವರಣೆಗಳ ಹಿನ್ನೆಲೆಯಲ್ಲಿ 2011–12ನೇ ಸಾಲಿನಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯ ವಲಯ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ವರ್ಗ ಉಪಯೋಜನೆಗಳನ್ನು ಈ ಕೆಳಕಂಡ ಕ್ರಿಯಾಯೋಜನೆಯ ಪ್ರಕಾರ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

ಪರಿಶಿಷ್ಟ ಜಾತಿ ಉಪಯೋಜನೆ (Special Component Programme-SCP)

(ಲೆಕ್ಕ ಶೀರ್ಷಿಕೆ 2204–00–800–015–422)

ಕ್ರ.ಸಂ.	ಯೋಜನೆಗಳ ವಿವರ	ಅನುದಾನ (ರೂ.ಲಕ್ಷಗಳಲ್ಲಿ)
1.	ಗ್ರಾಮೀಣ ಪ್ರದೇಶಗಳಲ್ಲಿ ಅಂಬೇಡ್ಕರ್ ಯುವಜನ ಅಭಿವೃದ್ಧಿ ಕೇಂದ್ರಕ್ಕೆ (30 X 10)	300.00
2.	ಎಸ್.ಸಿ ಯುವಜನ ವಿದ್ಯಾ ಸಂಸ್ಥೆಯ ಆಟದ ಮೈದಾನ ಅಭಿವೃದ್ಧಿಪಡಿಸಲು (4.86X30)	145.82
3.	ಯುವಕ ಸಂಘಗಳಿಗೆ ಭಜನೆ ಸಾಮಗ್ರಿಗಳು, ಸಾಂಸ್ಕೃತಿಕ ಹಾಗೂ ಕ್ರೀಡಾ ಸಲಕರಣೆ (ವಾಲಿಬಾಲ್, ಅಥ್ಲೆಟಿಕ್, ಹಾಕಿ ರೋಲ್ ಮತ್ತಿತರೇ ಸಲಕರಣೆಗಳಿಗಾಗಿ)	94.58

4.	ರಾಜ್ಯಮಟ್ಟದ ಜಾನಪದ ಕಲಾಮೇಳ ಹಾಗೂ ತರಬೇತಿ ಕಾರ್ಯಕ್ರಮ (4 ಕಾರ್ಯಕ್ರಮಗಳು), ಪ್ರತಿ ಕಾರ್ಯಕ್ರಮಕ್ಕೆ ರೂ. 3.15 ಲಕ್ಷದಂತೆ ವಿಭಾಗ ಮಟ್ಟದಲ್ಲಿ	12.60
	ಒಟ್ಟು	553.00

ಪರಿಶಿಷ್ಟ ಪಂಗಡ ಉಪಯೋಜನೆ (Tribal Area Sub Plan)

(ಲೆಕ್ಕ ಶೀರ್ಷಿಕೆ 2204–00–796–0–01–423)

ಕ್ರ.ಸಂ.	ಯೋಜನೆಗಳ ವಿವರ	ಅನುದಾನ (ರೂ.ಲಕ್ಷಗಳಲ್ಲಿ)
1.	ಗಿರಿಜನ ಜಾತಿಗೆ ಸೇರಿದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನ್ವೇಷಣೆ ಮತ್ತು ತರಬೇತಿಗಾಗಿ ಗಿರಿಜನ ಸಂಖ್ಯೆ ಇರುವ ಜಿಲ್ಲೆಗಳಿಗೆ ತಲಾ ರೂ. 7.40 ಲಕ್ಷದಂತೆ 30 ಕಾರ್ಯಕ್ರಮಗಳಿಗೆ: (ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನ್ವೇಷಣೆ ತರಬೇತಿಗಾಗಿ ರೂ. 100 ರಂತೆ 370 ಮಂದಿಗೆ 20 ದಿನಕ್ಕೆ ಊಟೋಪಚಾರಕ್ಕೆ) (100x370x20=7.40 ಲಕ್ಷ x30)	222.00
2.	(ಎ) ಯುವ ಚೇತನ ಯುವ ಪ್ರೇರಣಾ ಯುವ ಸಂವಹನ ಹಾಗೂ ತರಬೇತಿ ಸಲಕರಣೆಗಳ ಖರೀದಿಗಾಗಿ (ಬಿ) ತರಬೇತಿ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಒಂದು ದಿನಕ್ಕೆ ರೂ. 150/–ರಂತೆ 178 ಮಂದಿಗೆ 10 ದಿನಕ್ಕೆ 50 ಕಾರ್ಯಕ್ರಮಗಳಿಗೆ.	41.00 133.50
3.	ಆಡಳಿತಾತ್ಮಕ ವೆಚ್ಚಕ್ಕಾಗಿ ಮತ್ತು ವಾಹನಗಳನ್ನು ಹೊರಗುತ್ತಿಗೆಯಿಂದ ಪಡೆಯಲು	29.25
	ಒಟ್ಟು	425.75

2011–12ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ಕ್ರಿಯಾಯೋಜನೆಗಳಿಗೆ ಅನುಮೋದನೆ ನೀಡುವ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 09/05/2011ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1594

ಸಿ.ಶ್ರೀನಿವಾಸ್

ಸರ್ಕಾರದ ಅಧೀನ ಕಾರ್ಯದರ್ಶಿ

ಯುವಜನ ಸೇವಾ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಅಧಿಕಾರಿ ವೇತನ ಸಮಿತಿಗೆ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 23 ಎಸ್‌ಆರ್‌ಪಿ 2011 ದಿನಾಂಕ 15–6–2011.

2. ಅಧಿಕೃತ ಜ್ಞಾಪನ ಸಂಖ್ಯೆ ಎಫ್‌ಡಿ 23 ಎಸ್‌ಆರ್‌ಪಿ 2011 ದಿನಾಂಕ 20–6–2011.

ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಗಳು 2011–12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಗಣಿಸಲು ಒಂದು ಅಧಿಕಾರಿ ವೇತನ ಸಮಿತಿಯನ್ನು ರಚಿಸುವ ಬಗ್ಗೆ ಆದೇಶವನ್ನು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 15–6–2011ರ ಸರ್ಕಾರಿ ಆದೇಶದಲ್ಲಿ ಹೊರಡಿಸಲಾಗಿದೆ ಹಾಗೂ ಈ ಸಮಿತಿಗೆ ತನ್ನ ವರದಿಯನ್ನು ಸಲ್ಲಿಸಲು 9 ತಿಂಗಳುಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.

ಆರ್ಥಿಕ ಇಲಾಖೆಯು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 20–6–2011ರ ಅಧಿಕೃತ ಜ್ಞಾಪನದಲ್ಲಿ ಮೇಲ್ಕಂಡ ಅಧಿಕಾರಿ ವೇತನ ಸಮಿತಿಗೆ ಲಿಪಿಕ ಸಹಾಯ ನೀಡಲು ವಿವಿಧ ವೃಂದದ ಒಟ್ಟು 8 ಹುದ್ದೆಗಳನ್ನು ಸಮಿತಿಯ ಕೆಲಸ ಕೊನೆಗೊಳ್ಳುವವರೆವಿಗೆ ಸೃಜಿಸಲು ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಕೋರಲಾಗಿರುತ್ತದೆ.

ಅದರಂತೆ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 346 ಸಅಸೇ 2011, ಬೆಂಗಳೂರು, ದಿನಾಂಕ 30ನೇ ಜೂನ್ 2011

ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಗಣಿಸಲು ಶ್ರೀ ಸುಭೀರ್ ಹರಿಸಿಂಗ್, ಐ.ಎ.ಎಸ್. ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಅಧಿಕಾರಿ ವೇತನ ಸಮಿತಿಗೆ ಲಿಪಿಕ ಸಹಾಯ ನೀಡಲು ಈ ಕೆಳಕಂಡ ಹುದ್ದೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಸಮಿತಿಯ ಕೆಲಸ ಕೊನೆಗೊಳ್ಳುವವರೆವಿಗೆ ತಾತ್ಕಾಲಿಕವಾಗಿ ಸೃಜಿಸಲು ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಗಳು	ಹುದ್ದೆಗಳ ಸಂಖ್ಯೆ
1)	ಅಧೀನ ಕಾರ್ಯದರ್ಶಿ	1
2)	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	1
3)	ಸಹಾಯಕರು	2
4)	ಡಾಟಾ ಎಂಟ್ರಿ ಆಪರೇಟರ್	1
5)	ಶೀಘ್ರಲಿಪಿಗಾರರು	1
6)	ದಲಾಯತ್	1
7)	ವಾಹನ ಚಾಲಕರು	1
	ಒಟ್ಟು	8

ಈ ಸಂಬಂಧದ ಖರ್ಚು ವೆಚ್ಚಗಳನ್ನು ಲೆಕ್ಕಶೀರ್ಷಿಕೆ "2052–00–090–0–23 ಅಧಿಕಾರಿ ವೇತನ ಸಮಿತಿ" – ಇದರಲ್ಲಿ ಭರಿಸತಕ್ಕದ್ದು ಹಾಗೂ ಈ ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿದಂತೆ ಹಣ ತೆಗೆಯುವ ಮತ್ತು ವಿತರಿಸುವ ಅಧಿಕಾರವನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಲೆಕ್ಕಪತ್ರ) ಇವರಿಗೆ ವಹಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್.ವಿಜಯಾನಂದ ಶರ್ಮ

ಪಿ.ಆರ್. 1595

ಸರ್ಕಾರದ ಅಧೀನ ಕಾರ್ಯದರ್ಶಿ

ಸಿ.ಆ.ಸು. ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಪ್ರವೀಣ್ ಕೆ.ಎನ್., ತಹಶೀಲ್ದಾರ್‌ರವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 33 ಎಡಿಇ 2011, ಬೆಂಗಳೂರು, ದಿನಾಂಕ: 28–06–2011

ಶ್ರೀ ಪ್ರವೀಣ್ ಕೆ.ಎನ್., ತಹಶೀಲ್ದಾರ್‌ರವರನ್ನು ದಿನಾಂಕ: 30–09–2010ರ ಸಂಖ್ಯೆ: ಕಂಇ 69 ಎಟಿಎಸ್ 2010ರ ಅಧಿಸೂಚನೆಯನ್ವಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದ್ದರು ಸಹ ಹಾಜರಾಗದೇ ಕರ್ತವ್ಯಕ್ಕೆ ಗೈರು ಹಾಜರಾಗಿರುವುದು ಕಂಡು ಬಂದಿರುತ್ತದೆ.

ಶ್ರೀ ಪ್ರವೀಣ್ ಕೆ.ಎನ್., ತಹಶೀಲ್ದಾರ್‌ರವರ ಈ ಕರ್ತವ್ಯವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1996ರ ಉಲ್ಲಂಘನೆಯಾಗಿರುವುದರಿಂದಲೂ ಮತ್ತು ಅವರು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಅವರ ಗೈರು ಹಾಜರಾತಿಯಿಂದ ಸರ್ಕಾರಿ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟು ಮಾಡುವ ಮೂಲಕ ಅತೀವ ಕರ್ತವ್ಯ ನಿರ್ಲಕ್ಷತೆಯನ್ನು ತೋರಿಸಿರುವುದರಿಂದ ಶಿಸ್ತಿನ ಕ್ರಮ ಕಾಯ್ದಿಟ್ಟು, ಅವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವುದು ಅವಶ್ಯಕವೆಂದು ಸರ್ಕಾರವು ಭಾವಿಸಿರುವುದರಿಂದಲೂ.

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಡಿ) ಪ್ರದತ್ತವಾದ ಅಧಿಕಾರವನ್ನು ಸರ್ಕಾರವು ಚಲಾಯಿಸಿ ಶ್ರೀ ಪ್ರವೀಣ್ ಕೆ.ಎನ್., ತಹಶೀಲ್ದಾರ್ ರವರನ್ನು ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಬಾಕಿ ಇಟ್ಟು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಮೂಲಕ ಅಮಾನತ್ತಿನಲ್ಲಿಡುತ್ತದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಪ್ರವೀಣ್ ಕೆ.ಎನ್., ತಹಶೀಲ್ದಾರ್‌ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 98ನೇ ನಿಯಮದಲ್ಲಿ ನಿಗದಿಪಡಿಸಿರುವಂತೆ ಜೀವನಾಧಾರ ಭತ್ಯೆಯನ್ನು ಪಡೆಯುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಪ್ರವೀಣ್ ಕೆ.ಎನ್., ತಹಶೀಲ್ದಾರ್‌ರವರು ಕೇಂದ್ರ ಸ್ಥಾನವನ್ನು ಸಕ್ಷಮ ಪ್ರಾಧಿಕಾರಿಯ ಅನುಮತಿ ಪಡೆಯದೇ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಬಾಲಕೃಷ್ಣಯ್ಯ

ಪಿ.ಆರ್. 1596

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಆರ್.ಎಂ. ನಾಟೀಕರ್, ಹಿಂದಿನ ತಹಶೀಲ್ದಾರ್, ಚಿತ್ತಾಪುರ ಮತ್ತಿತರ ವಿರುದ್ಧ ಜಂಟಿ ಇಲಾಖಾ ವಿಚಾರಣೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 57 ಎಡಿಇ 2008, ದಿನಾಂಕ: 02–02–2007.
2) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 57 ಎಡಿಇ 05, ದಿನಾಂಕ: 23–03–2009.
3) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 57 ಎಡಿಇ 05, ದಿನಾಂಕ: 27–01–2010.
4) ಸರ್ಕಾರದ ತಿದ್ದುಪಡಿ ಸಂಖ್ಯೆ: 57 ಎಡಿಇ 05, ದಿನಾಂಕ: 16–08–2010.
5) ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ ವಿಭಾಗ, ಗುಲ್ಬರ್ಗ ಇವರ ಪತ್ರ ಸಂಖ್ಯೆ:ಕಂ:ಪ್ರಾಆಗು/ಶಿಸ್ತು/65/2009–10, ದಿನಾಂಕ: 02–05–2011.

ಪ್ರಸ್ತಾವನೆ:

ಗುಲ್ಬರ್ಗ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ದೊಣ್ಣೂರ ಗ್ರಾಮದ ಸ.ನಂ. 16 ರಲ್ಲಿ 10 ಎಕರೆ–19 ಗುಂಟೆ ಜಮೀನನ್ನು ಭೂ ನ್ಯಾಯ ಮಂಡಳಿ ವತಿಯಿಂದ ಶ್ರೀಮತಿ ಕಮಲಾಬಾಯಿ ಎಂಬುವವರಿಗೆ ಮಂಜೂರಾಗಿದ್ದು, ಅದರಂತೆ ಅವರ ಹೆಸರಿನಲ್ಲಿ ಪಹಣಿ ಮತ್ತು ಅದರ ದಾಖಲೆಗಳನ್ನು

ಹೊಂದಿದ್ದರೂ ಸಹ ಸೇಡಂ ಉಪವಿಭಾಗಾಧಿಕಾರಿಯವರ ಆದೇಶದಂತೆ, ಈ ಜಮೀನಿನ ಮೊದಲನೇ ಮಾಲೀಕರಾದ ಶ್ರೀ ಅಣ್ಣಾರಾವ್ ತಂದೆ ಸದಾಶಿವಪ್ಪ ಎಂಬುವವರ ಹೆಸರಿಗೆ ಪಹಣಿ ಹಾಗೂ ಖಾತೆಯನ್ನು ಬದಲಾವಣೆ ಮಾಡಿರುತ್ತಾರೆಂಬ ಕಾರಣಕ್ಕಾಗಿ ಚಿತ್ತಾಪುರ ತಾಲ್ಲೂಕು ತಹಶೀಲ್ದಾರರಾದ ಶ್ರೀ ಆರ್.ಎಂ. ನಾಟೀಕರ್, ಕಂದಾಯ ನಿರೀಕ್ಷಕರು ಶ್ರೀ ಕಂಠೆಪ್ಪ ಹಾಗೂ ಶ್ರೀ ಸುಭಾಷ್‌ಚಂದ್ರ ಗ್ರಾಮಲೆಕ್ಕಿಗ ಇವರುಗಳ ಮೇಲೆ ಹೊರಿಸಿದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಈ ಇಲಾಖಾ ವಿಚಾರಣೆಯನ್ನು ಜರುಗಿಸಲು ಶ್ರೀ ಎಸ್.ಜಿ. ಪಲ್ಲೇದ, ನಿವೃತ್ತ ನ್ಯಾಯಾಧೀಶರು, ಗದಗ್ ಇವರ ಬದಲು ಶ್ರೀ ಪಿ.ಜಿ. ಕುಲಕರ್ಣಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೀದರ್ ಜಿಲ್ಲೆ ಇವರನ್ನು ಮೇಲೆ ಕ್ರ.ಸಂ. 1 ರಲ್ಲಿ ದಿನಾಂಕ: 02-02-2007 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಆದರೆ, ಮೇಲೆ ಓದಲಾದ ಕ್ರ.ಸಂ. (2) ರಲ್ಲಿ ಶ್ರೀ ಪಿ.ಜಿ. ಕುಲಕರ್ಣಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಯವರು ಬೀದರ್‌ನಲ್ಲಿ ವಾಸವಾಗಿರದೆ ಮಹಾರಾಷ್ಟ್ರದ ಪುಣೆಯಲ್ಲಿ ವಾಸವಾಗಿರುವುದರಿಂದ ಅವರ ಬದಲಿಗೆ ಶ್ರೀ ಎಸ್.ಎಸ್.ಪಾಟೀಲ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬಿಜಾಪುರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಗುಲ್ಬರ್ಗ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ 3 ರಲ್ಲಿ ಶ್ರೀ ಆರ್.ಎಂ. ನಾಟೀಕರ್, ಹಿಂದಿನ ತಹಶೀಲ್ದಾರ್ ಚಿತ್ತಾಪುರ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅಡಿಷನಲ್ ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ 4 ರ ತಿದ್ದುಪಡಿಯಲ್ಲಿ ಆರ್.ಎಂ. ನಾಟೀಕರ್, ಹಿಂದಿನ ತಹಶೀಲ್ದಾರ್ ಚಿತ್ತಾಪುರದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಅಡಿಷನಲ್ ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ ಎಂಬುದರ ಬದಲು ಅಡಿಷನಲ್ ಪ್ರಾದೇಶಿಕ ಆಯುಕ್ತರು (ಅಭಿವೃದ್ಧಿ ಮತ್ತು ಆಡಳಿತ), ಗುಲ್ಬರ್ಗ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ ಎಂದು ತಿದ್ದು ಓದಿಕೊಳ್ಳತಕ್ಕದ್ದು ಎಂದು ತಿದ್ದುಪಡಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ 5 ರಲ್ಲಿ ಶ್ರೀ ಆರ್.ಎಂ. ನಾಟೀಕರ, ಹಿಂದಿನ ತಹಶೀಲ್ದಾರ್ ಚಿತ್ತಾಪುರ ಹಾಗೂ ಮತ್ತಿತರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯಲ್ಲಿ ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ ವಿಭಾಗ, ಗುಲ್ಬರ್ಗ ಇವರನ್ನು ವಿಚಾರಣಾಧಿಕಾರಿಯೆಂದು ಹಾಗೂ ಅಪರ ಪ್ರಾದೇಶಿಕ ಆಯುಕ್ತರು (ಆಡಳಿತ ಮತ್ತು ಅಭಿವೃದ್ಧಿ) ಗುಲ್ಬರ್ಗ ವಿಭಾಗ, ಗುಲ್ಬರ್ಗ ಇವರನ್ನು ಮಂಡನಾಧಿಕಾರಿಯೆಂದು ನೇಮಿಸಲಾಗಿದೆ. ಸದರಿ ಆರೋಪಿತ ಅಧಿಕಾರಿಯವರು ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಸೇರಿದವರಾಗಿದ್ದು, ಅವರ ವಿರುದ್ಧ ಆಪಾದನೆಗಳ ಕುರಿತು ಇಲಾಖಾ ವಿಚಾರಣೆ ನಡೆಸಲು ಉಪ ವಿಭಾಗ ಮಟ್ಟದ ಅಧಿಕಾರಿಯವರನ್ನು ವಿಚಾರಣಾಧಿಕಾರಿಯೆಂದು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಯವರನ್ನು ಮಂಡನಾಧಿಕಾರಿಯೆಂದು ನೇಮಿಸುವುದು ಸೂಕ್ತವೆಂದು ಭಾವಿಸಿ ಪ್ರಸ್ತುತ ಪ್ರಕರಣದಲ್ಲಿ ಸಹಾಯಕ ಆಯುಕ್ತರು ಗುಲ್ಬರ್ಗ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ತಹಶೀಲ್ದಾರ್ ಗುಲ್ಬರ್ಗ ಇವರನ್ನು ಮಂಡನಾಧಿಕಾರಿಯೆಂದು ನೇಮಿಸಬೇಕೆಂದು ಕೋರಲಾಗಿದೆ.

ಆದ್ದರಿಂದ, ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ಬದಲಾವಣೆ ಕೋರಿಕೆಯನ್ನು ಸರ್ಕಾರವು ಪರಿಗಣಿಸಿ ಸಹಾಯಕ ಆಯುಕ್ತರು ಗುಲ್ಬರ್ಗ ಇವರನ್ನು ವಿಚಾರಣಾಧಿಕಾರಿಗಳೆಂದು ಹಾಗೂ ತಹಶೀಲ್ದಾರ್ ಗುಲ್ಬರ್ಗ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 57 ಎಡಿಇ 2005, ಬೆಂಗಳೂರು, ದಿನಾಂಕ 28-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಆರ್.ಎಂ. ನಾಟೀಕರ್, ಹಿಂದಿನ ತಹಶೀಲ್ದಾರ್ ಚಿತ್ತಾಪುರ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸಹಾಯಕ ಆಯುಕ್ತರು, ಗುಲ್ಬರ್ಗ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ತಹಶೀಲ್ದಾರ್ ಗುಲ್ಬರ್ಗ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಉಳಿದ ಅಂಶಗಳು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 57 ಎಡಿಇ 2005, ದಿನಾಂಕ: 23-03-2009 ರಲ್ಲಿರುವಂತೆ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಬಾಲಕೃಷ್ಣಯ್ಯ

ಪಿ.ಆರ್. 1597

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ: 1) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ:ಮುಮಕಾ/ 3084/2010, ದಿನಾಂಕ: 02-06-2011.

2) ಬಿಜಾಪುರ ಜಿಲ್ಲಾಧಿಕಾರಿಗಳ ಪತ್ರ ಸಂ:ಆರ್.ಬಿ/ಸಿಎಎಲ್/ಸಿಆರ್/8/2011-12, ದಿನಾಂಕ: 09-06-2011.

3) ಧಾರವಾಡ ಜಿಲ್ಲಾಧಿಕಾರಿಗಳ ಪತ್ರ ಸಂ: ಸಿಎಎಲ್/ಸಿಆರ್/131/2010-11, ದಿನಾಂಕ: 02-06-2011.

ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಟಿಪ್ಪಣಿ ಮತ್ತು ಬಿಜಾಪುರ ಹಾಗೂ ಧಾರವಾಡ ಜಿಲ್ಲಾಧಿಕಾರಿಗಳ ಮೇಲೆ ಓದಲಾದ (1) ರಿಂದ (3)ರ ಟಿಪ್ಪಣಿ ಮತ್ತು ಪತ್ರಗಳಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ರಾಯಚೂರು ಜಿಲ್ಲೆಯಲ್ಲಿ ಆಸರೆ ಮನೆಗಳ ನಿರ್ಮಾಣಕ್ಕಾಗಿ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ಸದರಿ ಬಾಬ್ತು ರೂ. 27,16,000/- ಮತ್ತು ಬಿಜಾಪುರ ಜಿಲ್ಲೆಯಲ್ಲಿ ಆಸರೆ ಮನೆಗಳ ನಿರ್ಮಾಣಕ್ಕಾಗಿ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ

ಪಡೆಯಲಾಗಿದ್ದು, ಸದರಿ ಬಾಬ್ತು ರೂ. 1,20,896/– ಹಾಗೂ ಧಾರವಾಡ ಜಿಲ್ಲೆಯಲ್ಲಿ ಆಸರೆ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಮತ್ತು ವಾಟರ್ ಟ್ಯಾಂಕರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ರೂ. 8,75,351/–ಗಳು ಒಟ್ಟು ರೂ. 37,12,247/–ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ 28–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ವಾಟರ್ ಟ್ಯಾಂಕರ್ ಬಾಬ್ತನ್ನು ರಾಯಚೂರು, ಬಿಜಾಪುರ ಮತ್ತು ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲಾಗಿದೆ.

ಕ್ರ.ಸಂ.	ಜಿಲ್ಲೆಗಳು	ಬಿಡುಗಡೆ ಮಾಡಿದ ಮೊತ್ತ (ರೂ)
1	ರಾಯಚೂರು	27,16,000/–
2	ಬಿಜಾಪುರ	1,20,896/–
3	ಧಾರವಾಡ	8,75,351/–
	ಒಟ್ಟು	37,12,247/–

(ಒಟ್ಟು ರೂಪಾಯಿ ಮೂವತ್ತೇಳು ಲಕ್ಷದ ಹನ್ನೆರಡು ಸಾವಿರದ ಇನ್ನೂರ ನಲವತ್ತೇಳು ಮಾತ್ರ)

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235–00–111–0–02 **'Public Contributions to the Calamity Relief'** ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಬಾಲಕೃಷ್ಣಯ್ಯ

ಪಿ.ಆರ್. 1598

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ವಿ.ನಿ & ಸೇವೆಗಳು–2)

ಕಂದಾಯ ಸಚಿವಾಲಯ

ವಿಷಯ : ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ಸ.ನಂ. 40ರಲ್ಲಿ 100.00 ಜಮೀನನ್ನು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ಇವರ ಪತ್ರ ಸಂಖ್ಯೆ:ರಾಜಿಕ/ಎಲ್ಎನ್ ಡಿ/ಸಿಆರ್/232/10–11, ದಿ. 13.09.2010.

ಪ್ರಸ್ತಾವನೆ:

ಮೇಲೆ ಓದಲಾದ ದಿ: 13.09.2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ಸ.ನಂ. 40ರಲ್ಲಿ 100.00 ಎಕರೆ ಹಾಗೂ ಕುದೂರು ಹೋಬಳಿ, ಸೂರಪ್ಪನಹಳ್ಳಿ ಗ್ರಾಮದ ಸ.ನಂ. 40ರಲ್ಲಿ 30.00 ಎಕರೆ, ಒಟ್ಟು 130.00 ಎಕರೆ ಜಮೀನನ್ನು ಸಂಸ್ಕೃತ ವಿಶ್ವ ವಿದ್ಯಾಲಯಕ್ಕೆ ಮಂಜೂರು ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

2) ಸದರಿ ವಿಷಯದ ಕುರಿತು ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) ಇವರು ದಿ. 29.10.2010ರ ಅನಧಿಕೃತ ಟಿಪ್ಪಣಿಯಲ್ಲಿ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ಸ.ನಂ. 40ರಲ್ಲಿ 100.00 ಎಕರೆ ಹಾಗೂ ಕುದೂರು ಹೋಬಳಿ, ಸೂರಪ್ಪನಹಳ್ಳಿ ಗ್ರಾಮದ ಸ.ನಂ. 40ರಲ್ಲಿ 30.00 ಎಕರೆ, ಒಟ್ಟು 130.00 ಎಕರೆ ಜಮೀನನ್ನು ಸಂಸ್ಕೃತ ವಿಶ್ವ ವಿದ್ಯಾಲಯಕ್ಕೆ ಉಚಿತವಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

3) ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ವರದಿಯನ್ವಯ ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ಸ.ನಂ. 40ರಲ್ಲಿ 225.36 ಎಕರೆ ಜಮೀನಿದ್ದು, ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಈ ಹಿಂದೆ 77.26 ಎಕರೆ ಜಮೀನು ಭೂ ಮಂಜೂರಾಗಿದ್ದು, ಖಾತೆ ಪಹಣಿಯಾಗಿದ್ದು, ಇನ್ನುಳಿದ ಬಾಕಿ ಪ್ರದೇಶದಲ್ಲಿ ಸಾಮಾಜಿಕ ಅರಣ್ಯ ಇಲಾಖೆಯವರು ನೀಲಗಿರಿ ಹಾಗೂ ಹರಕ್ಯುಲಸ್ ಗಿಡಗಳನ್ನು ಬೆಳೆಸಿದ್ದು, ಸದರಿ ಜಮೀನು ಅರಣ್ಯ ಇಲಾಖೆಯವರಿಗೆ ಮಂಜೂರಾಗಿರುವುದಿಲ್ಲ. ಸದರಿ ಉಳಿಕೆ ಜಮೀನಿನ ಪೈಕಿ 100.00 ಎಕರೆ ಜಮೀನು ಹಾಗೂ ಕುದೂರು ಹೋಬಳಿ, ಸೂರಪ್ಪನಹಳ್ಳಿ ಗ್ರಾಮದ ಸ.ನಂ.40ರಲ್ಲಿ ಒಟ್ಟು ವಿಸ್ತೀರ್ಣ 84.39 ಎಕರೆ ಇದ್ದು, ಸರ್ಕಾರಿ ಮುಫತ್ತು ಗೋಮಾಳ ಜಮೀನಾಗಿದ್ದು, ಈ ಜಮೀನಿನ ಪೈಕಿ 51.29 ಎಕರೆ ಜಮೀನು ಮಂಜೂರಾಗಿ ಖಾತೆ ಪಹಣಿಯಾಗಿದ್ದು, ಇನ್ನುಳಿದ 33.14 ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ ಹಾಗೂ ಹರಕ್ಯುಲಸ್ ಗಿಡಗಳನ್ನು ಬೆಳೆಸಿದ್ದು, ಸದರಿ ಜಮೀನು ಅರಣ್ಯ ಇಲಾಖೆಗೆ ಮಂಜೂರಾಗಿರುವುದಿಲ್ಲ ಮತ್ತು ಇವರು ಅನಧಿಕೃತವಾಗಿ ಮರಗಳನ್ನು ಬೆಳೆಸಿರುತ್ತಾರೆ ಎಂದು ವರದಿ ಮಾಡಿರುತ್ತಾರೆ. ಈ ಗ್ರಾಮದಲ್ಲಿ 110 ರಾಸುಗಳಿದ್ದು, ಇವುಗಳನ್ನು ಅವರವರ ಸ್ವಂತ ಜಮೀನುಗಳಲ್ಲಿ ಮೇಯಿಸಿಕೊಳ್ಳುತ್ತಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.

4) ಕರ್ನಾಟಕ ಭೂ ಮಂಜುರಾತಿ ನಿಯಮಗಳು 1969ರ ನಿಯಮ 20(1)(ಸಿ) ರನ್ವಯ ಸ್ವಾಯತ್ತ ಸಂಸ್ಥೆಗಳಿಗೆ ಶೇ.50ರಷ್ಟು ಮಾರುಕಟ್ಟೆ ದರ ವಿಧಿಸಿ ಮಂಜೂರು ಮಾಡಬೇಕಾಗಿರುತ್ತದೆ. ಸಂಸ್ಕೃತ ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಸದರಿ ಸಂಸ್ಥೆಗೂ ಸಹ ಶೇ. 50 ರಷ್ಟು ಮಾರುಕಟ್ಟೆ ದರ ವಿಧಿಸಿ ಮಂಜೂರು ಮಾಡಬೇಕಾಗುತ್ತದೆ. ಆದರೆ ಸಂಸ್ಕೃತ ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿದ್ದರೂ ಕೂಡ

ಸಂಸ್ಕೃತ ಭಾಷೆಯನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನೊಳಗೊಂಡಿರುವುದರಿಂದ ಸದರಿ ಸಂಸ್ಥೆಗೆ ಪ್ರಚಲಿತ ಮಾರುಕಟ್ಟೆ ದರದ ಶೇ. 50ರಷ್ಟು ವಿಧಿಸುವ ಬದಲು ಮಾರ್ಗಸೂಚಿ ಬೆಲೆಯ ಶೇ. 25ರಷ್ಟನ್ನು ವಿಧಿಸಿ ಮಂಜೂರು ಮಾಡಲು ಹಾಗೂ ಸದರಿ ಸಂಸ್ಥೆಗೆ 130 ಎಕರೆ ಜಮೀನು ಬದಲು 100 ಎಕರೆ ಜಮೀನನ್ನು ಮಂಜೂರು ಮಾಡಲು ತೀರ್ಮಾನಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 889 ಎಲ್‌ಜಿಬಿ 2010, ಬೆಂಗಳೂರು, ದಿನಾಂಕ 27–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಮನಗರ ಜಿಲ್ಲೆ, ಮಾಗಡಿ ತಾಲ್ಲುಕು, ತಿಪ್ಪಸಂದ್ರ ಗ್ರಾಮದ ಸ.ನಂ. 40ರಲ್ಲಿನ 242.22 ಎ/ಗುಂ ಸರ್ಕಾರಿ ಗೋಮಾಳ ಜಮೀನಿನ ಪೈಕಿ 100.00 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಸದರಿ ಜಮೀನಿನ ಮಾರ್ಗಸೂಚಿ ಬೆಲೆಯ ಶೇ 25ರಷ್ಟನ್ನು ವಿಧಿಸಿ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 336 ವೆಚ್ಚ–7/2011, ದಿ. 21.04.2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಇ. ಈಶ್ವರ ನಾಯಕ್
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ)

ಪಿ.ಆರ್. 1599

ಕಂದಾಯ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ ಹೆಚ್ ಕಲ್ಪನಹಳ್ಳಿ ಗ್ರಾಮದ ಸ.ನಂ. 44ಎ ಮತ್ತು 45ರಲ್ಲಿ 14–00 ಎಕರೆ ಜಮೀನನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಮಂಜೂರು ಮಾಡಿರುವ ಜಮೀನಿಗೆ ವಿಧಿಸಲಾಗಿರುವ ಕಿಮ್ಮತ್ತನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ:66:ಎಲ್‌ಜಿಸಿ:99, ದಿ: 3–1–2002
2) ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ: ಸಿಆರ್:536/98/99 ದಿ: 24–6–2005
3) ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ:64:ಎಲ್‌ಜಿಸಿ:2005, ದಿ: 12–9–2005
4) ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ:13:ಎಲ್‌ಜಿಸಿ:2006, ದಿ: 3–2–2007
5) ನಿರ್ವಾಹಕ ನಿರ್ದೇಶಕರು, ಶಿವಮೊಗ್ಗ ಹಾಲು ಉತ್ಪಾದಕರ ಸಂಘ ಒಕ್ಕೂಟ ಸಮಿತಿ ಶಿವಮೊಗ್ಗ ರವರ ಪತ್ರ ಸಂಖ್ಯೆ:ಶಿಹಾಜ/ಇಎಸ್‌ಡಿ–2/ಹೆಚ್.ಕ.203/ಡಿ/5988/2009–10 ದಿನಾಂಕ: 19–11–2009

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ದಾವಣಗೆರೆ ಜಿಲ್ಲೆ ಹೆಚ್. ಕಲ್ಪನಹಳ್ಳಿ ಗ್ರಾಮದ ಸ.ನಂ. 44ಎ ಮತ್ತು 45ರಲ್ಲಿ 14–00 ಎಕರೆ ಜಮೀನನ್ನು ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟ ದಾವಣಗೆರೆ ಇವರಿಗೆ ಎಕರೆ ಒಂದಕ್ಕೆ ರೂ. 30,000/– (ರೂಪಾಯಿ ಮೂವತ್ತು ಸಾವಿರಗಳು)ಗಳು ಹಾಗೂ ನಿಯಮಾನುಸಾರ ಇತರೆ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಲು ಸರ್ಕಾರದ ಅನುಮತಿ ನೀಡಲಾಗಿತ್ತು. ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟದವರು ನಿಗದಿತ ಕಾಲಾವಧಿಯೊಳಗೆ ಸದರಿ ಜಮೀನನ್ನು ಉದ್ದೇಶಿತ ಯೋಜನೆಗೆ ಬಳಸಿಕೊಳ್ಳದೆ ಬೀಳು ಬಿಟ್ಟಿರುವುದಾಗಿ ಜಿಲ್ಲಾಧಿಕಾರಿಗಳು ದಾವಣಗೆರೆ ರವರು ಓದಲಾದ (2)ರ ದಿನಾಂಕ: 24–6–2005ರ ಪತ್ರದಲ್ಲಿ ಸರ್ಕಾರಕ್ಕೆ ವರದಿ ಮಾಡಿದ್ದ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳ ಶಿಫಾರಸ್ಸಿನಂತೆ ಸದರಿ ಮಂಜೂರಾತಿಯನ್ನು ರದ್ದುಪಡಿಸಲು ಮೇಲೆ ಓದಲಾದ (3)ರ ಸರ್ಕಾರದ ದಿನಾಂಕ: 12–9–2005ರ ಸರ್ಕಾರದ ಪತ್ರದಲ್ಲಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿತ್ತು. ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಗಳು ದಾವಣಗೆರೆ ಇವರು ಸದರಿ ಜಮೀನಿನ ಮಂಜೂರಾತಿಯ ಆದೇಶವನ್ನು ರದ್ದುಪಡಿಸಿರುತ್ತಾರೆ.

ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟದವರು ಸದರಿ ಜಮೀನನ್ನು ಮಂಜೂರು ಮಾಡುವಂತೆ ಕೋರಿಕೊಂಡಿದ್ದರ ಈ ಹಿನ್ನೆಲೆಯಲ್ಲಿ ಸದರಿ 14–00 ಎಕರೆ ಜಮೀನನ್ನು ಪ್ರಚಲಿತ ಮಾರುಕಟ್ಟೆ ದರ ಹಾಗೂ ನಿಯಮಾನುಸಾರ ಇತರೆ ಶುಲ್ಕಗಳನ್ನು ವಿಧಿಸಿ ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟಕ್ಕೆ ಮಂಜೂರು ಮಾಡಲು ಮೇಲೆ ಓದಲಾದ (4) ದಿನಾಂಕ: 3–2–2007ರ ಪತ್ರದಲ್ಲಿ ಸರ್ಕಾರದ ಅನುಮತಿ ನೀಡಲಾಗಿರುತ್ತದೆ. ಮೇಲೆ ಓದಲಾದ (5)ರ ಪತ್ರದಲ್ಲಿ ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟ ಸಮಿತಿ ಶಿವಮೊಗ್ಗ ರವರು ಸದರಿ ಜಮೀನಿಗೆ ಪ್ರಚಲಿತ ಮಾರುಕಟ್ಟೆ ದರ ವಿಧಿಸುವ ಬದಲು ಈ ಹಿಂದೆ ಎಕರೆ ರೂ. 30,000 (ಮೂವತ್ತು ಸಾವಿರ ಮಾತ್ರ) ಮಂಜೂರು ಮಾಡಿರುವುದನ್ನು ಊರ್ಜಿತಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ಹಾಗೂ ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟ ಸಮಿತಿ ಶಿವಮೊಗ್ಗ ರವರ ಪ್ರಸ್ತಾವನೆಯನ್ನು ಮರು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 32 ಎಲ್‌ಜಿಸಿ 2009 ಬೆಂಗಳೂರು, ದಿನಾಂಕ: 27–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ಸಹಕಾರಿ ಹಾಲು ಒಕ್ಕೂಟ ಇವರಿಗೆ ದಾವಣಗೆರೆ ಜಿಲ್ಲೆ, ಹೆಚ್. ಕಲ್ಪನಹಳ್ಳಿ ಗ್ರಾಮದ ಸ.ನಂ. 44ಎ ಮತ್ತು 45ರಲ್ಲಿ 14–00 ಎಕರೆ ಜಮೀನನ್ನು ಪ್ರಚಲಿತ ಮಾರುಕಟ್ಟೆ ದರ ಹಾಗೂ ನಿಯಮಾನುಸಾರ ಇತರ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಿರುವ ಆದೇಶವನ್ನು ಮಾರ್ಪಡಿಸಿ ಎಕರೆ ಒಂದಕ್ಕೆ ರೂ. 30,000/–(ರೂಪಾಯಿ ಮೂವತ್ತು ಸಾವಿರಗಳು ಮಾತ್ರ)ಗಳು ಹಾಗೂ ನಿಯಮಾನುಸಾರ ಇತರ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂಜೂರಾತಿ–3)

ಪಿ.ಆರ್. 1600

ಕಂದಾಯ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕು-ಕುರುಗೋಡು ಮತ್ತು ಲಕ್ಷ್ಮೀಪುರ ಗ್ರಾಮಗಳಲ್ಲಿ ಪವನ ವಿದ್ಯುತ್ ಘಟಕ ಸ್ಥಾಪನೆ ಮಾಡಲು ಮೆ॥ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ನೀಡುವ ಬಗ್ಗೆ.

ಓದಲಾಗಿದೆ : 1. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಪತ್ರ ಸಂಖ್ಯೆ:ಕಂ/ಭೂಮಿ/162/09-10, ದಿನಾಂಕ 27-10-2010.

2. ಸುತ್ತೋಲೆ ಸಂಖ್ಯೆ: ಆರ್‌ಡಿ:78:ಎಲ್‌ಜಿಪಿ:2009, ದಿನಾಂಕ 4-1-2011

ಪ್ರಸ್ತಾವನೆ :

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರು ಮೇಲೆ ಓದಲಾದ ದಿನಾಂಕ 27-10-2010ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು ಕುರುಗೋಡು ಮತ್ತು ಲಕ್ಷ್ಮೀಪುರ ಗ್ರಾಮಗಳ ವಿವಿಧ ಸ.ನಂ.ಗಳ ಒಟ್ಟು ವಿಸ್ತೀರ್ಣ 114.70 ಎಕರೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ॥ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು ರವರಿಗೆ ಉಪಗುತ್ತಿಗೆ ನೀಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

2) ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಮೆ॥ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಕುರುಗೋಡು ಮತ್ತು ಲಕ್ಷ್ಮೀಪುರ ಗ್ರಾಮಗಳ ಜಮೀನು ಈ ಕೆಳಕಂಡಂತೆ ಇರುತ್ತದೆ.

ಗ್ರಾಮ	ಸ.ನಂ.	ವಿಸ್ತೀರ್ಣ	ವರ್ಗೀಕರಣ
ಕುರುಗೋಡು	666	63.10	ಗುಡ್ಡ ಪರಂಬೋಕು
ಕುರುಗೋಡು	32	14.05	ಗುಡ್ಡ ಪರಂಬೋಕು
ಕುರುಗೋಡು	615ಬಿ/2	00.47	ರಸ್ತೆ ಪರಂಬೋಕು
ಕುರುಗೋಡು	472	20.11	ಕೊಂಡ
ಕುರುಗೋಡು	475	00.32	ಕುಂಟೆ ಪರಂಬೋಕು
ಲಕ್ಷ್ಮೀಪುರ	76	16.00	ಗುಡ್ಡ ಪರಂಬೋಕು
	ಒಟ್ಟು	114.70	

3) ಮೇಲ್ಕಂಡ ಜಮೀನುಗಳು ಗುತ್ತಿಗೆ ನೀಡಲು ಲಭ್ಯವಿದ್ದು, ಈ ಜಮೀನುಗಳಲ್ಲಿ ಗಾಳಿಯಂತ್ರವನ್ನು ಸ್ಥಾಪಿಸಲು ಗ್ರಾಮಸ್ಥರಿಂದ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ, ಗಾಳಿಯಂತ್ರ ಅಳವಡಿಸುವ ಉದ್ದೇಶಕ್ಕೆ ಸದರಿ ಜಮೀನು ಸೂಕ್ತವಾಗಿರುತ್ತದೆ ಎಂದು ತಿಳಿಸಿ ಕುರುಗೋಡು ಗ್ರಾಮದ ಜಮೀನಿನ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ ರೂ. 41,494/- ಹಾಗೂ ಲಕ್ಷ್ಮೀಪುರ ಗ್ರಾಮದ ಜಮೀನಿನ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ ರೂ. 55,269/- ಎಂಬುದಾಗಿ ವರದಿ ಮಾಡಿದ್ದಾರೆ.

4) ಮೆ॥ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು ಇವರಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು ಗುತ್ತಿಗೆ ಆಧಾರದ ಮೇಲೆ ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಮೇಲ್ಕಂಡ 2 ಗ್ರಾಮದ ಜಮೀನುಗಳು ಗುಡ್ಡ ಪರಂಬೋಕು, ರಸ್ತೆ ಪರಂಬೋಕು, ಕೊಂಡ, ಕುಂಟೆ ಪರಂಬೋಕು ಎಂಬುದಾಗಿ ವರ್ಗೀಕೃತಗೊಂಡಿದ್ದು 'ಬಿ' ಖರಾಬು ಜಮೀನುಗಳಾಗಿರುತ್ತದೆ. ಸದರಿ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡುತ್ತಿರುವುದರಿಂದ ಭೂ ಕಂದಾಯ ಕಾಯ್ದೆ ಕಾಲಂ 68(1)ರಂತೆ 'ಬಿ' ಖರಾಬು ಶೀರ್ಷಿಕೆಯಿಂದ ವಿರಹಿತಗೊಳಿಸುವ ಅವಶ್ಯಕತೆ ಕಂಡುಬರುವುದಿಲ್ಲ ಅಲ್ಲದೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದನಾ ಘಟಕಕ್ಕೆ ಸರ್ಕಾರಿ ಜಮೀನು ಗುತ್ತಿಗೆ ಮೇಲೆ ಕೊಡುತ್ತಿರುವುದರಿಂದ, 'ಬಿ' ಖರಾಬು ಜಮೀನುಗಳ ಲಕ್ಷಣಗಳನ್ನು ಹಾಗೆಯೇ ಉಳಿಸಿಕೊಂಡು ಈ ಸರ್ಕಾರಿ ಜಮೀನುಗಳಿಗೆ ಯಾವುದೆ ರೀತಿ ಹಾನಿಯಾಗದಂತೆ ಮತ್ತು ಒತ್ತುವರಿಯಾಗದಂತೆ ಸಂರಕ್ಷಿಸಿಗೊಂಡು ಗಾಳಿಯಂತ್ರ ಘಟಕ ಸ್ಥಾಪನೆ ಸಲುವಾಗಿ ಮಂಜೂರು ಮಾಡಲು ತೀರ್ಮಾನಿಸಿದೆ.

5) ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಕಂದಾಯ ಇಲಾಖೆಯ ಸುತ್ತೋಲೆಯಲ್ಲಿ ದಿನಾಂಕ 3-11-2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇಂಧನ ಇಲಾಖೆಯ ಕೋರಿಕೆಯಂತೆ ಇನ್ನು ಮುಂದೆ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಮೂಲಕ ಮಂಜೂರು ಮಾಡುವ ಬದಲಾಗಿ ನೇರವಾಗಿ ಯೋಜನೆ ಕೈಗೊಳ್ಳುವ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ನಿರ್ಣಯಿಸಲಾಗಿರುತ್ತದೆ.

ಬಳ್ಳಾರಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 83 ಎಲ್‌ಜಿಇ 2010, ಬೆಂಗಳೂರು, ದಿನಾಂಕ : 29-6-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲೂಕು, ಕುರುಗೋಡು ಗ್ರಾಮದ ಸ.ನಂ. 666ರಲ್ಲಿ 63.10 ಎಕರೆ ಹಾಗೂ ಸ.ನಂ. 32ರಲ್ಲಿ 14.05 ಎಕರೆ, ಸ.ನಂ. 615ಬಿ/2ರಲ್ಲಿ 00.47 ಎಕರೆ ಸ.ನಂ. 472ರಲ್ಲಿ 20.11 ಎಕರೆ ಸ.ನಂ. 475ರಲ್ಲಿ 00.32 ಎಕರೆ ಮತ್ತು ಲಕ್ಷ್ಮೀಪುರ ಗ್ರಾಮದ ಸ.ನಂ. 76ರಲ್ಲಿ 16-00 ಎಕರೆ ಹೀಗೆ ಒಟ್ಟು 114.70 ಎಕರೆ ಸರ್ಕಾರಿ 'ಬಿ' ಖರಾಬು ಜಮೀನುಗಳ ಲಕ್ಷಣಗಳನ್ನು ಹಾಗೇ ಉಳಿಸಿಕೊಂಡು ಈ ಸರ್ಕಾರಿ ಜಮೀನುಗಳಿಗೆ ಯಾವುದೇ ಹಾನಿಯಾಗದಂತೆ ಮತ್ತು ಒತ್ತುವರಿಯಾಗದಂತೆ ಸಂರಕ್ಷಿಸಿಕೊಂಡು, ಪ್ರಚಲಿತ ಮಾರುಕಟ್ಟೆ ದರದ ಶೇ. 10 ರಷ್ಟು ಗುತ್ತಿಗೆ ದರ ಹಾಗೂ ಪ್ರತಿ 2 ವರ್ಷಗಳಿಗೊಮ್ಮೆ ಶೇ. 10 ರಷ್ಟು ಗುತ್ತಿಗೆ ದರ ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19(3)(ಬಿ)ರನ್ವಯ ಪ್ರಥಮವಾಗಿ 10 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಉದ್ದೇಶಕ್ಕಾಗಿ ಮೆ॥ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ನೀಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:478:ವೆಚ್ಚ-7:2011, ದಿನಾಂಕ 15-6-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಜೆ. ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿ.ಆರ್. 1601

ಜಲಸಂಪನ್ಮೂಲ ಸಚಿವಾಲಯ

ವಿಷಯ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು ಕೂಚನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಮುಸದ/ಲೆಶಾಖೆ/ಲೆಸ–1/3/ಭೂಸ್ವಾಧೀನ/10–11/367, ದಿನಾಂಕ 22–02–2011.

ಪ್ರಸ್ತಾವನೆ :

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು ಕೂಚನಪಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕೂಚನಪಳ್ಳಿ ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಮೈಸೂರು ಹೆಚ್ಚುವರಿ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ಆದೇಶದಂತೆ ಹೆಚ್ಚುವರಿ ಪರಿಹಾರ ಮೊತ್ತ ರೂ. 9,15,381–00ಗಳನ್ನು ಬಿಡುಗಡೆ ಮಾಡಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ ಓದಲಾದ ದಿನಾಂಕ 22–02–11ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 09–01–98ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ದಿನಾಂಕ 30–10–99 ರಂದು ರಚಿಸಿದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಮೈಸೂರು ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ರೂ. 1,74,329/– ಗಳನ್ನು ನಿಗದಿಪಡಿಸಿದೆ. ಅದರಂತೆ, ಪಾವತಿಸಬೇಕಾದ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ.ಸಂ.	ಎಲ್‌ಎಸಿ ಸಂಖ್ಯೆ	ಇ.ಪಿ. ಸಂಖ್ಯೆ	ಕೂಚನಪಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
1	153/01	28/06	22/1	1–00	561306
2	237/01	575/06	32/1A	0–24	336784
				ಒಟ್ಟು	898090

ಸಿವಿಲ್ ನ್ಯಾಯಾಲಯದ ಎಲ್.ಎ.ಸಿ. ಸಂಖ್ಯೆ:153/01ರ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯ ಪತ್ರ ಸಂಖ್ಯೆ: ಲಾ 1640 ಎಲ್‌ಎಸ್‌ಎಂ 2005, ದಿನಾಂಕ 29–12–06ರಲ್ಲಿ ಅಭಿಪ್ರಾಯ ನೀಡಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 12 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 30–6–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು ಕೂಚನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕೂಚನಹಳ್ಳಿ ಗ್ರಾಮದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ಆದೇಶದಂತೆ ರೂ. 8,98,090–00 ಗಳನ್ನು (ಎಂಟು ಲಕ್ಷದ ತೊಂಬತ್ತೆಂಟು ಸಾವಿರದ ತೊಂಭತ್ತು ರೂ.ಗಳು ಮಾತ್ರ)ಗಳ ಪರಿಹಾರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನು ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 8,98,090/–ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1602

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಹಾಸನ ಜಿಲ್ಲೆ ಬೇಲೂರು–ಹಳೇಬೀಡು ಗ್ರಾಮಗಳನ್ನೊಳಗೊಂಡಂತೆ ಒಟ್ಟು 36 ಗ್ರಾಮಗಳನ್ನು ಸೇರಿಸಿ ಒಟ್ಟಾಗಿ ಒಂದೇ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸುವ ಬಗ್ಗೆ.

ಓದಲಾಗಿದೆ :
1. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಹಾಸನ ಇವರ ಪತ್ರ ಸಂಖ್ಯೆ: ನಗ್ರಾಯೋಸನಿಹಾ/ಹಳೇಬೀಡು ಸ್ಥಯೋಪ್ರಾ/03/2007–08, ದಿನಾಂಕ 29–12–2010.
2. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಇವರ ಕಡತ ಸಂಖ್ಯೆ: ನಅಇ/75/ಅಪ್ರಾ/2010–11, ದಿನಾಂಕ ...01–2011.

ಪ್ರಸ್ತಾವನೆ :

ಮೇಲೆ ಓದಲಾದ ಉಲ್ಲೇಖ (1)ರ ಪತ್ರದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಹಾಸನ ಇವರು ಬೇಲೂರು–ಹಳೇಬೀಡು ಪಟ್ಟಣದ 36 ಗ್ರಾಮಗಳನ್ನು ಸೇರಿಸಿ ಒಟ್ಟಾಗಿ ಒಂದೇ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ, ಬೇಲೂರು ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು, ಹಾಸನದಿಂದ 32 ಕಿ.ಮೀ. ದೂರದಲ್ಲಿದೆ ಹಾಗೂ ಹಳೇಬೀಡು ಪಟ್ಟಣವು ಹೋಬಳಿ ಕೇಂದ್ರವಾಗಿದ್ದು, ಹಾಸನದಿಂದ 29 ಕಿ.ಮೀ. ದೂರದಲ್ಲಿದೆ. ಬೇಲೂರು ಪಟ್ಟಣದ ಪ್ರಸಿದ್ಧ ಹೊಯ್ಸಳ ರಾಜರು 12ನೇ ಶತಮಾನದಲ್ಲಿ ನಿರ್ಮಿಸಿದ ಪುರಾತನ ದೇವಾಲಯ ಹಾಗೂ ಸ್ಮಾರಕಗಳಿದ್ದು, ಶಿಲ್ಪಕಲೆಗಳಿಗೆ ಪ್ರಸಿದ್ಧವಾಗಿದ್ದು, ಇಲ್ಲಿನ ಚನ್ನಕೇಶವ ಸ್ವಾಮಿ ದೇವಾಲಯ ಹಾಗೂ ಶಿಲಾಶಾಸನಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಲಾಗಿರುತ್ತದೆ. ಅದರಂತೆ ಹಳೇಬೀಡು ಪಟ್ಟಣದಲ್ಲಿ 12ನೇ ಶತಮಾನದಲ್ಲಿ ಹೊಯ್ಸಳರವರು ನಿರ್ಮಿಸಿದ ಶ್ರೀ ಹೊಯ್ಸಳೇಶ್ವರ ದೇವಸ್ಥಾನ, ಶ್ರೀ ಕೇದಾರೇಶ್ವರ ದೇವಸ್ಥಾನ, ಶ್ರೀ ಆದಿನಾಥ ಬಸದಿ, ಶಾಂತಿನಾಥ ಬಸದಿ ಹಾಗೂ ಪಾರ್ಶ್ವನಾಥ ಬಸದಿಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಹಾಗೂ ವೀರಭದ್ರ ದೇವಸ್ಥಾನವನ್ನು ರಾಜ್ಯ ಸ್ಮಾರಕವೆಂದು ಘೋಷಿಸಲಾಗಿರುತ್ತದೆ.

ಈ ಎರಡು ಪಟ್ಟಣಗಳು ಪ್ರಸಿದ್ಧ ಪ್ರವಾಸಿ ಕೇಂದ್ರಗಳಾಗಿರುವುದರಿಂದ ಸ್ಥಳೀಯ ಪ್ರದೇಶ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ಇವರುಗಳಿಗೆ ವ್ಯವಸ್ಥಿತವಾಗಿ ಅಗತ್ಯ ಮೂಲಸೌಕರ್ಯಗಳನ್ನು/ಸವಲತ್ತುಗಳನ್ನು ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಮೇಲೆ ಓದಲಾದ (2)ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, 4(ಎ)(3)ರನ್ವಯ ಬೇಲೂರು ಹಳೇಬೀಡು ಹಾಗೂ 36 ಗ್ರಾಮಗಳನ್ನೊಳಗೊಂಡು ಒಟ್ಟಾಗಿ ಒಂದೇ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿ ವಿಸ್ತರಿಸಬೇಕಾಗಿದೆ. ಸದರಿ ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸಬೇಕಾಗಿದೆ. ದಿನಾಂಕ 16–08–2010ರಂದು ಯುನೆಸ್ಕೋ ಪ್ರತಿನಿಧಿಗಳೊಡನೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಾರ್ಯಾಲಯದಲ್ಲಿ ಜರುಗಿದ ಸಭೆಯಲ್ಲಿ ಬೇಲೂರು–ಹಳೇಬೀಡು ಹಾಗೂ ಸುತ್ತಮುತ್ತಲಿನ ಐತಿಹಾಸಿಕ ಪ್ರಸಿದ್ಧ ಹೊಯ್ಸಳ ರಾಜರು ನಿರ್ಮಿಸಿದ ಪಾರಂಪರಿಕ ಸ್ಮಾರಕಗಳನ್ನು ಸಂರಕ್ಷಿಸುವ ಸಲುವಾಗಿ ಎರಡು ಪಟ್ಟಣಗಳು ಮತ್ತು ಸುತ್ತಮುತ್ತಲಿನ ಒಟ್ಟು 36 ಗ್ರಾಮಗಳನ್ನು ಸೇರಿಸಿಕೊಂಡು ಒಟ್ಟಾರೆಯಾಗಿ ಒಂದೇ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸುವುದು ಸೂಕ್ತವೆಂದು ಅಭಿಪ್ರಾಯಿಸಿದೆ.

ಮೇಲೆ ಓದಲಾದ (2)ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಬೇಲೂರು–ಹಳೇಬೀಡು ಪಟ್ಟಣಗಳ ಪಂಚಾಯತಿಯ ಎಲ್ಲೆಯ ಹೊರಗಡೆ ಅಭಿವೃದ್ಧಿಗಳು ಬಂದಿರುವ ಹಿನ್ನೆಲೆಯಲ್ಲಿ ಹಾಗೂ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಾಗಿರುವುದರಿಂದ ಎರಡು ಪಟ್ಟಣಗಳು ಮತ್ತು ಸುತ್ತಮುತ್ತಲಿನ ಗ್ರಾಮಗಳ ಯೋಜಿತ ಬೆಳವಣಿಗೆಗಾಗಿ 36 ಗ್ರಾಮಗಳನ್ನು ಸೇರಿಸಿ ಒಟ್ಟಾರೆಯಾಗಿ 8133.85 ಹೆಕ್ಟೇರ್ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4–ಎ (3)ರನ್ವಯ ಪ್ರತ್ಯೇಕ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 45 ಮೈಅಪ್ರಾ 2011, ಬೆಂಗಳೂರು, ದಿನಾಂಕ : 29–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ, ಬೇಲೂರು–ಹಳೇಬೀಡು ಪಟ್ಟಣಗಳು ಹಾಗೂ ಸುತ್ತಮುತ್ತಲಿನ 36 ಗ್ರಾಮಗಳನ್ನು ಒಟ್ಟಾಗಿ ಸೇರಿಸಿ 8133.85 ಹೆಕ್ಟೇರ್ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಕಾರಣಗಳಿಂದ ಹಾಸನ ಜಿಲ್ಲೆ ಚನ್ನರಾಯಪಟ್ಟಣ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4–ಎ(3)ರನ್ವಯ ಬೇಲೂರು–ಹಳೇಬೀಡು ಪಟ್ಟಣ ಹಾಗೂ ಸುತ್ತಮುತ್ತಲಿನ 36 ಗ್ರಾಮಗಳನ್ನೊಳಗೊಂಡಂತೆ ಅನುಬಂಧ–1 ಹಾಗೂ ಅನುಬಂಧ–2 ರಲ್ಲಿ ತೋರಿಸಿದಂತೆ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಅನುಬಂಧ–1

ಸರ್ಕಾರದ ಆದೇಶ ಸಂಖ್ಯೆ: ನಅಇ 45 ಮೈಅಪ್ರಾ 2011, ಬೆಂಗಳೂರು, ದಿನಾಂಕ 29–06–2011

ಹಾಸನ ಜಿಲ್ಲೆ ಬೇಲೂರು ತಾಲ್ಲೂಕು, ಬೇಲೂರು–ಹಳೇಬೀಡು ಪಟ್ಟಣಗಳ ಪ್ರಸ್ತಾವಿತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಣೆ

1) ಬೇಲೂರು
2) ಹಳೇಬೀಡು
3) ಹೂವ್ವೆನಹಳ್ಳಿ
4) ಮಾಯಗೊಂಡನ ಹಳ್ಳಿ
5) ಹುಲ್ಲಿಕೆರೆ
6) ತಿಪ್ಪನಹಳ್ಳಿ
7) ಕಲ್ಲಹಳ್ಳಿ ಕಾವಲು
8) ಕಲ್ಲಹಳ್ಳಿ
9) ಹೆಬ್ಬಾಳು
10) ಶಿವಾಲದಹಳ್ಳಿ
11) ತಿಮ್ಮನಹಳ್ಳಿ
12) ಐ. ಹುಣಸಿಕೆರೆ
13) ಸೋಮಪುರ
14) ಮುದಿಗೆರೆ
15) ರಾಯಪುರ
16) ಮಂಚನಾಯಕನ ಹಳ್ಳಿ
17) ಚಿಕ್ಕಬ್ಯಾಡಿಗೆರೆ
18) ಬಿಟ್ರವಳ್ಳಿ
19) ಸನ್ಯಾಸಿ ಹಳ್ಳಿ
20) ಮಲ್ಲಾಪುರ
21) ಚಟಚಟೀನಹಳ್ಳಿ
22) ಕಳ್ಳಿಬಾರೆ ಕಾವಲು
23) ಕೋಡಿಹಳ್ಳಿ
24) ಮೋಟಿಹಳ್ಳಿ
25) ಉತ್ಪಾತನ ಹಳ್ಳಿ
26) ಲಕ್ಷ್ಮೀಪುರ
27) ತಲಗೇರಿನ್ನಾಪುರ
28) ಗೊಟ್ರವಳ್ಳಿ
29) ಕೆಲ್ಲೂರು
30) ಸುರಾಪುರ
31) ನಿಡಗೋಡು
32) ಬಂಟೇನಹಳ್ಳಿ
33) ಕಲ್ಲಹಳ್ಳಿ ಎ.ಎಂ. ಕಾವಲು
34) ಚೀಲನಾಯಕನ ಹಳ್ಳಿ
35) ಸೋಮಪುರ (ಕಸಬಾ)

ಷರಾ: ಎಲ್ಲಾ ಗ್ರಾಮಗಳು ಸಹ ಪೂರ್ಣ ರೆವಿನ್ಯೂ ಗ್ರಾಮಗಳಾಗಿರುತ್ತವೆ.

ಅನುಬಂಧ–2

ಸರ್ಕಾರದ ಆದೇಶ ಸಂಖ್ಯೆ: ನಅಇ 45 ಮೈಅಪ್ರಾ 2011, ಬೆಂಗಳೂರು, ದಿನಾಂಕ 29–06–2011

ಬೇಲೂರು–ಹಳೇಬೀಡು ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು ಈಶಾನ್ಯ ದಿಕ್ಕಿನ ಚಟಚಟಿನಹಳ್ಳಿ ಗ್ರಾಮದ ಸ.ನಂ. 149ರ ಈಶಾನ್ಯ ಗಡಿಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಅದೇ ಗ್ರಾಮದ ಸ.ನಂ. 149,166,169ನ್ನೊಳಗೊಂಡು ಸ.ನಂ. 169ರ ದಕ್ಷಿಣದ ಅಂಚಿನಲ್ಲಿಯೇ ಪಶ್ಚಿಮಕ್ಕೆ ಚಲಿಸಿ ಅದೇ ಗ್ರಾಮದ ಸ.ನಂ. 169,171,170,175, 176,15,16,17,18,19,20ನ್ನೊಳಗೊಂಡು ಕಲ್ಬಾರೆ ಕಾವಲ್ ಗ್ರಾಮದ ಗಡಿಯನ್ನು ಕಲ್ಬಾರೆ ಕಾವಲ್ ಗ್ರಾಮದ ಸ.ನಂ. 47ರ ಪೂರ್ವದ ಅಂಚಿನಲ್ಲಿ ತಲುಪುತ್ತದೆ. ಕಲ್ಬಾರೆ ಕಾವಲ್ ಸ.ನಂ. 47ರ ಪೂರ್ವಾಂಚಿನಲ್ಲಿ ದಕ್ಷಿಣಕ್ಕೆ ತಿರುಗಿ ಸ.ನಂ. 47 ನ್ನೊಳಗೊಂಡು ಕೋಡಿಹಳ್ಳಿ ಗ್ರಾಮದ ಗಡಿಯನ್ನು ಕೋಡಿಹಳ್ಳಿ ಗ್ರಾಮದ ಸ.ನಂ. 12ರ ಈಶಾನ್ಯ ತುದಿಯಲ್ಲಿ ತಲುಪುತ್ತದೆ. ಅಲ್ಲಿಂದ ಪುನಃ ದಕ್ಷಿಣಕ್ಕೆ ಮುಂದುವರೆದು ಕೋಡಿಹಳ್ಳಿ ಗ್ರಾಮದ ಸ.ನಂ. 12ನ್ನೊಳಗೊಂಡು ಪಶ್ಚಿಮಕ್ಕೆ ತಿರುಗಿ ಅದೇ ಗ್ರಾಮದ ಸ.ನಂ. 12,11,10,9,8,7,5,4,3ನ್ನೊಳಗೊಂಡು

ಕಸಬಾ ಹಳೇಬೀಡು ಗ್ರಾಮದ ಗಡಿಯನ್ನು ಹಳೇಬೀಡು ಗ್ರಾಮದ ಸ.ನಂ. 364ರ ಪೂರ್ವ ಭಾಗದಲ್ಲಿ ತಲುಪುತ್ತದೆ. ಹಳೇಬೀಡು ಗ್ರಾಮದ ಸ.ನಂ. 364ರ ಪೂರ್ವಭಾಗದಲ್ಲಿಯೇ ದಕ್ಷಿಣಕ್ಕೆ ತಿರುಗಿ ಹುಲಿಕೆರೆ ಗ್ರಾಮದ ಸ.ನಂ. 50ರ ಈಶಾನ್ಯ ಮೂಲೆಯಲ್ಲಿ ಹುಲಿಕೆರೆ ಗ್ರಾಮದ ಗಡಿಯನ್ನು ತಲುಪುತ್ತದೆ. ಹುಲಿಕೆರೆ ಗ್ರಾಮದ ಸ.ನಂ. 50ರ ಪೂರ್ವಭಾಗದಲ್ಲಿ ದಕ್ಷಿಣಕ್ಕೆ ಹಾದು ಹುಲಿಕೆರೆ ಗ್ರಾಮದ ಸ.ನಂ. 201,202,10,17,18,19,20,21,22,23ನ್ನೊಳಗೊಂಡು ಹುಲಿಕೆರೆ ಗ್ರಾಮದ ದಕ್ಷಿಣ ಹಾಗೂ ಪಶ್ಚಿಮದ ಗಡಿಯಂಚಿನಲ್ಲಿಯೇ ಹೊರಟು, ಹುಲಿಕೆರೆ ಗ್ರಾಮದ ಸ.ನಂ. 23,24,25,26,27,28,31,32, 33,37,38,50,41,42,43,44,45,46,47ನ್ನೊಳಗೊಂಡು ಹಳೇಬೀಡು ಗ್ರಾಮದ ಗಡಿಯನ್ನು ಹಳೇಬೀಡು ಗ್ರಾಮದ ಸ.ನಂ. 373ರ ದಕ್ಷಿಣದ ಅಂಚನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಹಳೇಬೀಡು ಗ್ರಾಮದ ಗಡಿಯಂಚಿನಲ್ಲಿಯೇ ಹಾದು ಸ.ನಂ. 373,374,467ನ್ನೊಳಗೊಂಡು, ಚಿಕ್ಕನಾಯಕನಹಳ್ಳಿ ಗ್ರಾಮದ ಸ.ನಂ. 45ರ ಆಗ್ನೇಯ ಅಂಚಿನಲ್ಲಿ ಚಿಕ್ಕನಾಯಕನಹಳ್ಳಿ ಗ್ರಾಮದ ಗಡಿಯನ್ನು ತಲುಪುತ್ತದೆ. ಅಲ್ಲಿಂದ ಚಿಕ್ಕನಾಯಕನಹಳ್ಳಿ ಗ್ರಾಮದ ಗಡಿಯಲ್ಲಿ ಪಶ್ಚಿಮಕ್ಕೆ ಮುಂದುವರೆದು ಗ್ರಾಮದ ಸ.ನಂ. 45,46,48,49,53,54,55,59,60,62,65,75,76,77,78,83,105,103,108,109,110,111,112 ನ್ನೊಳಗೊಂಡು ಕಲ್ಲಹಳ್ಳಿ ಎ.ಎಂ. ಕಾವಲ್ ಗ್ರಾಮದ ಸ.ನಂ. 9ರ ಪೂರ್ವ ಭಾಗದಲ್ಲಿ ಗ್ರಾಮದ ಗಡಿಯನ್ನು ತಲುಪುತ್ತದೆ. ಕಲ್ಲಹಳ್ಳಿ ಎ.ಎಂ. ಕಾವಲ್ ಗ್ರಾಮದ ಗಡಿಯಂಚಿನಲ್ಲಿಯೇ ದಕ್ಷಿಣಕ್ಕೆ ಹಾದು ಗ್ರಾಮದ ಸ.ನಂ. 9,14,21,22,23ನ್ನೊಳಗೊಂಡು ಪಶ್ಚಿಮಕ್ಕೆ ತಿರುಗಿ ಸ.ನಂ. 1ರ ದಕ್ಷಿಣದ ಗಡಿಯಂಚಿನಲ್ಲಿಯೇ ಹಾದು ಕಲ್ಲಹಳ್ಳಿ ಗ್ರಾಮದ ಗಡಿಯನ್ನು ಕಲ್ಲಹಳ್ಳಿ ಗ್ರಾಮದ ಸ.ನಂ. 13ರ ಈಶಾನ್ಯ ತುದಿಯನ್ನು ತಲುಪುತ್ತದೆ. ಕಲ್ಲಹಳ್ಳಿ ಗ್ರಾಮದ ಪೂರ್ವದ ಗಡಿಯಂಚಿನಲ್ಲಿ ದಕ್ಷಿಣಕ್ಕೆ ಹೊರಟು ಕಲ್ಲಹಳ್ಳಿ ಗ್ರಾಮದ ಸ.ನಂ. 13,14,15,16,18,20,21ನ್ನೊಳಗೊಂಡು ಶಿವಾಲದಹಳ್ಳಿ ಗ್ರಾಮದ ಸರ್ವೆ ನಂ. 41ರ ಆಗ್ನೇಯ ಅಂಚನ್ನು ಶಿವಾಲದಹಳ್ಳಿ ಗ್ರಾಮದ ಗಡಿಯನ್ನು ತಲುಪುತ್ತದೆ. ಶಿವಾಲದಹಳ್ಳಿ ಗ್ರಾಮದ ದಕ್ಷಿಣದ ಅಂಚಿನಲ್ಲಿ ಪಶ್ಚಿಮಕ್ಕೆ ಹೊರಟು ಗ್ರಾಮದ ಸ.ನಂ. 41,40,39,38ನ್ನೊಳಗೊಂಡು ಸ.ನಂ. 25ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಅಲ್ಲಿಂದ ದಕ್ಷಿಣಾಭಿಮುಖವಾಗಿ ತಿರುಗಿ ಶಿವಾಲದಹಳ್ಳಿ ಗ್ರಾಮದ ಸ.ನಂ. 25,2,3ನ್ನೊಳಗೊಂಡು ಸ.ನಂ. 3ರ ಆಗ್ನೇಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿ, ಶಿವಾಲದಹಳ್ಳಿ ಗ್ರಾಮದ ಪಶ್ಚಿಮದ ಗಡಿಯಂಚಿನಲ್ಲಿಯೇ ಹಾದು ಸ.ನಂ. 3,4,32,6,7,9ನ್ನೊಳಗೊಂಡು ಹೆಬ್ಬಾಳು ಗ್ರಾಮದ ಸ.ನಂ. 87ರ ಆಗ್ನೇಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಾಭಿಮುಖವಾಗಿ ಹೆಬ್ಬಾಳು ಗ್ರಾಮದ ದಕ್ಷಿಣದ ಅಂಚಿನಲ್ಲಿ ಸಾಗಿ ಹೆಬ್ಬಾಳು ಗ್ರಾಮದ ಸ.ನಂ. 87,88,89,90,91,99ನ್ನೊಳಗೊಂಡು ಹುಣಸೀಕೆರೆ ಗ್ರಾಮದ ಗಡಿಯನ್ನು ಹುಣಸೀಕೆರೆ ಗ್ರಾಮದ ಸ.ನಂ. 110ರ ಈಶಾನ್ಯ ಅಂಚಿನಲ್ಲಿ ತಲುಪುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಹುಣಸೀಕೆರೆ ಗ್ರಾಮದ ಸ.ನಂ. 110,111,113 ಹಾಗೂ 27ನ್ನು ಒಳಗೊಂಡು ಸೋಮಪುರ ಗ್ರಾಮದ ಸ.ನಂ. 11ರ ಈಶಾನ್ಯ ತುದಿಯನ್ನು ತಲುಪುತ್ತದೆ. ಸೋಮಪುರ ಗ್ರಾಮದ ಸ.ನಂ. 11ರ ಪೂರ್ವದಂಚಿನಲ್ಲಿ ದಕ್ಷಿಣಕ್ಕೆ ಸಾಗಿ ಮುದಿಗೆರೆ ಗ್ರಾಮದ ಸ.ನಂ. 82ನ್ನು ತಲುಪುತ್ತದೆ ಹಾಗೂ ಅಲ್ಲಿಂದ ಮುದಿಗೆರೆ ಗ್ರಾಮದ ಉತ್ತರದ ಗಡಿಯಂಚಿನಲ್ಲಿ ಪೂರ್ವಕ್ಕೆ ಹಾದು ಮುದಿಗೆರೆ ಗ್ರಾಮದ ಸ.ನಂ. 82,83,84ರನ್ನೊಳಗೊಂಡು ಸ.ನಂ. 84ರ ಈಶಾನ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಮುದಿಗೆರೆ ಗ್ರಾಮದ ಸ.ನಂ. 84,85,88,89,90,91,92,94,95,109 ನ್ನೊಳಗೊಂಡು ಸ.ನಂ. 109ರ ಆಗ್ನೇಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಮುದಿಗೆರೆ ಗ್ರಾಮದ ಸ.ನಂ. 109ರ ದಕ್ಷಿಣದ ಅಂಚಿನಲ್ಲಿಯೇ ಹಾದು ರಾಯಪುರ ಗ್ರಾಮದ ಸ.ನಂ. 20ರ ಈಶಾನ್ಯ ಗಡಿಯಂಚನ್ನು ತಲುಪುತ್ತದೆ. ಅಲ್ಲಿಂದ ಪುನಃ ನೈಋತ್ಯಕ್ಕೆ ಮುಂದುವರೆದು ರಾಯಪುರ ಗ್ರಾಮದ ಸ.ನಂ. 20,25,157,198,146,23ನ್ನೊಳಗೊಂಡು ರಾಯಪುರ ಗ್ರಾಮದ ದಕ್ಷಿಣದ ಅಂಚಿನಲ್ಲಿ ಚಲಿಸಿ ಹೇಮಾವತಿ ನದಿಯ ಪೂರ್ವದ ಅಂಚನ್ನು ತಲುಪುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಮಲ್ಲಾಪುರ ಗ್ರಾಮದ ಸ.ನಂ. 27ರ ಆಗ್ನೇಯ ಅಂಚಿಗೆ ಸೇರುವಂತೆ ನದಿಯನ್ನು ಭೇಧಿಸಿಕೊಂಡು ಮಲ್ಲಾಪುರ ಗ್ರಾಮದ ಸ.ನಂ. 27ರ ಆಗ್ನೇಯ ದಿಕ್ಕನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಾಭಿಮುಖವಾಗಿ ಮಲ್ಲಾಪುರ ಗ್ರಾಮದ ದಕ್ಷಿಣದ ಗಡಿಯಂಚಿನಲ್ಲಿ ಹಾದು ಮಲ್ಲಾಪುರ ಗ್ರಾಮದ ಸ.ನಂ. 27,29ನ್ನೊಳಗೊಂಡು ಸನ್ಯಾಸಿಹಳ್ಳಿ ಗ್ರಾಮದ ಗಡಿಯನ್ನು ಸನ್ಯಾಸಿಹಳ್ಳಿ ಗ್ರಾಮದ ಸ.ನಂ. 23ರ ಆಗ್ನೇಯ ತುದಿಯಲ್ಲಿ ತಲುಪುತ್ತದೆ. ಸನ್ಯಾಸಿಹಳ್ಳಿ ಗ್ರಾಮದ ದಕ್ಷಿಣ ಅಂಚಿನಲ್ಲಿಯೇ ಪಶ್ಚಿಮಕ್ಕೆ ಮುಂದುವರೆದು ಸನ್ಯಾಸಿಹಳ್ಳಿ ಗ್ರಾಮದ ಸ.ನಂ. 23,24,28,29,30,31,32ನ್ನೊಳಗೊಂಡು ಕೆರ್ಲೂರು ಗ್ರಾಮದ ಸ.ನಂ. 10ರ ಪೂರ್ವದಂಚಿನಲ್ಲಿ ಕೆರ್ಲೂರು ಗ್ರಾಮದ ಗಡಿಯನ್ನು ತಲುಪುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಕೆರ್ಲೂರು ಗ್ರಾಮದ ಸ.ನಂ. 10,11ನ್ನೊಳಗೊಂಡು ಸ.ನಂ. 11ರ ಆಗ್ನೇಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಕೆರ್ಲೂರು ಗ್ರಾಮದ ಸ.ನಂ. 53,54ನ್ನೊಳಗೊಂಡು ಕೆರ್ಲೂರು ಗ್ರಾಮದ ಸ.ನಂ. 59ರ ನೈಋತ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿ ಕೆರ್ಲೂರು ಗ್ರಾಮದ ಸ.ನಂ. 59,63,64,65,71,72,73,74ನ್ನೊಳಗೊಂಡು ಸ.ನಂ. 27ರ ಆಗ್ನೇಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಕೆರ್ಲೂರು ಗ್ರಾಮದ ಸ.ನಂ. 27,32,4ನ್ನೊಳಗೊಂಡು ನಿಡಗೋಡು ಗ್ರಾಮದ ಗಡಿಯನ್ನು ನಿಡಗೋಡು ಗ್ರಾಮದ ಸ.ನಂ. 46ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಅಲ್ಲಿಂದ ಪಶ್ಚಿಮಾಭಿಮುಖವಾಗಿ ಹಾದು ನಿಡಗೋಡು ಗ್ರಾಮದ ಸ.ನಂ. 46,48,50,51,55,56,57,59ನ್ನೊಳಗೊಂಡು ನಿಡಗೋಡು ಗ್ರಾಮದ ಸ.ನಂ. 59ರ ನೈಋತ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ವಾಯುವ್ಯಕ್ಕೆ ತಿರುಗಿ ನಿಡಗೋಡು ಗ್ರಾಮದ ಸ.ನಂ. 59,109,110,112,111 ನ್ನೊಳಗೊಂಡು ಸ.ನಂ. 111ರ ವಾಯುವ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಹಾದು ಸ.ನಂ. 78,79 ನ್ನೊಳಗೊಂಡು, ಗೊಟ್ರವಳ್ಳಿ ಗ್ರಾಮದ ಗಡಿಯನ್ನು ಗೊಟ್ರವಳ್ಳಿ ಗ್ರಾಮದ ಸ.ನಂ. 50ರ ದಕ್ಷಿಣದ ಅಂಚಿನಲ್ಲಿ ತಲುಪುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಹಾದು ಗೊಟ್ರವಳ್ಳಿ, ಗ್ರಾಮದ ಸ.ನಂ. 50,53,54,59ನ್ನೊಳಗೊಂಡು ಸ.ನಂ. 59ರ ಉತ್ತರದ ಅಂಚನ್ನು ತಲುಪುತ್ತದೆ. ಅಲ್ಲಿಂದ ಈಶಾನ್ಯಾಭಿಮುಖವಾಗಿ ಹೊರಟು ಗೊಟ್ರವಳ್ಳಿ ಗ್ರಾಮದ ಸ.ನಂ. 59,63,67,74,75,76 ನ್ನೊಳಗೊಂಡು ಸುರಪುರ ಗ್ರಾಮದ ಸ.ನಂ. 4ರ ದಕ್ಷಿಣ ಭಾಗದಲ್ಲಿ ಸುರಪುರ ಗ್ರಾಮದ ಗಡಿಯನ್ನು ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಸುರಪುರ ಗ್ರಾಮದ ಸ.ನಂ. 4ರ ನೈರುತ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಈಶಾನ್ಯಕ್ಕೆ ತಿರುಗಿ ಸುರಪುರ ಗ್ರಾಮದ ಸ.ನಂ. 4,38,39,42,43 ನ್ನೊಳಗೊಂಡು ಹೇಮಾವತಿ ನದಿಯ ಪೂರ್ವದ ಅಂಚನ್ನು ಸುರಪುರ ಗ್ರಾಮದ ಗಡಿಯಂಚಿನಲ್ಲಿ ತಲುಪುತ್ತದೆ. ಅಲ್ಲಿಂದ ಸುರಪುರ ಗ್ರಾಮದ ಗಡಿಯಂಚಿನಲ್ಲಿಯೇ ದಕ್ಷಿಣಕ್ಕೆ ಹಾದು ಹೇಮಾವತಿ ನದಿಯ ಪೂರ್ವದ ಗಡಿಯಂಚಿನಲ್ಲಿಯೇ ಮುಂದುವರೆದು ಚಿಕ್ಕಬ್ಯಾಡಿಗೆರೆ ಗ್ರಾಮದ ಸ.ನಂ. 78ರ ವಾಯುವ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ತಿರುಗಿ ಚಿಕ್ಕಬ್ಯಾಡಿಗೆರೆ ಗ್ರಾಮದ ಸ.ನಂ. 78,85,86,91ನ್ನೊಳಗೊಂಡು ಮಂಚನಾಯಕನಹಳ್ಳಿ ಗ್ರಾಮದ ಸ.ನಂ. 30ರ ನೈರುತ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿ ಮಂಚನಾಯಕನಹಳ್ಳಿ ಗ್ರಾಮದ ಸ.ನಂ. 30,31,32,33,40,42,43ನ್ನೊಳಗೊಂಡು ಮಂಚನಾಯಕನಹಳ್ಳಿ ಗ್ರಾಮದ ಸ.ನಂ. 43ರ ವಾಯುವ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ತಿರುಗಿ ಮಂಚನಾಯಕನಹಳ್ಳಿ ಗ್ರಾಮದ ಸ.ನಂ. 43,47,48,53,54,62ನ್ನೊಳಗೊಂಡು ಮಂಚನಾಯಕನಹಳ್ಳಿ ಗ್ರಾಮದ ಉತ್ತರದ ಗಡಿಯಂಚಿನಲ್ಲಿ ಹಾದು ತಿಮ್ಮನಹಳ್ಳಿ ಗ್ರಾಮದ ಗಡಿಯನ್ನು ಸ.ನಂ. 24ರ ನೈರುತ್ಯ ಮೂಲೆಯಲ್ಲಿ ತಲಪುತ್ತದೆ.

ಅಲ್ಲಿಂದ ಉತ್ತರಕ್ಕೆ ಹೊರಟು ತಿಮ್ಮನಹಳ್ಳಿ ಗ್ರಾಮದ ಸ.ನಂ. 24,23ನ್ನೊಳಗೊಂಡು ಸ.ನಂ. 23ರ ವಾಯುವ್ಯ ಗಡಿಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ತಿಮ್ಮನ ಹಳ್ಳಿ ಗ್ರಾಮದ ಸ.ನಂ. 23,12,11,10ನ್ನೊಳಗೊಂಡು ಹೆಬ್ಬಾಳು ಗ್ರಾಮದ ಗಡಿಯನ್ನು ಹೆಬ್ಬಾಳು ಗ್ರಾಮದ ಸ.ನಂ. 139ರ ಪಶ್ಚಿಮ ದಿಕ್ಕಿನಲ್ಲಿ ಸಂಧಿಸುತ್ತದೆ. ಹೆಬ್ಬಾಳು ಗ್ರಾಮದ ಸ.ನಂ. 139,143,144,147,153,154,15,18,19,20,21,22ನ್ನೊಳಗೊಂಡು ಹೆಬ್ಬಾಳು ಗ್ರಾಮದ ಉತ್ತರದ ಗಡಿಯಂಚಿನಲ್ಲಿ ಪೂರ್ವಕ್ಕೆ ಚಲಿಸಿ ಕಲ್ಲಳ್ಳಿಕಾವಲು ಗ್ರಾಮದ ಗಡಿಯನ್ನು ತಲುಪುತ್ತದೆ. ಕಲ್ಲಳ್ಳಿಕಾವಲು ಗ್ರಾಮದ ಸ.ನಂ. 1,2ನ್ನೊಳಗೊಂಡು ಕಲ್ಲಳ್ಳಿ ಎ.ಎಂ. ಕಾವಲು ಗ್ರಾಮದ ಗಡಿಯಂಚನ್ನು ನೈರುತ್ಯ ದಿಕ್ಕಿನಲ್ಲಿ ಸಂಧಿಸುತ್ತದೆ. ಕಲ್ಲಳ್ಳಿ ಎ.ಎಂ. ಕಾವಲು ಗ್ರಾಮದ ಉತ್ತರದ ಗಡಿಯಲ್ಲಿಯೇ ಪೂರ್ವಕ್ಕೆ ಚಲಿಸಿ, ಪೂರ್ಣ ಕಲ್ಲಳ್ಳಿ ಎ.ಎಂ. ಕಾವಲು ಗ್ರಾಮವನ್ನೊಳಗೊಂಡು (ಕಲ್ಲಳ್ಳಿ ಎ.ಎಂ. ಕಾವಲು ಗ್ರಾಮದ ಸ.ನಂ. 1ನ್ನು ಮಾತ್ರ ಒಳಗೊಂಡಿದೆ). ತಿಪ್ಪನಹಳ್ಳಿ ಗ್ರಾಮದ ಸ.ನಂ. 9ರ ಉತ್ತರದ ಗಡಿಯನ್ನು ತಲುಪುತ್ತದೆ. ತಿಪ್ಪನಹಳ್ಳಿ ಗ್ರಾಮದ ಸ.ನಂ. 9,10,16ನ್ನೊಳಗೊಂಡು ಗ್ರಾಮದ ಉತ್ತರದ ಗಡಿಯಲ್ಲಿ ಪೂರ್ವಕ್ಕೆ ಮುಂದುವರೆದು ಹಳೇಬೀಡು ಗ್ರಾಮದ ಸ.ನಂ. 11ರ ನೈರುತ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಹಾದು ಹಳೇಬೀಡು ಗ್ರಾಮದ ಸ.ನಂ. 11,14,15,16,17,18,19,20,54,55,58,59,61,62ನ್ನೊಳಗೊಂಡು ಹಳೇಬೀಡು ಗ್ರಾಮದ ಸ.ನಂ. 62ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ತಿರುಗಿ ಹಳೇಬೀಡು ಗ್ರಾಮದ ಸ.ನಂ. 62,63,64,65,66,70,86,85,84, 88,98,100ನ್ನೊಳಗೊಂಡು ಸೋಮಪುರ ಗ್ರಾಮದ ಸ.ನಂ. 15ರ ಪಶ್ಚಿಮದ ಅಂಚನ್ನು ತಲುಪುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿ ಸೋಮವಾರ ಗ್ರಾಮದ ಸ.ನಂ. 15,14,12,11,10,6,5,3,2,1ನ್ನೊಳಗೊಂಡು ಸೋಮಪುರ ಗ್ರಾಮದ ಸ.ನಂ. 1ರ ವಾಯುವ್ಯ ಗಡಿಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಸ.ನಂ. 1ರ ಉತ್ತರದ ಅಂಚಿನಲ್ಲಿ ಹಾದು ಮಾಯಗೊಂಡನಹಳ್ಳಿ ಗ್ರಾಮದ ಗಡಿಯನ್ನು ಮಾಯಗೊಂಡನಹಳ್ಳಿ ಗ್ರಾಮದ ಸ.ನಂ. 43ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಮಾಯಗೊಂಡನಹಳ್ಳಿ ಗ್ರಾಮದ ಸ.ನಂ. 43,44,46,49,50,55,1,2,8,7,4,9,11ನ್ನೊಳಗೊಂಡು ಕಲ್ಬಾರೆ ಕಾವಲ್ ಗ್ರಾಮದ ಸ.ನಂ. 86ರ ನೈರುತ್ಯ ಅಂಚಿನಲ್ಲಿ ಕಲ್ಬಾರೆ ಕಾವಲ್ ಗ್ರಾಮದ ಗಡಿಯನ್ನು ತಲುಪುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿ ಕಲ್ಬಾರೆ ಕಾವಲ್ ಗ್ರಾಮದ ಸ.ನಂ. 86,89,90,95,96,101,118,131,132ನ್ನೊಳಗೊಂಡು ಸ.ನಂ. 132ರ ವಾಯುವ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಕಲ್ಬಾರೆ ಕಾವಲ್ ಗ್ರಾಮದ ಸ.ನಂ. 132,133,138,139,140ನ್ನೊಳಗೊಂಡು ಸ.ನಂ. 140ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿ, ಕಲ್ಬಾರೆ ಕಾವಲ್ ಗ್ರಾಮದ ಸ.ನಂ. 140,142,143,144,145,146,147,148,149,157 ನ್ನೊಳಗೊಂಡು ಚಟಚಟನಹಳ್ಳಿ ಗ್ರಾಮದ ಸ.ನಂ. 64ರ ವಾಯುವ್ಯ ತುದಿಯನ್ನು ತಲುಪುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಚಟಚಟನಹಳ್ಳಿ ಸ.ನಂ. 63,64,67,72,73,75,76,149ನ್ನೊಳಗೊಂಡು ಸ.ನಂ. 149ರ ಈಶಾನ್ಯ ಮೂಲೆಯನ್ನು ಹೊರಟ ಸ್ಥಳವನ್ನು ತಲುಪುತ್ತದೆ.

ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 1603

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮುಧೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ. 5270.00 ಲಕ್ಷಗಳಲ್ಲಿ ಕಲ್ಪಿಸಲು ತಾತ್ವಿಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕಜಮಂ:ವ್ಯನಿ/ಮುಅ(ಉ)/ಎಸ್‌ಜಿಇಇ-ಬಿಜಿಎಂ-ಡಿಸಿಇ-1:244:2011-12, ದಿನಾಂಕ 28-4-2011.

ಪ್ರಸ್ತಾವನೆ :

ಮುಧೋಳ ಪಟ್ಟಣವು ಬಾಗಲಕೋಟೆ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು 2001ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 42.433 ಇದ್ದು ಪ್ರಸ್ತುತ 52,000 ಇರುತ್ತದೆ. ಪಟ್ಟಣದ ಜನಸಂಖ್ಯೆಯು 2043ಕ್ಕೆ 1,20,000 ಜನಸಂಖ್ಯೆ ಆಗಬಹುದೆಂದು ನಿರೀಕ್ಷಿಸಲಾಗಿದೆ. ಈ ಪಟ್ಟಣಕ್ಕೆ ಪ್ರಸ್ತುತ ಘಟಪ್ರಭಾ ಎಡದಂಡೆ ಕಾಲುವೆಯ ಮೂಲದಿಂದ ವೆಂಕಟೇಶ್ ಟ್ಯಾಂಕಿಗೆ ನೀರನ್ನು ಹಾಯಿಸಿ ನೀರು ಸರಬರಾಜು ಯೋಜನೆಯನ್ನು 1962ರಲ್ಲಿ ಕಲ್ಪಿಸಲಾಯಿತು. ಕುಡಿಯುವ ನೀರಿನ ವ್ಯವಸ್ಥೆಯನ್ನು ಸುಧಾರಿಸಲು ಘಟಪ್ರಭಾ ನದಿಯನ್ನು ಮೂಲವಾಗಿಟ್ಟುಕೊಂಡು ನೀರು ಸರಬರಾಜು ಯೋಜನೆ ಅಭಿವೃದ್ಧಿಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 22 ಯುಡಬ್ಲ್ಯೂಎಸ್ 2003, ದಿನಾಂಕ 22-8-2003ರಲ್ಲಿ ರೂ. 1299.36 ಲಕ್ಷಗಳ ವೆಚ್ಚದಲ್ಲಿ ಯೋಜನೆಯನ್ನು ಅನುಮೋದಿಸಲಾಗಿದೆ. ಸದರಿ ಯೋಜನೆಯು ಪ್ರಗತಿಯಲ್ಲಿದ್ದು, 2012ರ ಅಂತ್ಯಕ್ಕೆ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ಈ ಪಟ್ಟಣಕ್ಕೆ ಪ್ರಸ್ತುತ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಪಟ್ಟಣದ ಜನತೆಯು ಆಳಗುಂಡಿ (ಇಂಗುಗುಂಡಿ) ಮತ್ತು ಸೆಪ್ಟಿಕ್ ಟ್ಯಾಂಕ್‌ಗಳನ್ನು ಅಳವಡಿಸಿಕೊಂಡಿದ್ದು, ತ್ಯಾಜ್ಯ ನೀರನ್ನು ನಾಲೆಗಳ ಮೂಲಕ ಮತ್ತು ತೆರೆದ ಚರಂಡಿಗಳ ಮೂಲಕ ಹರಿದುಬಿಡುತ್ತಿದ್ದು. ಇದರಿಂದ ಘಟಪ್ರಭಾ ನದಿಯ ನೀರು ಕಲುಷಿತಗೊಳ್ಳುತ್ತಿದೆ ಮತ್ತು ಪಟ್ಟಣದ ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿದೆ. ಆದ್ದರಿಂದ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು ಅನಿವಾರ್ಯವಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆಗೆ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕೆಂದು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಸಾಲ (30%)	...	ರೂ. 1581.00 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (50%)	...	ರೂ. 2635.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (20%)	...	ರೂ. 1054.00 ಲಕ್ಷಗಳು
	ಒಟ್ಟು	ರೂ. 5270.00 ಲಕ್ಷಗಳು

ಈ ಯೋಜನೆಯನ್ನು ಮಂಡಳಿಯ 2010-11ನೇ ಸಾಲಿನ ಅನುಮೋದಿತ ಪರಿಷ್ಕೃತ ಕ್ರಿಯಾಯೋಜನೆಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ಪ್ರವರ್ಗ ಡಿ ಅಡಿಯಲ್ಲಿ ರೂ. 1833.33 ಲಕ್ಷಗಳನ್ನು ಅನುವು ಮಾಡಲಾಗಿದೆ.

ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ವಿವರವಾಗಿ ಪರಿಶೀಲಿಸಿ ಸಚಿವ ಸಂಪುಟದ ಅನುಮೋದನೆ ಬಾಕಿ ಇಟ್ಟು ಯೋಜನೆಗೆ ತಾತ್ವಿಕ ಅನುಮೋದನೆ ನೀಡಲು ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 10 ಯುಡಿಎಸ್ 2011, ಬೆಂಗಳೂರು, ದಿನಾಂಕ : 29–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 4083.10 ಲಕ್ಷಗಳಲ್ಲಿ (ರೂ. ನಾಲ್ಕು ಸಾವಿರದ ಎಂಭತ್ತ ಮೂರು ಲಕ್ಷಗಳು ಮತ್ತು ಹತ್ತು ಸಾವಿರ ಮಾತ್ರ) ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ವಿವರವಾಗಿ ಪರಿಶೀಲಿಸಿ ಯೋಜನೆಗೆ ಸಚಿವ ಸಂಪುಟದ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆ ನೀಡುವುದನ್ನು ಬಾಕಿ ಇಟ್ಟು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ತಾತ್ವಿಕವಾಗಿ ಸರ್ಕಾರದ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) ETP/WCE & contingencies are restricted to 5%
3) The consent of the ULB shall be obtained for the extra cost that might occur due to deviations, extra item works or variations in the Scheme.
4) Adequate provision to be made by the Board in the following Years for timely completion of the Project.
5) Escalations and Tender premium over and above the approved estimate cost should be approved with the prior consent of the ULB.
6) Water rates as proposed by KUWS&DB have to be implemented to meet O & M cost of UGD.
7) KTPP provisions, quality control and timely completion should ensure.
8) Since the ULB has resolve to take over the maintenance after the completion of the scheme the lumpsum provision provided towards maintenance is reduced from the estimate.
9) ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 298 Exp-9:2011, ದಿನಾಂಕ 27–05–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 1604

ವಸತಿ ಸಚಿವಾಲಯ

ವಿಷಯ : 2011–12ನೇ ಸಾಲಿನಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ : ಆಯುಕ್ತರು, ಕಕೊಅಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ಲೆಪಶಾ/ ಅನುದಾನ:2011–2012, ದಿನಾಂಕ 16–05–2011

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರ ಪತ್ರದಲ್ಲಿ, 2011–2012ನೇ ಸಾಲಿನ ಆಯವ್ಯಯದ ಸವಿವರ ವೆಚ್ಚದ ಅಂದಾಜುಗಳ ಪುಸ್ತಕ ಸಂಪುಟ–5ರಲ್ಲಿ ರೂ. 6250.00 ಲಕ್ಷಗಳನ್ನು ಯೋಜನೆಯಡಿಯಲ್ಲಿ ಹಾಗೂ ರೂ. 1798.80 ಲಕ್ಷಗಳನ್ನು ಯೋಜನೇತರಡಿಯಲ್ಲಿ ಒಟ್ಟು ರೂ. 8048.80 ಲಕ್ಷಣಗಳನ್ನು ಒದಗಿಸಲಾಗಿರುವುದರಿಂದ 2011–2012ನೇ ಸಾಲಿನ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಸಿಬ್ಬಂದಿ ವೆಚ್ಚಕ್ಕೆ (ಯೋಜನೆ ಮತ್ತು ಯೋಜನೇತರಡಿ) ರೂ. 137.50 ಲಕ್ಷಗಳು, ಕೊಳಚೆ ಸುಧಾರಣೆ–ಸಹಾಯಧನ–ಯೋಜನೆಯಡಿ ರೂ. 25.00 ಲಕ್ಷಗಳನ್ನು ಹಾಗೂ ಹುಡ್ಕೋ ಸಾಲಗಳ ಮೇಲು ಉಸ್ತುವಾರಿಗಾಗಿ ರೂ. 354.81 ಲಕ್ಷಗಳು (ಹುಡ್ಕೋ ಸಂಸ್ಥೆಯ ಬೇಡಿಕೆಯನ್ವಯ) ಒಟ್ಟು ಯೋಜನೆಯಡಿ ರೂ. 137.50 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ. 429.51 ಲಕ್ಷಗಳು ಒಟ್ಟು ರೂ. 567.01 ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 6 ಕೊಮಂಲೆ 2011, ಬೆಂಗಳೂರು, ದಿನಾಂಕ : 23–06–2011

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ 2011–12ನೇ ಸಾಲಿಗೆ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ ಯೋಜನೆ ಮತ್ತು ಯೋಜನೇತರ ಕೊಳಚೆ ಸುಧಾರಣೆ–ಸಹಾಯಧನ ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ)ಗಾಗಿ ಒಟ್ಟು ರೂ. 567.01 ಲಕ್ಷಗಳು (ಐದು ಕೋಟಿ ಅರವತ್ತೇಳು ಲಕ್ಷದ ಒಂದು ಸಾವಿರ ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಮೊದಲನೇ ತ್ರೈಮಾಸಿಕ		
		ಯೋಜನೆ	ಯೋಜನೇತರ	ಒಟ್ಟು
1	ಸಿಬ್ಬಂದಿ ವೆಚ್ಚ 2217-04-191-2-01	112.50	74.70	187.20
2	ಕೊಳಚೆಗಳ ಸುಧಾರಣೆ ಸಹಾಯಧನ 2217-04-191-2-02	25.00	0.00	25.00
3	ಹುಡ್ಕೋ ಸಾಲಗಳ ಮೇಲು ಉಸ್ತವಾರಿ 2217-04-191-2-04	0.00	354.81	354.81
	ಒಟ್ಟು	137.50	429.51	567.01

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆಗೊಳಿಸಿದೆ

1. ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತಾರೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 330 ವೆಚ್ಚ-9/2011, ದಿನಾಂಕ 15-06-2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ. ಆರ್. ನಾಗರಾಜ

ಪೀಠಾಧಿಕಾರಿ-4, ವಸತಿ ಇಲಾಖೆ

ಪಿ.ಆರ್. 1605

ಸಹಕಾರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ : 1-4-2011 ರಿಂದ ದಿನಾಂಕ : 31-3-2012 ರವರೆಗೆ ವಿಸ್ತರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಇ 190 ಸಂಮಾಸ 2010, ದಿನಾಂಕ : 7-9-2009.
2. ಸಹಕಾರ ಸಂಘಗಳ ಅಪರ ನಿಬಂಧಕರ ಪತ್ರ ಸಂಖ್ಯೆ : ಅನಿ/165 ಕೈಸಸಂ-2/2010-11, ದಿನಾಂಕ: 9-2-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಸಂಖ್ಯೆ (1) ರ ಆದೇಶದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ : 1-4-2010 ರಿಂದ 31-3-2011 ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಆಡಳಿತಾಧಿಕಾರಿಗಳ ಅವಧಿಯು ದಿನಾಂಕ : 31-3-2011 ಕ್ಕೆ ಮುಕ್ತಾಯವಾಗಲಿರುವುದರಿಂದ ಇದರ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ : 1-4-2011 ರಿಂದ 31-3-2012 ರವರೆಗೆ ವಿಸ್ತರಿಸಿ ಆದೇಶ ನೀಡಬಹುದೆಂದು ಶಿಫಾರಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 190 ಸಂಮಾಸ 2010, ಬೆಂಗಳೂರು, ದಿನಾಂಕ : 20-6-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಮಯ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ : 1-4-2011 ರಿಂದ 31-3-2012 ರವರೆಗೆ ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಬಿ(3)ರ ಉಪಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಬಿ(3)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 31-3-2012 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 28ಬಿ(3)ರ ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 1606

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ವೈ.ವಿ. ಗೋಪಾಲಕೃಷ್ಣ, ನೋಟರಿ, ಯಳಂದೂರು ಇವರ ರಾಜೀನಾಮೆಯನ್ನು ಅಂಗೀಕರಿಸಿ ಅವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆಯುವ ಬಗ್ಗೆ.

ಓದಲಾಗಿದೆ : 1. ಶ್ರೀ ವೈ.ವಿ. ಗೋಪಾಲಕೃಷ್ಣ, ನೋಟರಿ, ಯಳಂದೂರು ಇವರ ಮನವಿ ದಿನಾಂಕ : 17-6-2010.

2. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಚಾಮರಾಜ ನಗರ ಇವರ ಪತ್ರ ಸಂಖ್ಯೆ :977/2011, ದಿನಾಂಕ: 10-5-2011.

ಪ್ರಸ್ತಾವನೆ :

ಶ್ರೀ ವೈ.ವಿ. ಗೋಪಾಲಕೃಷ್ಣ, ನೋಟರಿ, ಯಳಂದೂರುರವರು ರಾಜ್ಯ ಸರ್ಕಾರದಿಂದ 1997 ರಲ್ಲಿ ನೋಟರಿಯಾಗಿ ನೇಮಕ ಹೊಂದಿದ್ದು, ಇವರು 2008 ನೇ ಸಾಲಿನಿಂದ ನೋಟರಿಗಳ ನಿಯಮ 14 ರನ್ವಯ ನಮೂನೆ XIV ರಲ್ಲಿ ತಮ್ಮ ವಾರ್ಷಿಕ ರಿಟರ್ನ್ಸ್ ಅನ್ನು ಸರ್ಕಾರಕ್ಕೆ ಸಲ್ಲಿಸದಿರುವುದನ್ನು ಹಾಗೂ ರಿಜಿಸ್ಟರ್ ತಪಾಸಣಾ ವರದಿಯು ಸಕ್ಷಮ ಪ್ರಾಧಿಕಾರವಾದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರಿಂದ ಸಹ ಬಂದಿಲ್ಲದಿರುವುದನ್ನು ಪರಿಶೀಲಿಸಿ ವರದಿ ಕೋರಲಾಗಿತ್ತು. ಅದಕ್ಕೆ ಉತ್ತರವಾಗಿ ಶ್ರೀಯುತರು ಯಳಂದೂರಿನಲ್ಲಿ ವಾಸಿಸುತ್ತಿಲ್ಲವೆಂದೂ ನೋಟರಿ ಕೆಲಸ ಯಳಂದೂರಿನಲ್ಲಿ ಸಾಧ್ಯವಾಗದೆ ಪ್ರಮಾಣ ಪತ್ರವನ್ನು ನವೀಕರಿಸಿಕೊಂಡಿಲ್ಲವಾದ್ದರಿಂದ ಈ ಮೂಲಕ ರಾಜೀನಾಮೆ ಸಲ್ಲಿಸಿರುವುದಾಗಿ ದಿನಾಂಕ : 17-6-2010ರ ಮನವಿಯಲ್ಲಿ ದೃಢೀಕರಿಸಿದ್ದಾರೆ. ಆದ್ದರಿಂದ ರಾಜೀನಾಮೆಯನ್ನು ದಿನಾಂಕ : 17-6-2010 ರಿಂದ ಅಂಗೀಕರಿಸಬೇಕೆಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಾಮರಾಜನಗರರವರು ಮೇಲೆ (2) ರಲ್ಲಿ ಓದಲಾದ ದಿನಾಂಕ : 10-5-2011 ರ ಪತ್ರದಲ್ಲಿ ಕೋರಿರುತ್ತಾರೆ.

ನೋಟರಿಯವರ ಮನವಿ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಾಮರಾಜನಗರ ಇವರ ವರದಿಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 197 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ : 25-06-2011

ಶ್ರೀ ವೈ.ವಿ. ಗೋಪಾಲಕೃಷ್ಣ, ನೋಟರಿ, ಯಳಂದೂರು ಇವರ ರಾಜೀನಾಮೆಯನ್ನು ದಿನಾಂಕ : 17-6-2010 ರಿಂದ ಅನ್ವಯವಾಗುವಂತೆ ಅಂಗೀಕರಿಸಿ ಅವರ ಹೆಸರನ್ನು ನೋಟರಿಗಳ ಕಾಯ್ದೆ 1952 ರ ಕಲಂ 10 (ಎ) ರನ್ವಯ ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ಶಕುಂತಲ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಪಿ.ಆರ್. 1607 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ರೈಲ್ವೆ ಸ್ಟೇಷನ್ ಬಳಿ ವರ್ತುಲ ರಸ್ತೆ ಅಗಲೀಕರಣ ಮತ್ತು ಕೇಬಲ್ ಬ್ರಿಡ್ಜ್‌ಲೂಪ್ ನಿರ್ಮಾಣಕ್ಕಾಗಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ವಿಜನಾಪುರ ಗ್ರಾಮದ ಸರ್ವೆ ನಂ. 91 ಮತ್ತು 89 ರ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಅ.ಸ.ಪತ್ರ ಸಂಖ್ಯೆ : ಬೆಂಅಪ್ರಾ/ಭೂಸ್ವಾ/730/2010-11, ದಿನಾಂಕ : 22-7-2010 ಮತ್ತು 15-3-2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರು ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ವಿಜನಾಪುರ ಗ್ರಾಮದ ಸರ್ವೆ ನಂ. 91 ಮತ್ತು 89 ರಲ್ಲಿ ಕ್ರಮವಾಗಿ 1 ಎಕರೆ 20 ಗುಂಟೆ ಮತ್ತು 0-05 3/4 ಗುಂಟೆ ಜಮೀನನ್ನು ಕೆ.ಆರ್.ಪುರಂ ರೈಲ್ವೆಸ್ಟೇಷನ್ ಬಳಿ ವರ್ತುಲ ರಸ್ತೆ ಅಗಲೀಕರಣ ಮತ್ತು ಕೇಬಲ್ ಬ್ರಿಡ್ಜ್‌ಲೂಪ್ ನಿರ್ಮಿಸಲು ಪ್ರಾಧಿಕಾರವು ಸಂಖ್ಯೆ : BDA/COMMR/LAO/2008-09, ದಿನಾಂಕ : 6-8-2009 ರಂದು ಪ್ರಾಧಿಕಾರವು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿದ್ದು, ಈ ಅಧಿಸೂಚನೆಗೆ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲವೆಂದು, ಈ ಬಗ್ಗೆ ಅಂತಿಮ ಅಧಿಸೂಚನೆ ಹೊರಡಿಸುವ ಸಂಬಂಧ ಪ್ರಾಧಿಕಾರದ ವಿಷಯ ಸಂಖ್ಯೆ : 174/2010 ದಿನಾಂಕ : 16-6-2010 ರ ಸಮಿತಿಯು ತೀರ್ಮಾನಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976 ಕಲಂ 18(3) ರ ಪ್ರಕಾರ ಆಡಳಿತಾತ್ಮಕ ಮಂಜೂರಾತಿ ನೀಡಿ ಸದರಿ ಕಲಂ 19(1) ರ ಪ್ರಕಾರ ಅಂತಿಮ ಅಧಿಸೂಚನೆ ಹೊರಡಿಸುವಂತೆ ಕೋರಿರುತ್ತಾರೆ. ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 873 ಬೆಂಭೂಸ್ವಾ 2010, ಬೆಂಗಳೂರು, ದಿನಾಂಕ : 21-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ವಿಜನಾಪುರ ಗ್ರಾಮದ ಸರ್ವೆ ನಂ. 91 ಮತ್ತು 89 ರಲ್ಲಿ ಕ್ರಮವಾಗಿ 1 ಎಕರೆ 20 ಗುಂಟೆ ಮತ್ತು 0-05 3/4 ಗುಂಟೆ ಜಮೀನನ್ನು ಕೆ.ಆರ್. ಪುರಂ ರೈಲ್ವೆಸ್ಟೇಷನ್ ಬಳಿ ವರ್ತುಲ ರಸ್ತೆ ಅಗಲೀಕರಣ ಮತ್ತು ಕೇಬಲ್ ಬ್ರಿಡ್ಜ್ ಲೂಪ್ ನಿರ್ಮಿಸಲು ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976 ಕಲಂ 18(3) ರ ಪ್ರಕಾರ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ಕಾಮಗಾರಿಗೆ ತಗಲುವ ಅಂದಾಜು ರೂ. 15 ಕೋಟಿ (ಹದಿನೈದು ಕೋಟಿ) ವೆಚ್ಚವನ್ನು ಪ್ರಾಧಿಕಾರದ ಸಂಪನ್ಮೂಲಗಳಿಂದಲೇ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಪ್ರೇಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1608 ನಗರಾಭಿವೃದ್ಧಿ ಇಲಾಖೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : 13ನೇ ಆರ್ಥಿಕ ಆಯೋಗದ ಶಿಫಾರಸ್ಸಿನ ಅಡಿಯಲ್ಲಿ ಕೋರ್ಟ್ ಮ್ಯಾನೇಜರ್ ಹಾಗೂ ಸಿಬ್ಬಂದಿಯ ಹುದ್ದೆಗಳ ಸೃಜಿಸುವ ಬಗ್ಗೆ.

ಓದಲಾಗಿದೆ : 1. ಮಹಾವಿಲೇಖನಾಧಿಕಾರಿ, ಕರ್ನಾಟಕ ಉಚ್ಚ ನ್ಯಾಯಾಲಯ ಇವರ ಪತ್ರದ ಸಂಖ್ಯೆ : ಆರ್‌ಪಿಎಸ್ 58/2010 (ಹೆಚ್‌ಸಿಬಿ), ದಿನಾಂಕ : 11–3–2011.

2. ಸರ್ಕಾರಿ ಆದೇಶ ಸಂಖ್ಯೆ : ಲಾ 39 ಎಲ್‌ಸಿಇ 2011, ದಿನಾಂಕ : 18–6–2011.

3. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : FD 1659 F Secy (B & R) 11, ದಿನಾಂಕ : 23–6–2011.

ಪ್ರಸ್ತಾವನೆ :

ಮಹಾವಿಲೇಖನಾಧಿಕಾರಿ, ಕರ್ನಾಟಕ ಉಚ್ಚ ನ್ಯಾಯಾಲಯ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ 13ನೇ ಆರ್ಥಿಕ ಆಯೋಗದ ಅಡಿಯಲ್ಲಿ ಒದಗಿಸಲಾದ ಅನುದಾನಕ್ಕೆ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ರಾಜ್ಯದಲ್ಲಿ ಒಟ್ಟು 34 ಕೋರ್ಟ್ ಮ್ಯಾನೇಜರ್ ಹುದ್ದೆಗಳು ಅದರ ಜೊತೆಗೆ 136 ಸಹಾಯಕ ಸಿಬ್ಬಂದಿ ಹುದ್ದೆಗಳನ್ನು, ಅಂದರೆ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಶಾಖೆಗಳಿಗೆ 2 ಹಾಗೂ ಧಾರವಾಡ ಮತ್ತು ಗುಲ್ಬರ್ಗ ಉಚ್ಚ ನ್ಯಾಯಾಲಯದ ಸಂಚಾರಿ ನ್ಯಾಯಪೀಠಕ್ಕೆ ಒಂದೊಂದು ಮತ್ತು ರಾಜ್ಯದ ಪ್ರತಿ ಜಿಲ್ಲಾ ನ್ಯಾಯಾಲಯಕ್ಕೆ ಒಂದೊಂದರಂತೆ ಹಾಗೂ ಸದರಿ ಕಛೇರಿಗೆ ಹೊಂದಿಕೊಂಡಂತೆ ಪ್ರತಿ ನ್ಯಾಯಾಲಯಕ್ಕೆ 1 ಶೀಘ್ರಲಿಪಿಗಾರರು, 1 ಪ್ರಥಮ ದರ್ಜೆ ಸಹಾಯಕರು, 1 ದ್ವಿತೀಯ ದರ್ಜೆ ಸಹಾಯಕರು, 1 ಬೆರಳಚ್ಚುಗಾರರು ಹಾಗೂ 1 ಪ್ಯೂನ್ ಹುದ್ದೆಗಳನ್ನು ಸೃಜಿಸಲು ಮತ್ತು ಕಛೇರಿಯ ದಿನನಿತ್ಯದ ಉಪಯೋಗಕ್ಕೆ ಅಗತ್ಯವಾಗಿರುವ ವಿದ್ಯುಚ್ಛಕ್ತಿ ಹಾಗೂ ದೂರವಾಣಿ ಮತ್ತು ಪೀಠೋಪಕರಣಗಳನ್ನು ಖರೀದಿಸಲು ಒಟ್ಟಾರೆ ವಾರ್ಷಿಕ ರೂ. 315.00 ಲಕ್ಷಗಳನ್ನು ಒದಗಿಸಲಾಗಿದೆಯೆಂದು ತಿಳಿಸಿ, ಇದಕ್ಕೆ ಮಂಜೂರಾತಿಯನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮೇಲೆ ಓದಲಾದ (2)ರ ಸರ್ಕಾರಿ ಆದೇಶದನ್ವಯ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿತ್ತು. ಆದರೆ, ಸದರಿ ಆದೇಶದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗಿರುವುದರಿಂದ ಸರ್ಕಾರವು ಮೇಲೆ ಓದಲಾದ (2) ರ ಸರ್ಕಾರಿ ಆದೇಶವನ್ನು ಹಿಂದಕ್ಕೆ ಪಡೆದು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 39 ಎಲ್‌ಸಿಇ 2011, ಬೆಂಗಳೂರು, ದಿನಾಂಕ : 28–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ : 18–6–2011ರಂದು ಹೊರಡಿಸಲಾದ ಸಮ ಸಂಖ್ಯೆಯ ಸರ್ಕಾರಿ ಆದೇಶವನ್ನು ಹಿಂದಕ್ಕೆ ಪಡೆದು ಈ ಕೆಳಗಿನಂತೆ ಆದೇಶಿಸಿದೆ :–

2. ಕೇಂದ್ರ ಸರ್ಕಾರವು 13ನೇ ಆರ್ಥಿಕ ಆಯೋಗದ ಅಡಿಯಲ್ಲಿ ಒದಗಿಸಲಾಗಿರುವ ರೂ. 315.00 ಲಕ್ಷಗಳ (ಮೂರು ನೂರಾ ಹದಿನೈದು ಲಕ್ಷ ರೂಪಾಯಿಗಳು ಮಾತ್ರ) ಅನುದಾನದ ಅಡಿಯಲ್ಲಿ ಒಟ್ಟು 34 ಕೋರ್ಟ್ ಮ್ಯಾನೇಜರ್ ಹುದ್ದೆಗಳನ್ನು ಅಂದರೆ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಶಾಖೆಗಳಿಗೆ 2 ಹಾಗೂ ಧಾರವಾಡ ಮತ್ತು ಗುಲ್ಬರ್ಗಾ ಉಚ್ಚ ನ್ಯಾಯಾಲಯದ ಸಂಚಾರಿ ನ್ಯಾಯಪೀಠಕ್ಕೆ ಒಂದೊಂದು ಮತ್ತು ರಾಜ್ಯದ ಪ್ರತಿ ಜಿಲ್ಲಾ ನ್ಯಾಯಾಲಯಕ್ಕೆ ಒಂದೊಂದರಂತೆ ಕೋರ್ಟ್ ಮ್ಯಾನೇಜರ್ ಹುದ್ದೆಗಳನ್ನು ಸೃಜಿಸಲಾಗಿದೆ. ಜೊತೆಗೆ ಪ್ರತಿಯೊಂದು ಕೋರ್ಟ್ ಮ್ಯಾರೇಜರ್ ಹುದ್ದೆಗೆ ಸಹಾಯಕ ಸಿಬ್ಬಂದಿಯಾಗಿ, ಅಂದರೆ 1 ಶೀಘ್ರಲಿಪಿಗಾರರು, 1 ಪ್ರಥಮ ದರ್ಜೆ ಸಹಾಯಕರು, 1 ಬೆರಳಚ್ಚುಗಾರರು ಹಾಗೂ 1 ಪ್ಯೂನ್ ಹುದ್ದೆಗಳು ಸೇರಿದಂತೆ ಒಟ್ಟು 136 ಸಿಬ್ಬಂದಿ ಹುದ್ದೆಗಳನ್ನು ದಿನಾಂಕ 31–3–2015 ರವರೆಗೆ ಜಾರಿಯಲ್ಲಿರುವಂತೆ ಈ ಕೆಳಕಂಡ ಪಟ್ಟಿಯಲ್ಲಿ ಸೂಚಿಸಿರುವ ವಿವರಗಳನುಸಾರ ಹೊಸ ಹುದ್ದೆಗಳನ್ನು ಸೃಜಿಸಲು ಮತ್ತು ಅವುಗಳ ವೇತನ ಇತ್ಯಾದಿ ಸೌಲಭ್ಯಗಳನ್ನು ನೀಡಲು ಸರ್ಕಾರ ಮಂಜೂರಾತಿ ನೀಡಿದೆ :–

ಕ್ರ. ಸಂ.	ಹುದ್ದೆಗಳ ಹೆಸರು	ಒಟ್ಟು ಹುದ್ದೆಗಳು
1.	ಕೋರ್ಟ್ ಮ್ಯಾನೇಜರ್	34
2.	ಶೀಘ್ರಲಿಪಿಗಾರರು	34
3.	ಪ್ರಥಮ ದರ್ಜೆ ಸಹಾಯಕ	34
4.	ಬೆರಳಚ್ಚುಗಾರ	34
5.	ಪ್ಯೂನ್	34
	ಒಟ್ಟು	170

3. ಭಾರತ ಸರ್ಕಾರದ ಮಾರ್ಗಸೂಚಿಯಂತೆ ಒಟ್ಟು 34 ಕೋರ್ಟ್ ಮ್ಯಾನೇಜರ್ ಹುದ್ದೆಗಳ ನೇಮಕಾತಿಗೆ ಎಂಬಿಎ ವಿದ್ಯಾರ್ಹತೆಯನ್ನು ನಿಗದಿಪಡಿಸಿದ್ದು, ಈ ವಿದ್ಯಾರ್ಹತೆ ಹೊಂದಿದವರನ್ನು ಗುತ್ತಿಗೆ ಆಧಾರದ ಮೇಲೆ ರೂ. 50,000/– ಮಾಸಿಕ ಸಂಚಿತ ವೇತನವನ್ನು ನೀಡಿ ನೇಮಕಾತಿ ಮಾಡಿಕೊಳ್ಳಬಹುದು. ಇದಲ್ಲದೆ, ಇವರು ಬೇರೆ ಯಾವುದೇ ಭತ್ಯೆಗಳಿಗೆ ಅರ್ಹರಾಗುವುದಿಲ್ಲ. ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾದ ಕೋರ್ಟು ಮ್ಯಾನೇಜರ್‌ಗಳಿಗೆ ಪ್ರತಿ ವರ್ಷ ಶೇ. 10 ರಷ್ಟು ವೇತನವನ್ನು ಹೆಚ್ಚಿಸುವುದು.

4. 136 ಸಹಾಯಕ ಸಿಬ್ಬಂದಿ ಹುದ್ದೆಗಳಿಗೆ, ಆ ಹುದ್ದೆಗಳಿಗೆ ಅನ್ವಯವಾಗುವ ವೇತನ ಶ್ರೇಣಿಯನ್ನು ಮತ್ತು ಇತರೆ ಅರ್ಹ ಭತ್ಯೆಗಳನ್ನು ನೀಡುವುದು.

5. ಕಛೇರಿಯ ಆವರ್ತ ಮತ್ತು ಅನವರ್ತಕ ವೆಚ್ಚಗಳ ಬಗ್ಗೆ ಮಹಾ ವಿಲೇಖನಾಧಿಕಾರಿಯವರು ಅಂದಾಜು ವೆಚ್ಚಗಳನ್ನು ಯೋಜನೆಗೆ ರೂಪಿಸಿ ಅಳವಡಿಸಿಕೊಳ್ಳಲು ಸಹ ಸೂಚಿಸಲಾಗಿದೆ.

6. ಭಾರತ ಸರ್ಕಾರದ ಮಾರ್ಗಸೂಚಿಯಂತೆ ಬೆಳಗಿನ ಹಾಗೂ ಸಾಯಂಕಾಲದ ನ್ಯಾಯಾಲಯಗಳ ಕೋರಿಕೆಯನುಸಾರ ಒಟ್ಟು ರೂ. 15.76 ಕೋಟಿಗಳ ಹಂಚಿಕೆಯಾದ ಹಣದಲ್ಲಿ ಸದರಿ ನ್ಯಾಯಾಲಯಗಳಿಗೆ ಬೇಕಾಗುವ ಸಲಕರಣೆಗಳನ್ನು ಹಾಗೂ ಪೀಠೋಪಕರಣಗಳ ಇತರೆ ಬಾಬುಗಳ ಒಟ್ಟಾರೆ ಉಳಿತಾಯವಾಗುವ ಅನುದಾನದಿಂದ ಭರಿಸಲು ಕ್ರಮ ಕೈಗೊಳ್ಳುವಂತೆ ಅನುಮೋದನೆ ನೀಡಲಾಗಿದೆ.

7. ಭಾರತ ಸರ್ಕಾರದ ಮಾರ್ಗಸೂಚಿಯಂತೆ ಸೃಜಿಸಲಾದ ನ್ಯಾಯಾಲಯಗಳ ಹುದ್ದೆಗಳನ್ನು ದಿನಾಂಕ : 31-3-2015 ರ ವರೆಗೆ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಹುದ್ದೆಗಳ ಕಾರ್ಯ ಕ್ಷಮತೆಯನ್ನು ಮೌಲ್ಯಮಾಪನಗೊಳಿಸಿ ದಿನಾಂಕ: 31-3-2015ರ ನಂತರವೂ ಮುಂದುವರೆಸುವುದು ಅಗತ್ಯವೆಂದು ಪರಿಗಣಿಸಿದಲ್ಲಿ, ಈ ಬಗ್ಗೆ ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆಯಬಹುದಾಗಿದೆ. ಒಂದು ವೇಳೆ ಈ ಹುದ್ದೆಗಳನ್ನು ದಿನಾಂಕ : 31-3-2015ರ ನಂತರವು ಮುಂದುವರೆಸಲು ಇಚ್ಛಿಸಿದಲ್ಲಿ ಕೋರ್ಟ್ ಮ್ಯಾನೇಜರ್ ಹುದ್ದೆಗಳಿಗೆ ನೀಡಬಹುದಾದ ನಿಯತ ವೇತನ ಶ್ರೇಣಿ ಹಾಗೂ ನೇಮಕಾತಿ ವಿಧಾನಗಳ ಬಗ್ಗೆ ಆ ಹಂತದಲ್ಲಿಯೇ ನಿರ್ಧರಿಸಬೇಕಾಗುತ್ತದೆ.

8. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : 1659 F Secy (B & R) 11, ದಿನಾಂಕ : 23-6-2011 ರನ್ವಯ ಹೊರಡಿಸಲಾಗಿದೆ..

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಯ್ಯದ್ ಅಬ್ದುಲ್ ನಜೀರ್
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 1609

ತೋಟಗಾರಿಕೆ ಸಚಿವಾಲಯ

ವಿಷಯ : ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ವಾಹನ ಸಂಖ್ಯೆ : ಎಂಇಡಿ-6883ರ ವಾಹನ ಅಪಘಾತ ಸಂಭವಿಸಿದ ಬಗ್ಗೆ ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರ ವಿರುದ್ಧ-ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ವಾಕೈ 136 ರೇಕೃವಿ 2004, ದಿನಾಂಕ : 21-1-2011 ಮತ್ತು ದಿನಾಂಕ: 21-5-2011.
2. ಪತ್ರ ಸಂಖ್ಯೆ : ವಾಕೈ 136 ರೇಕೃವಿ 2004, ದಿನಾಂಕ : 16-12-2010.
3. ರೇಷ್ಮೆ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ : ರೇಉಕೋ/ಸಿ1/ಎಂಇಡಿ/6883/ಎಂವಿಸಿ/114/ 04/22/06-07, ದಿನಾಂಕ : 31-1-2011.
4. ತಿಳುವಳಿಕೆ ಪತ್ರ ಸಂಖ್ಯೆ : ವಾಕೈ 136 ರೇಕೃವಿ 2004, ದಿನಾಂಕ : 19-3-2011.
5. ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರ ರಕ್ಷಣಾ ಹೇಳಿಕೆ ದಿನಾಂಕ : 1-4-2011.
6. ಡಾ॥ ಹೆಚ್.ಎಸ್. ಪ್ರಕಾಶ್, ರೇಷ್ಮೆ ಉಪ ನಿರ್ದೇಶಕರು ಇವರ ಪತ್ರ ದಿನಾಂಕ : 4-6-2011.

ಪ್ರಸ್ತಾವನೆ :

ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ ಇಲ್ಲಿನ ವಾಹನ ಸಂಖ್ಯೆ : ಎಂಇಡಿ 6883 ಅಪಘಾತಕ್ಕೆ ಸಂಬಂಧಿಸಿದಂತೆ, ಸಿವಿಲ್ ದಾವೆ ಸಂಖ್ಯೆ : 114/2004 ರಲ್ಲಿ ಸಿವಿಲ್ ನ್ಯಾಯಾಲಯ (ಸೀನಿಯರ್ ಡಿವಿಜನ್) ಹಾಗೂ ವಾಹನ ಅಪಘಾತ ಪರಿಹಾರ ಮಂಡಳಿ, ಮದ್ದೂರು ಇಲ್ಲಿ ದಿನಾಂಕ : 12-8-2004 ರಲ್ಲಿ ನೀಡಿರುವ ತೀರ್ಪಿನಲ್ಲಿ ಅರ್ಜಿದಾರರಿಗೆ ಪರಿಹಾರ ಮೊತ್ತ ರೂ. 1,11,000/- ಶೇ. 6 ರ ಬಡ್ಡಿ ಸಮೇತ 1ನೇ ಪ್ರತಿವಾದಿಯಾದ ಜನರಲ್ ಮ್ಯಾನೇಜರ್, ಸಿಲ್ಕ್ ಫಿಲೇಚರ್ ಸಂತೇಮರಹಳ್ಳಿ, ಹಾಗೂ 2ನೇ ಪ್ರತಿವಾದಿಯಾದ ಕೆ.ಜಿ.ಐ.ಡಿ. ಬೆಂಗಳೂರು, ಇವರು ಜಂಟಿಯಾಗಿ ಜವಾಬ್ದಾರರಾಗಿರುವುದರಿಂದ ಮೊತ್ತವನ್ನು ಆದೇಶ ಹೊರಡಿಸಿದ 30 ದಿನಗಳೊಳಗಾಗಿ ಸಿವಿಲ್ ನ್ಯಾಯಾಲಯ (ಸೀನಿಯರ್ ಡಿವಿಜನ್) ಮದ್ದೂರು, ಇವರ ಹೆಸರಿನಲ್ಲಿ ಚೆಕ್ ಅನ್ನು ನೀಡಿ ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ ಮತ್ತು ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು ಇವರುಗಳಿಂದ ಹಣ ಹಾಗೂ ಬಡ್ಡಿಯನ್ನು ವಸೂಲು ಮಾಡಬೇಕಾದ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಸರ್ಕಾರದ ವತಿಯಿಂದ ರೂ. 1,11,000/- ಗಳನ್ನು ಶೇ. 6 ರ ಬಡ್ಡಿ ಸಮೇತ ನ್ಯಾಯಾಲಯಕ್ಕೆ ಪಾವತಿಸಲು ಅನುಮತಿ ನೀಡಲಾಗಿದೆ ಹಾಗೂ ಇಲಾಖಾ ವಿಚಾರಣೆ ನಂತರ ಸಕಾಲದಲ್ಲಿ ವಾಹನದ ವಿಮೆಯನ್ನು ನವೀಕರಿಸಲು ವಿಫಲರಾದ ಅಧಿಕಾರಿಗಳಿಂದ ಈ ಮೊತ್ತವನ್ನು ವಸೂಲಿ ಮಾಡಿ ಸರ್ಕಾರಕ್ಕೆ ತಿಳಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ ಹಾಗೂ ಸದರಿ ವಾಹನವು ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರ ಹತೋಟಿಯಲ್ಲಿರುವುದರಿಂದ ಅದರ ಸಂಪೂರ್ಣ ಹೊಣೆಗಾರಿಕೆ ಈ ಅಧಿಕಾರಿಯವರಿದ್ದಾಗಿದ್ದರಿಂದ ಶ್ರೀ ಎ. ನರಸಿಂಹಪ್ಪ ಅಂದಿನ ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ (ಪ್ರಸ್ತುತ ಅನ್ಯ ಕಾರ್ಯ ವ್ಯವಸ್ಥೆಯ ಮೇಲೆ ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ) ಹಾಗೂ ಶ್ರೀ ಜವರಾಯಿ, ರೇಷ್ಮೆ ಉಪ ನಿರ್ದೇಶಕರು ಹಾಗೂ ಉಸ್ತುವಾರಿ ಅಧಿಕಾರಿ, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಈ ಈರ್ವರ ಮೇಲೆ ಇಲಾಖಾ ವಿಚಾರಣೆ ನಡೆಸಿ ನ್ಯಾಯಾಲಯದ ಆದೇಶದಂತೆ ಹಣವನ್ನು ಬಡ್ಡಿ ಸಹಿತ ತ್ವರಿತವಾಗಿ ಇವರುಗಳಿಂದ ವಸೂಲು ಮಾಡಬೇಕಾಗಿರುವುದರಿಂದ ಹಾಗೂ ಇವರೀರ್ವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯಾದ್ದರಿಂದ ಈ ಅಧಿಕಾರಿಗಳ ಮೇಲೆ ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸುವಂತೆ ಮೇಲೆ ಓದಲಾದ ಕ್ರ. ಸಂ. 2 ರ ಪತ್ರದಲ್ಲಿ ರೇಷ್ಮೆ ಆಯುಕ್ತರನ್ನು ಕೋರಲಾಗಿತ್ತು. ಅದರಂತೆ, ಮೇಲೆ ಓದಲಾದ ಕ್ರ. ಸಂ. 3 ರ ಪತ್ರದಲ್ಲಿ ರೇಷ್ಮೆ ಆಯುಕ್ತರು ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸಿರುತ್ತಾರೆ. ವಿಷಯವನ್ನು ಪರಿಶೀಲಿಸಿ ಮುಖ್ಯ ಆರೋಪಿಯಾದ ಶ್ರೀ ಎ.ನರಸಿಂಹಪ್ಪ, ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಇವರಿಗೆ ಆರೋಪ ಪಟ್ಟಿಯನ್ನು ಮೇಲೆ ಓದಲಾದ ಕ್ರ. ಸಂ. 4 ರ ತಿಳುವಳಿಕೆ ಪತ್ರದಲ್ಲಿ ಜಾರಿಗೊಳಿಸಲಾಯಿತು. ಸದರಿ ತಿಳುವಳಿಕೆ ಪತ್ರದಲ್ಲಿಯ ಎಲ್ಲಾ ಆರೋಪಗಳನ್ನು ಸದರಿ ಅಧಿಕಾರಿಯವರ ಮೇಲೆ ಓದಲಾದ ಕ್ರಮ ಸಂ. 5ರಲ್ಲಿ ಅಲ್ಲಗಳೆದು ವಾಹನದ ವಿಮೆ ಮೊತ್ತವನ್ನು ಸಕಾಲದಲ್ಲಿ ಪಾವತಿಸದೇ ಕರ್ತವ್ಯ ನಿರ್ಲಕ್ಷತೆಯನ್ನು ತೋರಿರುವ ಶ್ರೀ ಎಂ.ಪಿ. ಸುಬ್ಬಣ್ಣ, ಇತರೆ ಗುಮಾಸ್ತರು ಹಾಗೂ ವಿಮೆ ರಕ್ಷಣೆ ಇಲ್ಲದ ವಾಹನವನ್ನು ಚಾಲನೆ ಮಾಡಿ ಅಪಘಾತಕ್ಕೀಡು ಮಾಡಿದ ಚಾಲಕ ಶ್ರೀ ಎಸ್. ಶೇಷಾದ್ರಿ ಜವಾಬ್ದಾರರೆಂದು ತಿಳಿಸಿರುತ್ತಾರೆ.

ಇದು ನ್ಯಾಯಾಲಯ ಪ್ರಕರಣವಾಗಿದ್ದು, ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಪ್ರಸ್ತುತ ರೇಷ್ಮೆ ವಿನಿಯಮ ಕೇಂದ್ರದಲ್ಲಿ (ನಿಯೋಜನೆ), ಓಕಳಿಪುರಂ, ಬೆಂಗಳೂರು, ಇವರ ಮುಖ್ಯ ಆರೋಪಿಯಾಗಿದ್ದು, ತಮ್ಮ

ಮೇಲಿನ ಆರೋಪಗಳನ್ನು ಒಪ್ಪಿಕೊಳ್ಳದೇ ಇರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವಾಗಿರುತ್ತದೆಯಾದುದರಿಂದ, ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ಶ್ರೀ ಹೆಚ್.ಎಸ್. ಪ್ರಕಾಶ್, ರೇಷ್ಮೆ ಉಪ ನಿರ್ದೇಶಕರು, ಕೇಂದ್ರ ಕಛೇರಿ, ರೇಷ್ಮೆ ಇಲಾಖೆ, ಬೆಂಗಳೂರು, ಇವರನ್ನು ವಿಚಾರಣಾ ಅಧಿಕಾರಿಯನ್ನಾಗಿ ಹಾಗೂ ಶ್ರೀ ಹೆಚ್.ಬಿ. ಪುಟ್ಟಸ್ವಾಮಿ, ಪತ್ರಾಂಕಿತ ವ್ಯವಸ್ಥಾಪಕರು–1, ರೇಷ್ಮೆ ಉದ್ಯಮಕೋಶ, ಓಕಳಿಪುರಂ ಇವರನ್ನು ಪ್ರಕರಣದ ಮಂಡನಾಧಿಕಾರಿಯನ್ನಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ : (1)ರ ದಿನಾಂಕ : 21–5–2011ರ ಆದೇಶದಲ್ಲಿ ನೇಮಕ ಮಾಡಲಾಗಿತ್ತು. ಶ್ರೀ ಹೆಚ್.ಎಸ್. ಪ್ರಕಾಶ್, ರೇಷ್ಮೆ ಉಪ ನಿರ್ದೇಶಕರು, ಕೇಂದ್ರ ಕಛೇರಿ, ರೇಷ್ಮೆ ಇಲಾಖೆ, ಇವರು ಕೆಲಸದ ಒತ್ತಡದ ಕಾರಣ ವಿಚಾರಣಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಕಷ್ಟಸಾಧ್ಯವಾದ ಪ್ರಯುಕ್ತ ಅವರ ಬದಲಿಗೆ ಬೇರೆಯವರನ್ನು ವಿಚಾರಣಾಧಿಕಾರಿಯನ್ನಾಗಿ ಕಾರ್ಯನಿರ್ವಹಿಸಲು ನೇಮಕ ಮಾಡಬೇಕೆಂದು ಮೇಲೆ ಓದಲಾದ (6)ರ ಪತ್ರದಲ್ಲಿ ಕೋರಿರುವ ಹಿನ್ನೆಲೆಯಲ್ಲಿ ಶ್ರೀ ಬಿ.ಎಸ್. ಪಾಟೀಲ್, ಆಡಳಿತಾಧಿಕಾರಿ, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು ಇವರನ್ನು ಪ್ರಸ್ತುತ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿ ಮಾಡಲು ರೇಷ್ಮೆ ಆಯುಕ್ತರು ಒಪ್ಪಿರುವುದರಿಂದ ಈ ಕೆಳಗಿನಂತೆ ಮಾರ್ಪಡಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 136 ರೇಕೃವಿ 2004, ಬೆಂಗಳೂರು, ದಿನಾಂಕ : 29–06–2011

ವಾಹನ ಸಂಖ್ಯೆ : ಎಂಇಡಿ 6883 ರ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಆರೋಪಿಯಾದ ಶ್ರೀ ಎ. ನರಸಿಂಹಪ್ಪ, ಅಂದಿನ ಪ್ರಧಾನ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ, ಪ್ರಸ್ತುತ ರೇಷ್ಮೆ ವಿನಿಮಯ ಕೇಂದ್ರದಲ್ಲಿ (ನಿಯೋಜನೆ), ಓಕಳಿಪುರಂ, ಬೆಂಗಳೂರು, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸುವುದಕ್ಕಾಗಿ ಶ್ರೀ ಹೆಚ್.ಎಸ್. ಪ್ರಕಾಶ್, ರೇಷ್ಮೆ ಉಪ ನಿರ್ದೇಶಕರು, ಕೇಂದ್ರ ಕಛೇರಿ, ರೇಷ್ಮೆ ಇಲಾಖೆ, ಬೆಂಗಳೂರು, ಅವರ ಬದಲಿಗೆ ಶ್ರೀ ಬಿ.ಎಸ್. ಪಾಟೀಲ್, ಆಡಳಿತಾಧಿಕಾರಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು ಇವರನ್ನು ಪ್ರಸ್ತುತ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿ ಹಾಗೂ ಶ್ರೀ ಹೆಚ್.ಬಿ. ಪುಟ್ಟಸ್ವಾಮಿ, ಪತ್ರಾಂಕಿತ ವ್ಯವಸ್ಥಾಪಕರು–1, ರೇಷ್ಮೆ ಉದ್ಯಮಕೋಶ, ಓಕಳಿಪುರಂ ಇವರನ್ನು ಪ್ರಕರಣದ ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ನ್ಯಾಯಾಲಯದ ಪ್ರಕರಣವಾದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ವಿಚಾರಣಾಧಿಕಾರಿ ವಿಚಾರಣೆ ನಡೆಸಿ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಭಾರತಿ ಆರ್. ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),

ತೋಟಗಾರಿಕೆ ಇಲಾಖೆ. (ರೇಷ್ಮೆ).

ಪಿ.ಆರ್. 1610

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕ, ವಾಣಿಜ್ಯ ತೆರಿಗೆ ಇಲಾಖೆ, ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಆಇ 160 ವಾತೆಸಿ 99, ದಿನಾಂಕ : 1–4–2000.
2. ಸರ್ಕಾರಿ ಆದೇಶ ಸಂಖ್ಯೆ : ಆಇ 160 ವಾತೆಸಿ 99, ದಿನಾಂಕ : 2–12–2004.
3. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ : 358/2005 ಆದೇಶ ದಿನಾಂಕ : 16–12–2009.
4. ಸರ್ಕಾರಿ ಆದೇಶ ಸಂಖ್ಯೆ : ಆಇ 71 ವಾತೆತ 2008, ದಿನಾಂಕ : 1–6–2010.
5. ವಿಚಾರಣಾ ವರದಿ ದಿನಾಂಕ : 29–7–2003.
6. ಮಾನ್ಯ ಉಪ ಲೋಕಾಯುಕ್ತರ ಪತ್ರ ಸಂಖ್ಯೆ : ಲೋಕ್/ಎಆರ್ಇ–4/ಇಎನ್‌ಕ್ಯೂ–28/2002–03, ದಿನಾಂಕ : 21–12–2010.
7. ಸರ್ಕಾರದ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ : ಆಇ 52 ವಾತೆತ 2010, ದಿನಾಂಕ : 1–1–2011.
8. ಶ್ರೀ ಎಸ್. ದಿನೇಶ್ ಕುಮಾರ್‌ರವರ ಸಮಜಾಯಿಷಿ ದಿನಾಂಕ : 21–3–2011.
9. ವಾಣಿಜ್ಯ ತೆರಿಗೆ ಆಯುಕ್ತರ ಪತ್ರ ಸಂಖ್ಯೆ : ವಿಸಿಆರ್/ಎನ್‌ಜಿಜಿಡ್/ಸಿಆರ್–09/1993–94, ದಿನಾಂಕ: 2–6–2011.

ಪ್ರಸ್ತಾವನೆ :

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರ ದಿನಾಂಕ : 11–6–1999 ರಲ್ಲಿ ಕರ್ನಾಟಕ ಉಪ ಲೋಕಾಯುಕ್ತರ ತನಿಖಾ ವರದಿಯನ್ನು ಕಳುಹಿಸಿದ್ದು, ಸದರಿ ವರದಿಯಲ್ಲಿ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕರು (ಆಪಾದಿತ ನೌಕರ–1) ಹಾಗೂ ಶ್ರೀ ಎನ್.ಎ. ಬಾಲಚಂದರ್, ವಾಹನ ಚಾಲಕ (ಆಪಾದಿತ ನೌಕರ–2), ಇವರುಗಳು ಮೈಸೂರಿನ ವಾಣಿಜ್ಯ ತೆರಿಗೆ ಅಧಿಕಾರಿ ಕಛೇರಿ, ವಸೂಲಿ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಮಾಲೀಕರು, ಮೆ. ಜಯರಾಂ ಮುರುಗನ್ ಫರ್ನೀಚರ್ಸ್, ಮೈಸೂರು, ಇವರಿಂದ ಕಾರ್ಖಾನೆಯ ಯಂತ್ರೋಪಕರಣಗಳಿಗೆ ಹಾಕಿದ್ದ ಬೀಗಮುದ್ರೆಯನ್ನು ತೆರೆಯಲು ರೂ. 1,000/– ಗಳ ಅಕ್ರಮ ಸಂಭಾವನೆಯನ್ನು ನೀಡಬೇಕೆಂದು ಶ್ರೀ ದಿನೇಶ್ ಕುಮಾರ್‌ರವರು ಒತ್ತಾಯಿಸಿದ್ದು, ದಿನಾಂಕ : 9–7–1993 ರಂದು ಫಿರ್ಯಾದಿಯಿಂದ ಶ್ರೀ ಬಾಲಚಂದ್ರ, ಇವರು ಕಾರ್ಖಾನೆಯ ಕಛೇರಿಯಲ್ಲಿ ಮಧ್ಯವರ್ತಿಯಾಗಿ ಹಣ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರು ಬೀಸಿದ ಬಲೆಗೆ ಸಿಕ್ಕಿಬಿದ್ದಿರುತ್ತಾರೆಂದು ಮತ್ತು ಆಪಾದಿತ ನೌಕರರ ವಿರುದ್ಧ ಫಿರ್ಯಾದುದಾರರ ದೂರಿನಂತೆ ಲಂಚ ನಿರ್ಮೂಲ ಕಾಯ್ದೆ 1988ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುವುದಾಗಿ ತಿಳಿಸಿದ್ದರು. ತನಿಖೆಯ ಸಮಯದಲ್ಲಿ ಸಂಗ್ರಹಿಸಲಾದ ಮಾಹಿತಿಗಳನ್ವಯ ಆಪಾದಿತ ನೌಕರರು ಮೇಲ್ನೋಟಕ್ಕೆ ಅಕ್ರಮ ಸಂಭಾವನೆಯನ್ನು ಅನುಕೂಲಕರ ಕೆಲಸ ಮಾಡುವುದಾಗಿ ಫಿರ್ಯಾದುದಾರರಿಂದ ಪಡೆಯುವುದು ಸಾಬೀತಾಗಿರುವುದರಿಂದ ಮತ್ತು ಆಪಾದಿತ ನೌಕರರಿಗೆ ಈ ಬಗ್ಗೆ ಕಾರಣ ಕೇಳುವ ನೋಟೀಸನ್ನು ನೀಡಿದ್ದರ ಹಿನ್ನೆಲೆಯಲ್ಲಿ ನೌಕರರು ನೀಡಿರುವ ಸಮಜಾಯಿಷಿಯು ತೃಪ್ತಿಕರವಾಗಿಲ್ಲವಾದ್ದರಿಂದ ಅದನ್ನು ತಿರಸ್ಕರಿಸಿ ಸದರಿ ನೌಕರರ ವಿರುದ್ಧ ಮಾಡಲಾದ ಆಪಾದನೆಯು ಸಾಬೀತಾಗಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರ ಪ್ರಕಾರ ಸದರಿ ನೌಕರರ ಮೇಲೆ ಕಠಿಣ ದಂಡನೆಯನ್ನು ವಿಧಿಸುವ ಸಲುವಾಗಿ ಶಿಸ್ತುಕ್ರಮವನ್ನು ನಿಯಮಾನುಸಾರ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿತ್ತು. ಅದರಂತೆ ಈ ಪ್ರಕರಣದಲ್ಲಿ ಆಪಾದನೆಯು ಗಂಭೀರ ಸ್ವರೂಪವಾಗಿದ್ದರಿಂದ ಸದರಿ ನೌಕರರ ಮೇಲೆ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ

ಮತ್ತು ಮೇಲ್ಮನವಿ) 1957ರ ನಿಯಮ 14–ಎ ರಡಿಯಲ್ಲಿ ಇಲಾಖಾ ತನಿಖೆಯನ್ನು ಮಾನ್ಯ ಕರ್ನಾಟಕ ಉಪ ಲೋಕಾಯುಕ್ತರಿಗೆ, ವಹಿಸಿ, ಮತ್ತು ಮೇಲ್ಕಾಣಿಸಿದ ನಿಯಮಾವಳಿಗಳ ನಿಯಮ–11 ರಡಿಯಲ್ಲಿ ಶಿಸ್ತುಕ್ರಮ ಜರುಗಿಸಲು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (1) ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿತ್ತು.

ನಂತರ ಲೋಕಾಯುಕ್ತರ ಶಿಫಾರಸ್ಸಿನಂತೆ ಮೇಲೆ ಓದಲಾಗಿರುವ (2)ರ ಆದೇಶದನ್ವಯ ಶ್ರೀ ಎಸ್. ದಿನೇಶ್ ಕುಮಾರ್‌ರವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಲಾಗಿತ್ತು. ಈ ಆದೇಶದ ವಿರುದ್ಧ ಶ್ರೀ ದಿನೇಶ್ ಕುಮಾರ್‌ರವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿದ್ದು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (3)ರ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಉಪ ಲೋಕಾಯುಕ್ತರಿಗೆ ವಹಿಸಿದ್ದು, ಲೋಕಾಯುಕ್ತರವರು ಶಿಫಾರಸ್ಸು ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ ಎಂದು ತಿಳಿಸಿ, ಇವರ ವಜಾ ಆದೇಶವನ್ನು ತಳ್ಳಿಹಾಕಿ ವಿಚಾರಣೆಯ ದಾಖಲೆಗಳನ್ನು ಮಾನ್ಯ ಉಪ ಲೋಕಾಯುಕ್ತರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡುವಂತೆ ಆದೇಶಿಸಿರುತ್ತದೆ. ಅದರಂತೆ ಈ ಪ್ರಕರಣದ ವಿಚಾರಣಾ ದಾಖಲೆಗಳನ್ನು ಮಾನ್ಯ ಉಪ ಲೋಕಾಯುಕ್ತರಿಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಕಳುಹಿಸಲಾಗಿತ್ತು.

ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ : 358/2005 ರ ಮೇಲೆ ದಿನಾಂಕ : 16–12–2009 ರಲ್ಲಿ ನೀಡಿದ ತೀರ್ಪಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಆಇ 160 ವಾತೆಸಿ 99, ದಿನಾಂಕ : 2–12–2004ನ್ನು ಅನೂರ್ಜಿತಗೊಳಿಸಿರುವುದರಿಂದ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (4) ರ ಆದೇಶದನ್ವಯ ಶ್ರೀ ಎಸ್. ದಿನೇಶ್ ಕುಮಾರ್, ಇವರನ್ನು ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಯಲ್ಲಿ ಪುನರ್ ಸ್ಥಾಪಿಸಲಾಗಿದೆ. ಅದರಂತೆ ನೌಕರರು ದಿನಾಂಕ : 4–6–2010ರ ಪೂರ್ವಾಹ್ನದಂದು ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಶ್ರೀ ಎಸ್. ದಿನೇಶ್ ಕುಮಾರ್, ವಾ.ತೆ.ಪ., ಇವರ ವಿರುದ್ಧದ ಲೋಕಾಯುಕ್ತ ವಿಚಾರಣೆಯ ಸಾಕ್ಷಾಧಾರಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿರುವ ಮಾನ್ಯ ಉಪ ಲೋಕಾಯುಕ್ತರು ಪ್ರಕರಣದ ವಿಚಾರಣೆ ನಡೆಸಿರುವ ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ : 29–7–2003 ರಲ್ಲಿನ ನಿರ್ಣಯಗಳನ್ನು ಒಪ್ಪಿರುತ್ತಾರೆ. ಆರೋಪಿತ ನೌಕರನ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾಗಿವೆ ಎಂದು ತಿಳಿಸಿದ್ದಾರೆ.

ಪ್ರಕರಣದ ವಾಸ್ತವಾಂಶಗಳನ್ನು ಗಮನದಲ್ಲಿರಿಸಿಕೊಂಡು ಆರೋಪಿತ ನೌಕರ ಶ್ರೀ ಎಸ್. ದಿನೇಶ್ ಕುಮಾರ್, ವಾ.ತೆ.ಪ., ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ–8 (VI) ರನ್ವಯ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ಮಾನ್ಯ ಉಪ ಲೋಕಾಯುಕ್ತರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (6) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾ ವರದಿ ದಿನಾಂಕ : 29–7–2003 ಮತ್ತು ದಿನಾಂಕ : 21–12–2010 ರ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಸರ್ಕಾರವು ಏಕೆ ಅಂಗೀಕರಿಸಬಾರದೆಂಬ ಬಗ್ಗೆ ಆರೋಪಿತ ನೌಕರರ ಹೇಳಿಕೆ ಏನಾದರೂ ಇದ್ದಲ್ಲಿ ನೋಟೀಸು ತಲುಪಿದ 15 ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (7)ರ 2ನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಆಪಾದಿತ ನೌಕರರಾದ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕರು, 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರದಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

1) Upalokayukta has not discussed the evidence but has simply agreed with the findings of the Inquiry Officer,
2) Judgement of the criminal case has not been examined as ordered by the KAT.
3) No reasons are given for agreeing with the Inquiry Officer,
4) The complainant has paid Rs. 1,000 towards arrears of tax and due to rain on the day of trap the receipt book was kept in the jeep and hence receipt could not be issued to the complainant. This has not been taken note of by the Inquiry Officer, whereas the same was appreciated by the Special Judge in the Criminal case.

ಆರೋಪಿತ ನೌಕರರು ಉಪ ಲೋಕಾಯುಕ್ತರು ವಿಚಾರಣೆಯಲ್ಲಿನ ಸಾಕ್ಷಿಗಳ ಹೇಳಿಕೆ ಇತ್ಯಾದಿಗಳನ್ನು ಚರ್ಚಿಸಿಲ್ಲ ಎಂಬ ಬಗ್ಗೆ ಮಾನ್ಯ ಉಪ ಲೋಕಾಯುಕ್ತರು ತಮ್ಮ ಶಿಫಾರಸ್ಸಿನಲ್ಲಿ I have carefully considered the material and evidence on record ಎಂದು ತಿಳಿಸಿರುತ್ತಾರೆ. ಪ್ರತಿ ಸಾಕ್ಷಿ ದಾಖಲೆಗಳ ಬಗ್ಗೆಯೂ ಮಾನ್ಯ ಉಪ ಲೋಕಾಯುಕ್ತರು ತಮ್ಮ ಶಿಫಾರಸ್ಸಿನೊಂದಿಗೆ ಚರ್ಚಿಸಲಾಗುವುದಿಲ್ಲ. ಎರಡನೇ ಅಂಶದ ಬಗ್ಗೆ ಇದು ಇಲಾಖಾ ವಿಚಾರಣೆಯಾಗಿದ್ದು, ಕ್ರಿಮಿನಲ್ ಮೊಕದ್ದಮೆಗಳಂತೆ ಆಪಾದನೆಗಳ ಪೂರ್ಣ ರುಜುವಾತಿಗೆ ಅಗತ್ಯವಿರುವ ಸಾಕ್ಷಿಗಳು/ ದಾಖಲೆಗಳನ್ನು ಲಭ್ಯಪಡಿಸುವ ಅವಶ್ಯಕತೆ ಇರುವುದಿಲ್ಲ. ಸಾಂದರ್ಭಿಕ ಸಾಕ್ಷಿಗಳ ಆಧಾರದ ಮೇಲೆ ಆಪಾದನೆಗಳು ರುಜುವಾತಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ನಿರ್ಣಯ ಕೈಗೊಳ್ಳಲಾಗುತ್ತದೆ. 4ನೇ ಅಂಶದ ಬಗ್ಗೆ ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿಯ ಪುಟ 14–18 ರಲ್ಲಿ ವಿವರವಾಗಿ ಚರ್ಚಿಸಿದ್ದು, ಆಪಾದಿತ ನೌಕರರ ವಾದವನ್ನು ಒಪ್ಪಿರುವುದಿಲ್ಲ.

ಆದ್ದರಿಂದ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕರ ವಿರುದ್ಧ ಲಂಚ ಪಡೆದ ಆಪಾದನೆ ಸಾಬೀತಾಗಿದೆ ಎಂಬ ವಿಚಾರಣಾಧಿಕಾರಿಗಳು ಮತ್ತು ಉಪಲೋಕಾಯುಕ್ತರ ವರದಿಗಳನ್ನು ಸರ್ಕಾರವು ಪರಿಶೀಲಿಸಿ, ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ತೀವ್ರತರ ದಂಡನೆಯನ್ನು ವಿಧಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 52 ವಾತೆತ 2010, ಬೆಂಗಳೂರು, ದಿನಾಂಕ : 23–06–2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(vi) ರ ಪ್ರಕಾರ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕ, ವಾಣಿಜ್ಯ ತೆರಿಗೆ ಇಲಾಖೆ, ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಆರ್. ಚಂದ್ರಶೇಖರಾರಾಧ್ಯ

ಪೀಠಾಧಿಕಾರಿ,

ಪಿ.ಆರ್. 1611 ಆರ್ಥಿಕ ಇಲಾಖೆ. (ವಾಣಿಜ್ಯ ತೆರಿಗೆ–2).

ಇಂಧನ ಸಚಿವಾಲಯ

ತಿದ್ದುಪಡಿ

ಆದೇಶ ಸಂಖ್ಯೆ : ಇಎನ್ 278 ಎನ್‌ಸಿಇ 2011, ಬೆಂಗಳೂರು ದಿನಾಂಕ : 25–06–2011

ಸರ್ಕಾರಿ ಆದೇಶ ಸಂಖ್ಯೆ : ಇಎನ್ 261 ಎನ್‌ಸಿಇ 2010 ದಿನಾಂಕ : 16–09–2010ರ ಪ್ರಸ್ತಾವನೆ ಮತ್ತು ಆದೇಶ ಭಾಗದಲ್ಲಿ ನಮೂದಿಸಲಾಗಿರುವ

"ಸಿಂಧನೂರು ತಾಲ್ಲೂಕು"

ಎಂಬುದನ್ನು

"ಮಾನ್ವಿ ತಾಲ್ಲೂಕು"

ಎಂದು ತಿದ್ದುಪಡಿಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. ನಂ. 1612

ಆರ್ಥಿಕ ಸಚಿವಾಲಯ

ತಿದ್ದೋಲೆ

ಆದೇಶ ಸಂಖ್ಯೆ : ಆಇ 141 ಟಿಎಫ್‌ಪಿ 2010, ಬೆಂಗಳೂರು ದಿನಾಂಕ : 23–05–2011

ವಿಷಯ : ಇಲಾಖಾ ಮುಖ್ಯಸ್ಥರು ಮತ್ತು ವಿವಿಧ ದರ್ಜೆಯ ಅಧಿಕಾರಿಗಳಿಗೆ ನೀಡಲಾದ ವಿತ್ತಾಧಿಕಾರವನ್ನು ಚಲಾಯಿಸಲು ಅಧಿಕಾರಿಗಳನ್ನು ಗುರುತಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ : ಆಇ 2 ಟಿಎಫ್‌ಪಿ 98 ದಿನಾಂಕ : 17–05–1999 ರಲ್ಲಿ ಆಡಳಿತ ಇಲಾಖೆ ನಗರಾಭಿವೃದ್ಧಿ ಇಲಾಖೆಯ ಎದುರು ಬರುವ ಕಾಲಂಗಳು :

ಇಲಾಖೆಯ ಹೆಸರು ಅಥವಾ ಇಲಾಖಾ ಮುಖ್ಯಸ್ಥರು	ವಿಭಾಗೀಯ ಮಟ್ಟದ ಅಧಿಕಾರ	ಜಿಲ್ಲಾ ಮಟ್ಟದ ಅಧಿಕಾರಿ	ಉಪ ವಿಭಾಗೀಯ ಮಟ್ಟದ ಅಧಿಕಾರಿ	ತಾಲ್ಲೂಕು ಮಟ್ಟದ ಅಧಿಕಾರಿ
ನಿರ್ದೇಶಕರು ನಗರ ಯೋಜನೆ	ಜಂಟಿ ನಿರ್ದೇಶಕರು ನಗರ ಯೋಜನೆ	ಉಪ ನಿರ್ದೇಶಕರು ನಗರ ಯೋಜನೆ	ಸಹಾಯಕ ನಿರ್ದೇಶಕರು ನಗರ ಯೋಜನೆ	---

ಬದಲಾಗಿ

ಇಲಾಖೆಯ ಹೆಸರು ಅಥವಾ ಇಲಾಖಾ ಮುಖ್ಯಸ್ಥರು	ವಿಭಾಗೀಯ ಮಟ್ಟದ ಅಧಿಕಾರ	ಜಿಲ್ಲಾ ಮಟ್ಟದ ಅಧಿಕಾರಿ	ಉಪ ವಿಭಾಗೀಯ ಮಟ್ಟದ ಅಧಿಕಾರಿ	ತಾಲ್ಲೂಕು ಮಟ್ಟದ ಅಧಿಕಾರಿ
ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ	ಹೆಚ್ಚುವರಿ ನಿರ್ದೇಶಕರು/ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ	ಉಪ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ	ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ	---

ಎಂದು ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಹೇಮರಾಜು

ಸರ್ಕಾರದ ಉಪ ಕಾರ್ಯದರ್ಶಿ (ಪ್ರಭಾರ)

ಆರ್ಥಿಕ ಇಲಾಖೆ

(ಆರ್ಥಿಕ ನಿಯಮಗಳು, ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆ)

ಪಿ.ಆರ್. ನಂ. 1613

ಕಂದಾಯ ಸಚಿವಾಲಯ

ವಿಷಯ : ಡಾ: ಸುಧಾ ಬಿ. ತಹಶೀಲ್ದಾರ್, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 110 ಎಎಸ್‌ಡಿ 2006, ದಿನಾಂಕ : 22-06-2006.
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಆರ್‌ಡಿ 135 ಎಎಸ್‌ಡಿ 2006, ದಿನಾಂಕ : 25-08-2006.
3. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 292 ಎಎಸ್‌ಡಿ 2008, ದಿನಾಂಕ : 19-11-2008, 19-01-2009, 04-04-2009, ಮತ್ತು 01-02-2010.
4. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 292 ಎಎಸ್‌ಡಿ 2008, ದಿನಾಂಕ : 05-05-2011.
5. ಡಾ: ಸುಧಾ ಬಿ., ತಹಶೀಲ್ದಾರ್, ಇವರ ಮನವಿ ದಿನಾಂಕ : 20-04-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ : 22-06-2006ರ ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1997ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಒಟ್ಟು 40 ಅಭ್ಯರ್ಥಿಗಳನ್ನು ಪ್ರೊಬೇಷನರಿ ತಹಶೀಲ್ದಾರ್ ಗುಂಪು-ಬಿ ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಒಟ್ಟು 40 ಪ್ರೊಬೇಷನರಿ ತಹಶೀಲ್ದಾರರುಗಳನ್ನು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಕನ್ನಡ ಭಾಷಾ ಪರೀಕ್ಷೆ ಮತ್ತು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ ಎಲ್ಲಾ 40 ಪ್ರೊಬೇಷನರಿ ತಹಶೀಲ್ದಾರರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (2) ದಿನಾಂಕ : 25-08-2006ರಲ್ಲಿ ಎಲ್ಲಾ ಪ್ರೊಬೇಷನರಿ ತಹಶೀಲ್ದಾರರುಗಳಿಗೆ ಎರಡು ವರ್ಷಗಳ ತರಬೇತಿಗಾಗಿ ವಿವಿಧ ಜಿಲ್ಲೆಗಳಿಗೆ ತೈನಾತಿಸಲಾಗಿತ್ತು. ಇವರುಗಳಲ್ಲಿ ವಿವಿಧ ಕಾರಣಗಳಿಂದ/ಬೇರೆ ಹುದ್ದೆಗೆ ನೇಮಕಗೊಂಡಿದ್ದರಿಂದ ಒಟ್ಟು 6 ಪ್ರೊಬೇಷನರಿ ತಹಶೀಲ್ದಾರರುಗಳು ಸೇವೆಯಿಂದ ಬಿಟ್ಟು ಹೋಗಿರುತ್ತಾರೆ. ಮೇಲೆ ಓದಲಾದ ಕ್ರ.ಸಂ. (3), ದಿನಾಂಕ : 19-11-2008, 19-01-2009, 04-04-2009 ಹಾಗೂ 04-02-2010 ರಲ್ಲಿ ಕ್ರಮವಾಗಿ 15, 13, 04 ಮತ್ತು 01 ಪ್ರೊಬೇಷನರಿ ತಹಶೀಲ್ದಾರರುಗಳು ಇಲಾಖಾ ಪರೀಕ್ಷೆ ಪಾಸಾಗಿದ್ದು ಮತ್ತು ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರಲಿಲ್ಲವಾದ್ದರಿಂದ ಹಾಗೂ ಅವರುಗಳ ಕಾರ್ಯ ನಿರ್ವಹಣಾ ವರದಿಗಳು ಸಮರ್ಪಕವಾಗಿದ್ದರಿಂದ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) 1977ರ ನಿಯಮ 5(1) ರನ್ವಯ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಲಾಗಿತ್ತು.

ಸದರಿ 2005ನೇ ತಂಡದ ಪೈಕಿ ಡಾ: ಸುಧಾ ಬಿ. ತಹಶೀಲ್ದಾರರು ಇವರ ಪ್ರೊಬೇಷನ್ ಅವಧಿಯನ್ನು ಸದರಿಯವರು ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೇ ಇದ್ದುದರಿಂದ ಮೇಲೆ ಓದಲಾದ ಕ್ರ.ಸಂ. (4)ರ ದಿನಾಂಕ : 05-05-2011ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) 1977ರ ನಿಯಮ 4(1) (ii) ರನ್ವಯ ಪ್ರೊಬೇಷನ್ ಅವಧಿಯನ್ನು ದಿನಾಂಕ : 31-12-2010 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (5)ರ ದಿನಾಂಕ : 20-04-2011 ರಲ್ಲಿ ಡಾ: ಸುಧಾ ಬಿ., ತಹಶೀಲ್ದಾರ್‌ರವರು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವುದಾಗಿ ತಿಳಿಸಿ, ತಮ್ಮ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವಂತೆ ಕೋರಿದ್ದರು.

ಸದರಿಯವರು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಪಾಸಾಗಿರುವ ಬಗ್ಗೆ ಹಾಗೂ ಕಾರ್ಯ ನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾಗಳು ಇಲ್ಲದಿರುವುದನ್ನು ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ಅವರ ಸೇವೆಯು ತೃಪ್ತಿಕರವಾಗಿರುವುದನ್ನು ಸರ್ಕಾರವು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 292 ಎಎಸ್‌ಡಿ 2008, ಬೆಂಗಳೂರು ದಿನಾಂಕ : 24ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಡಾ: ಸುಧಾ ಬಿ., ತಹಶೀಲ್ದಾರ್, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) 1977ರ ನಿಯಮ 5(1) ರನ್ವಯ ಈ ಕೆಳಕಂಡಂತೆ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

ಕ್ರ.ಸಂ.	ಪ್ರೊಬೇಷನರ್ ತಹಶೀಲ್ದಾರರ ಹೆಸರು	ಪ್ರೊಬೇಷನ್ ಅವಧಿ ಪ್ರಾರಂಭವಾದ ದಿನಾಂಕ	ಪ್ರೊಬೇಷನ್ ಅವಧಿ ಮುಕ್ತಾಯವಾದ ದಿನಾಂಕ
1	ಡಾ: ಸುಧಾ ಬಿ.	06-07-2006	08-04-2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. ನಂ. 1614

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಮುಂಡಗೋಡ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಇವರಿಗೆ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1. ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಪತ್ರ ಸಂಖ್ಯೆ : ಚುನಾವಣಾ ಸಿಬ್ಬಂದಿ.ವಹಿ.09/2010–11, ದಿನಾಂಕ : 27–10–2010.

2. ಮಹಾಲೇಖಪಾಲರ ಪತ್ರ ಸಂಖ್ಯೆ : ಜಿಇ1/ಆರ್3/Vol 329/1502, ದಿನಾಂಕ : 12–01–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 27–10–2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಇವರು ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು ತಿಳಿಸಿ, ಶ್ರೀಯುತರ ಸೇವಾ ಪುಸ್ತಕವನ್ನು ಲಗತ್ತಿಸಿ, ಇವರ ವೇತನ ಶ್ರೇಣಿ ರೂ. 11,400–21,600 ಇದ್ದು ದಿನಾಂಕ : 01–12–2008 ಮತ್ತು 01–12–2009 ರಿಂದ ಮಂಜೂರಿಯಾಗಬೇಕಾಗಿರುವ ಸ್ಥಗಿತ ಬಡ್ತಿಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (2)ರ ದಿನಾಂಕ : 12–01–2011ರ ಪತ್ರದಲ್ಲಿ ಮಹಾಲೇಖಪಾಲರು, ಶ್ರೀ ಎಂ.ವಿ. ಕಲ್ಲೂರ್ ಮಠ ತಹಶೀಲ್ದಾರ್, ಇವರು ದಿನಾಂಕ : 01–12–2009 ರಂದು ಸದರಿಯವರು ಗರಿಷ್ಠ ವೇತನ ಮಿತಿ ತಲುಪಿರುತ್ತಾರೆಂದು, ಸದರಿಯವರು ದಿನಾಂಕ : 01–12–2010 ರಿಂದ ಮೊದಲನೇ ಸ್ಥಗಿತ ವೇತನ ಬಡ್ತಿಗೆ ಅರ್ಹರಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 702 ಎಎಸ್‌ಡಿ 2010, ಬೆಂಗಳೂರು ದಿನಾಂಕ : 20ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ವಿ.ಕಲ್ಲೂರ್ ಮಠ ತಹಶೀಲ್ದಾರ್, ಮುಂಡಗೋಡ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಇವರಿಗೆ ದಿನಾಂಕ : 01–12–2010 ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 11,400–21,050 ರಲ್ಲಿ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1615 ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ : 1. ಬಾಗಲಕೋಟೆ ಜಿಲ್ಲಾಧಿಕಾರಿಗಳ ಪತ್ರ ಸಂ : ಸಿಎಎಲ್/ಸಿಆರ್/06/2010–11, ದಿನಾಂಕ : 23–05–2011.

2. ಗದಗ ಜಿಲ್ಲಾಧಿಕಾರಿಗಳ ಪತ್ರ ಸಂ : ಪುನರ್ವಸತಿ ವಹಿ/16/2011–12, ದಿನಾಂಕ : 19–05–2011.

ಪ್ರಸ್ತಾವನೆ :

ಬಾಗಲಕೋಟೆ ಮತ್ತು ಗದಗ ಜಿಲ್ಲಾಧಿಕಾರಿಗಳ ಮೇಲೆ ಓದಲಾದ (1) ರಿಂದ (2)ರ ಪತ್ರಗಳಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಬಾಗಲಕೋಟೆ ಜಿಲ್ಲೆಯ ಕಾತರಕಿ ಮತ್ತು ಹಿರೇನಸಬಿ ಗ್ರಾಮಗಳಲ್ಲಿ, ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಈ ಡೀಸೆಲ್ ಜನರೇಟರ್‌ನಿಂದ ವಿದ್ಯುಚ್ಛಕ್ತಿ ಪಡೆದು ಮನೆಗಳ ನಿರ್ಮಾಣಕ್ಕೆ ನೀರನ್ನು ಒದಗಿಸಲಾಗಿರುತ್ತದೆ ಮತ್ತು ಗದಗ ಜಿಲ್ಲೆಯಲ್ಲಿ, ಆಸರೆ ಮನೆಗಳ ನಿರ್ಮಾಣಕ್ಕೆ ವಾಟರ್ ಟ್ಯಾಂಕರ್ ಮುಖಾಂತರ ನೀರನ್ನು ಒದಗಿಸಲಾಗಿರುತ್ತದೆ. ಆದುದರಿಂದ, ಈ ಡೀಸೆಲ್ ಜನರೇಟರ್‌ನ ಬಾಡಿಗೆಯ ಹಣ ಬಾಗಲಕೋಟೆ ಜಿಲ್ಲಾಧಿಕಾರಿಗಳು–ರೂ. 2,44,960/– ಮತ್ತು ವಾಟರ್ ಟ್ಯಾಂಕರ್ ಬಾಬ್ತು ಗದಗ ಜಿಲ್ಲಾಧಿಕಾರಿಗಳು–ರೂ. 14,69,000/– ಒಟ್ಟು ರೂ. 17,13,960/– ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು ದಿನಾಂಕ : 21ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ವಾಟರ್ ಟ್ಯಾಂಕರ್ ಬಾಬ್ತನ್ನು ಬಾಗಲಕೋಟೆ ಮತ್ತು ಗದಗ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲಾಗಿದೆ.

ಕ್ರ.ಸಂ.	ಜಿಲ್ಲೆಗಳು	ಬಿಡುಗಡೆ ಮಾಡಿದ ಮೊತ್ತ (ರೂ.)
1	ಬಾಗಲಕೋಟೆ	2,44,960/–
2	ಗದಗ	14,69,000/–
	ಒಟ್ಟು	**17,13,960/–**

(ಒಟ್ಟು ರೂಪಾಯಿ ಹದಿನೇಳು ಲಕ್ಷದ ಹದಿಮೂರು ಸಾವಿರದ ಒಂಭೈನೂರ ಅರವತ್ತು ಮಾತ್ರ)

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235-00-111-0-02 'Public Contributions to the Calamity Relief' ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1616 ಕಂದಾಯ ಇಲಾಖೆ (ವಿ.ನಿ & ಸೇವೆಗಳು–2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಕೃಷಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ) ಹಾಗೂ ಪೂರಕ ಸಿಬ್ಬಂದಿ ಹುದ್ದೆಗಳನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 15 ಸಸಿವಿ 2001 ದಿನಾಂಕ : 20–04–2001.
2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 04 ಸಸಿವಿ 2002 ದಿನಾಂಕ : 04–04–2002.
3. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 219 ಸಅಸೇ 2010 ದಿನಾಂಕ : 25–06–2010.
4. ಪ್ರಧಾನ ಕಾರ್ಯದರ್ಶಿಗಳು (ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ) ಕೃಷಿ ಇಲಾಖೆ ಇವರ ಅರೆಸರ್ಕಾರಿ ಪತ್ರ ಸಂಖ್ಯೆ : ಕೈತೋಇ (ಆಸಂ) 40/ಪ್ರಕಾ/2011 ದಿನಾಂಕ : 06–04–2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಓದಲಾಗಿರುವ ಸರ್ಕಾರದ ಆದೇಶ ದಿನಾಂಕ : 20–04–2001 ಹಾಗೂ 04–04–2002 ರಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ) ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ಸೃಜಿಸಲಾಗಿದೆ ಹಾಗೂ ಅದು ಕಾಲಕಾಲಕ್ಕೆ ಮುಂದುವರಿಸಲ್ಪಟ್ಟು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆ ಹಾಗೂ ಪೂರಕ ಸಿಬ್ಬಂದಿ ಹುದ್ದೆಗಳನ್ನು ದಿನಾಂಕ : 06–07–2010 ರಿಂದ ದಿನಾಂಕ : 05–07–2011 ರವರೆಗೆ ಮುಂದುವರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪ್ರಧಾನ ಕಾರ್ಯದರ್ಶಿ ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ ಕೃಷಿ ಇಲಾಖೆ ಇವರ ಅರೆ ಸರ್ಕಾರಿ ಪತ್ರದಲ್ಲಿ ಪ್ರಧಾನ ಕಾರ್ಯದರ್ಶಿ ಹುದ್ದೆ ಹಾಗೂ ಪೂರಕ ಸಿಬ್ಬಂದಿ ಹುದ್ದೆಗಳನ್ನು ದಿನಾಂಕ : 25–07–2011 ರಿಂದ ಮತ್ತೆ ಮುಂದುವರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 220 ಸಅಸೇ 2011, ಬೆಂಗಳೂರು ದಿನಾಂಕ : 23ನೇ ಜೂನ್ 2011.

ಸರ್ಕಾರದ ಆದೇಶ ದಿನಾಂಕ : 20–04–2001 ಮತ್ತು 04–04–2002 ರಲ್ಲಿ ಸೃಜಿಸಲಾದ ಕರ್ನಾಟಕ ಸರ್ಕಾರ ಸಚಿವಾಲಯದ ಕೃಷಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ) ಹುದ್ದೆ ಹಾಗೂ ಈ ಕೆಳಕಂಡ ಪೂರಕ ಸಿಬ್ಬಂದಿ ಹುದ್ದೆಗಳನ್ನು ದಿನಾಂಕ : 06–07–2011 ರಿಂದ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಆಪ್ತ ಕಾರ್ಯದರ್ಶಿ ಗ್ರೇಡ್–2/ಪತ್ರಾಂಕಿತ ಆಪ್ತಸಹಾಯಕ	1
2	ಪತ್ರಾಂಕಿತ ಆಪ್ತ ಸಹಾಯಕ/ಹಿರಿಯ ಶೀಘ್ರಲಿಪಿಗಾರ	2
3	ಶಾಖಾಧಿಕಾರಿ/ಹಿರಿಯ ಸಹಾಯಕ	1
4	ಸಹಾಯಕ/ಕಿರಿಯ ಸಹಾಯಕ	1
5	ವಾಹನ ಚಾಲಕ	1
6	ದಲಾಯತ್	2
	ಒಟ್ಟು	08

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ : 10–07–1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1617 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವೆಗಳು–3)

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಎಂ. ದೇವಾನಂದ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್ ಇವರ ಮೇಲಿನ ಆರೋಪದ ಬಗ್ಗೆ ಶಿಸ್ತು ಕ್ರಮದಲ್ಲಿನ ಅಂತಿಮ ಆದೇಶ.

ಓದಲಾಗಿದೆ :

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಅಆ.ಆರಾ.ಸಂಕೀರ್ಣ/2007–08, ದಿನಾಂಕ : 03–08–2007 ಮತ್ತು ಸಹ ನಿರ್ದೇಶಕರು (ಆಡಳಿತ) ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರ ಪತ್ರ ಸಂಖ್ಯೆ : ಸಿ2(4) ಪಅದೂ/35/2007–08, ದಿನಾಂಕ : 07–06–2008.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 239 ಡಿಜಿಡಿ 2007, ದಿನಾಂಕ : 28–07–2008.
3. ಕಾರಣ ಕೇಳುವ ನೋಟೀಸು ಸಂಖ್ಯೆ : ಇಡಿ 239 ಡಿಜಿಡಿ 2007, ದಿನಾಂಕ : 03–10–2008.
4. ಶ್ರೀ ಎಂ. ದೇವಾನಂದ, ಇವರ ಲಿಖಿತ ಹೇಳಿಕೆ ದಿನಾಂಕ : 02–02–2009.
5. ಇಲಾಖಾ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿ ನೇಮಕಾತಿಯ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ : ಇಡಿ 239 ಡಿಜಿಡಿ 2007, ದಿನಾಂಕ : 12–05–2009.
6. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 18 ಡಿಜಿಪಿ 2009, ದಿನಾಂಕ : 02–07–2009.
7. ವಿಚಾರಣಾಧಿಕಾರಿಯವರು ಸರ್ಕಾರಕ್ಕೆ ವಿಚಾರಣಾ ವರದಿ ಸಲ್ಲಿಸಿದ ದಿನಾಂಕ : 05–01–2010.
8. ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ : 24–01–2011.
9. ಶ್ರೀ ಎಂ. ದೇವಾನಂದ ಇವರ 2ನೇ ಕಾರಣ ಕೇಳುವ ನೋಟೀಸಿಗೆ ಪ್ರತಿರಕ್ಷಣಾ ಹೇಳಿಕೆ ದಿನಾಂಕ : 15–02–2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 03–08–2007 ಮತ್ತು ದಿನಾಂಕ : 07–06–2008ರ ಪತ್ರಗಳಲ್ಲಿ ಶ್ರೀ ಎಂ. ದೇವಾನಂದ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್, ಇವರು ಈ ಹಿಂದೆ ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಬಡ್ತಿಯನ್ನು 2005–06ನೇ ಸಾಲಿನಲ್ಲಿ ಹಿಂದಿನ ಉಪ ನಿರ್ದೇಶಕರು ಪ್ರಕಟಿಸಿದ ಪಟ್ಟಿಯಲ್ಲಿ ಅನರ್ಹರೆಂದು ಗುರುತಿಸಲಾದ 20 ಶಿಕ್ಷಕರನ್ನು ಅರ್ಹರೆಂದು ಪರಿಗಣಿಸಿ 2006–07ನೇ ಸಾಲಿಗೆ ಬಡ್ತಿಯನ್ನು ನೀಡಿದ್ದು ಹಾಗೂ 2006–07ನೇ ಸಾಲಿನಲ್ಲಿ 60 ಶಿಕ್ಷಕರಿಗೆ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಹಾಗೂ ನಗರ ಪ್ರದೇಶದ ಸಮೀಪದಲ್ಲಿಯ ಶಾಲೆಗಳಿಗೆ ನಿಯೋಜನೆಗಳನ್ನು ಮಾಡಬಾರದೆಂದು ನಿಯಮಗಳಿದ್ದರೂ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಭ್ರಷ್ಟಾಚಾರವೆಸಗಿ ಕರ್ತವ್ಯ ಲೋಪ ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ದಿನಾಂಕ : 28–07–2008ರ ಆದೇಶದಲ್ಲಿ ಶ್ರೀ ಎಂ. ದೇವಾನಂದ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್, ಇವರ ಮೇಲಿನ ಆಪಾದನೆಗಳಿಗೆ ಶಿಸ್ತು ಕ್ರಮ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಮೇಲೆ (3)ರಲ್ಲಿ ಓದಲಾದ ದಿನಾಂಕ : 03–10–2008ರ ಕಾರಣ ಕೇಳುವ ನೋಟೀಸಿನಲ್ಲಿ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957ರ ನಿಯಮ–11 ರನ್ವಯ ಆರೋಪ ಪಟ್ಟಿ ಜಾರಿ ಮಾಡಿ, ಸದರಿಯವರ ಲಿಖಿತ ಹೇಳಿಕೆ ಸಲ್ಲಿಸುವಂತೆ ಕೋರಲಾಗಿತ್ತು. ಮೇಲೆ (4) ರಲ್ಲಿ ಓದಲಾದ ದಿನಾಂಕ : 02–02–2009ರ ಲಿಖಿತ ಹೇಳಿಕೆಯಲ್ಲಿ ತಮ್ಮ ಮೇಲೆ ಹೊರಿಸಲಾದ 04 ಆರೋಪಗಳು ತಾವು ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಹೊರಡಿಸಿರುವ ಆಡಳಿತಾತ್ಮಕ ಆದೇಶಗಳ ಬಗ್ಗೆ ಇದ್ದು, ಯಾವುದೇ ಶಿಕ್ಷಕರು ತಾವು ಹಣ ಪಡೆದು ವರ್ಗಾವಣೆ/ನಿಯೋಜನೆಗಳನ್ನು ಮಾಡಿರುವ ಬಗ್ಗೆ ದೂರು ನೀಡಿರುವುದಿಲ್ಲ ಹಾಗೂ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ಮಾಡಿರುವ ಆದೇಶಗಳು ಸದ್ಭಾವನೆಯಿಂದ ತೆಗೆದುಕೊಂಡ ಕ್ರಮಗಳಾಗಿರುತ್ತವೆಯೆಂದು ತಮ್ಮ ಮೇಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಮೇಲೆ (5) ರಲ್ಲಿ ಓದಲಾದ ದಿನಾಂಕ : 12–05–2009ರ ಆದೇಶದಲ್ಲಿ ಈ ಪ್ರಕರಣದ ಸತ್ಯಾಸತ್ಯತೆಗಳನ್ನು ತಿಳಿಯಲು ಕೂಲಂಕಷ ವಿಚಾರಣೆ ಮಾಡುವುದು ಸೂಕ್ತವೆಂದು ತೀರ್ಮಾನಿಸಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಲಾಗಿತ್ತು. ಮೇಲೆ (6) ರಲ್ಲಿ ಓದಲಾದ ದಿನಾಂಕ : 02–07–2009ರ ಅಧಿಸೂಚನೆಯಲ್ಲಿ ಶ್ರೀ ಎಂ. ದೇವಾನಂದ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್, ಇವರ ಮೇಲಿನ ಆಪಾದನೆಗಳಿಗೆ ಇಲಾಖಾ ವಿಚಾರಣೆ ಕಾಯ್ದಿರಿಸಿ, ಇವರ ಅಮಾನತ್ತು ತೆರವುಗೊಳಿಸಿ, ಸೇವೆಗೆ ಪುನರ್‌ಸ್ಥಾಪಿಸಿ, ರೀಡರ್, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಾಗಲಕೋಟೆ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ.

ಕ್ರಮ ಸಂಖ್ಯೆ (7) ರಲ್ಲಿ ವಿಚಾರಣಾಧಿಕಾರಿಗಳು ಆರೋಪಿತ ಅಧಿಕಾರಿಯ ವಿರುದ್ಧ ಮಾಡಲಾಗಿದ್ದ 04 ಆರೋಪಗಳ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಿ, ಆರೋಪಿತ ಅಧಿಕಾರಿಯ ಮೇಲಿನ ಆರೋಪ ಸಂಖ್ಯೆ–2 ರುಜುವಾತಾಗಿಲ್ಲವೆಂದು ಹಾಗೂ ಆರೋಪ ಸಂಖ್ಯೆ–3 ರುಜುವಾತಾಗಿದೆಯೆಂದು ಹಾಗೂ 1 ಮತ್ತು 4 ನೇ ಆರೋಪಗಳು ಭಾಗಶಃ ರುಜುವಾತಾಗಿದೆ ಎಂದು ವರದಿ ಸಲ್ಲಿಸಿದ್ದರು. ಈ ವಿಚಾರಣಾ ವರದಿಯ ಪ್ರತಿಯನ್ನು ಆರೋಪಿತ ಅಧಿಕಾರಿಯವರಿಗೆ ಮೇಲೆ ಓದಲಾದ (8) ದಿನಾಂಕ : 29–01–2011 ರಲ್ಲಿ ಎರಡನೇ ಕಾರಣ ಕೇಳುವ ನೋಟೀಸು ನೀಡಿದ್ದು, ಪ್ರತಿರಕ್ಷಣಾ ಹೇಳಿಕೆಯನ್ನು ಮೇಲಿನ ಕ್ರಮ ಸಂಖ್ಯೆ (9) ದಿನಾಂಕ : 15–02–2011 ರಲ್ಲಿ ಸಲ್ಲಿಸಿರುತ್ತಾರೆ.

ಆರೋಪಿತ ಅಧಿಕಾರಿಯು ತಮ್ಮ ಪ್ರತಿರಕ್ಷಣಾ ಹೇಳಿಕೆಯಲ್ಲಿ ವಿಚಾರಣಾ ವರದಿಯಂತೆ ಆರೋಪ–1 ಕ್ಕೆ ಸಂಬಂಧಿಸಿದಂತೆ ಸೇವಾ ನಿಯಮಗಳ ಪಾಲನೆ ವಿಷಯ ಭಾಗಶಃ ರುಜುವಾತಾಗಿದೆ ಎಂದರೆ ಆಪಾದನೆ ರುಜುವಾತಾಗಿರುವುದಿಲ್ಲವೆಂದೇ ಪರಿಗಣಿಸಬೇಕು ಎಂದು ನ್ಯಾಯಾಲಯಗಳು ಹೇಳಿವೆ, ಆದಕಾರಣ ಒಂದನೇ ಆರೋಪ ಸಾಬೀತಾಗಿಲ್ಲವೆಂದು ಪರಿಗಣಿಸಬೇಕು. ಆರೋಪ–2 ರುಜುವಾತಾಗಿರುವುದಿಲ್ಲ. ಆರೋಪ–3 ಕ್ಕೆ ಸಂಬಂಧಿಸಿದಂತೆ, ವಿಚಾರಣಾಧಿಕಾರಿಗಳು ನೀಡಿರುವ ವರದಿಯಲ್ಲಿ ಲೋಪವಿದೆ ಎಂಬುದಾಗಿ ಹೇಳಿಕೆ ಸಲ್ಲಿಸಿರುತ್ತಾರೆ.

ಆರೋಪ–4ಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಕಾನೂನು ಅಡಿಯಲ್ಲಿ ಅಧಿಕಾರ ಚಲಾಯಿಸಿದಾಗ ಅವುಗಳು ತಪ್ಪು ಎನಿಸಿದರೂ ದುರುದ್ದೇಶದಿಂದ ಮಾಡಿದ್ದಾರೆ ಎಂದು ರುಜುವಾತು ಆಗದೇ ಇದ್ದರೆ ಅದು ದುರ್ನಡತೆ ಆಗುವುದಿಲ್ಲ. ಭಾಗಶಃ ರುಜುವಾತಾಗಿದೆ ಎಂದರೆ ಆಪಾದನೆ ಪೂರ್ಣವಾಗಿ ಆಗಿಲ್ಲ ಎಂಬುದೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರೋಪ ಸಾಬೀತಾಗಿಲ್ಲವೆಂದು ತೀರ್ಮಾನಿಸಬೇಕಾಗುತ್ತದೆಂಬ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ತಮ್ಮನ್ನು ದೋಷಮುಕ್ತವೆಂದು ತೀರ್ಮಾನಿಸಬೇಕಾಗಿ ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಿಚಾರಣಾ ವರದಿಯಲ್ಲಿನ ಅಂಶಗಳು ಹಾಗೂ ಆರೋಪಿತ ಅಧಿಕಾರಿ ಸಲ್ಲಿಸಿರುವ ಪ್ರತಿರಕ್ಷಣಾ ಹೇಳಿಕೆಯನ್ನು ನಿಯಮಗಳನುಸಾರ ಕೂಲಂಕಷವಾಗಿ ಸರ್ಕಾರವು ಪರಿಶೀಲಿಸಿದ್ದು, ಈ ಪ್ರಕರಣದಲ್ಲಿ ಆರೋಪ–3 ರುಜುವಾತಾಗಿದ್ದು, ಇದು ಶಿಕ್ಷಕರ ನಿಯೋಜನೆಗೆ ಸಂಬಂಧಿಸಿದ್ದು, ಇದರಲ್ಲಿ ಯಾವುದೇ ಹಣಕಾಸಿನ ದುರುಪಯೋಗ ಆಗಿರುವುದಿಲ್ಲ ಹಾಗೂ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ ಹಾಗೂ ಆರೋಪ–1 ಮತ್ತು 4 ಭಾಗಶಃ ರುಜುವಾತಾಗಿದೆಯೆಂದು ತಿಳಿಸಿರುವುದನ್ನು ಸಂಶಯದ ಲಾಭ (benefit of doubt) ವ್ಯಾಪ್ತಿಗೆ ಬರುತ್ತಿದ್ದು, ಇದನ್ನು ಒಪ್ಪಲು ಬರುವುದಿಲ್ಲವೆಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ಸದರಿ ಆಪಾದಿತರಿಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ–8 (ii) ರನ್ವಯ ವಾಗ್ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆಯೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 18 ಡಿಜಿಪಿ 2009, ಬೆಂಗಳೂರು ದಿನಾಂಕ : 27ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ. ದೇವಾನಂದ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್, ಇವರ ಮೇಲಿನ ಎಲ್ಲಾ ನಾಲ್ಕು ಆರೋಪಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ–8 (ii) ರನ್ವಯ **"ವಾಗ್ದಂಡನೆ"** ವಿಧಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1618 ಶಿಕ್ಷಣ ಇಲಾಖೆ (ಆಡಳಿತ)

ಕಂದಾಯ ಸಚಿವಾಲಯ

ವಿಷಯ : 2006ನೇ ತಂಡದ ತಹಶೀಲ್ದಾರರುಗಳು ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 51 ಎಎಸ್‌ಡಿ 2008, ದಿನಾಂಕ : 23–05–2008.
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಆರ್‌ಡಿ 223 ಎಎಸ್‌ಡಿ 2008, ದಿನಾಂಕ : 11–06–2008.
3. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 462 ಎಎಸ್‌ಡಿ 2010, ದಿನಾಂಕ : 21–01–2011, 27–01–2011 ಮತ್ತು 02–04–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1) ದಿನಾಂಕ : 23–05–2008ರ ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1997ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಒಟ್ಟು 40 ಅಭ್ಯರ್ಥಿಗಳಿಗೆ ಪ್ರೊಬೇಷನರಿ ತಹಶೀಲ್ದಾರ್ ಗುಂಪು–ಬಿ ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಒಟ್ಟು 40 ಪ್ರೊಬೇಷನರಿ ತಹಶೀಲ್ದಾರರುಗಳನ್ನು 2 ವರ್ಷಗಳ ಕಾಲ ಪ್ರೊಬೇಷನ್ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಕನ್ನಡ ಭಾಷಾ ಪರೀಕ್ಷೆ ಮತ್ತು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ ಎಲ್ಲಾ 40 ಪ್ರೊಬೇಷನರಿ ತಹಶೀಲ್ದಾರರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (2) ದಿನಾಂಕ : 11–06–2008 ರಲ್ಲಿ ಎಲ್ಲಾ ಪ್ರೊಬೇಷನರಿ ತಹಶೀಲ್ದಾರರುಗಳಿಗೆ ಎರಡು ವರ್ಷಗಳ ತರಬೇತಿಗಾಗಿ ವಿವಿಧ ಜಿಲ್ಲೆಗಳಿಗೆ ತೈನಾತಿಸಲಾಗಿತ್ತು. ಆದರೆ ಇವರುಗಳಲ್ಲಿ ವಿವಿಧ ಕಾರಣಗಳಿಂದ/ಬೇರೆ ಹುದ್ದೆಗೆ ನೇಮಕಗೊಂಡಿದ್ದರಿಂದ ಒಟ್ಟು 5 ಪ್ರೊಬೇಷನರಿ ತಹಶೀಲ್ದಾರರುಗಳು (ಶ್ರೀ ಶಂಭುಲಿಂಗಪ್ಪ, ಶ್ರೀ ಅಭ್ಯುದಯ್ ಎ. ಆನಂದ್, ಶ್ರೀ ಎಂ.ಜೆ. ಚೇತನ್, ಶ್ರೀ ಪ್ರಸನ್ನಕುಮಾರ್ ಬಿ.ಕೆ. ಮತ್ತು ಶ್ರೀ ಇಸ್ಲಾವುದ್ದೀನ್) ಸೇವೆಯಿಂದ ಬಿಟ್ಟು ಹೋಗಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ . (3)ರ ಆದೇಶಗಳಲ್ಲಿ ಉಳಿದ 35 ಜನ ಪ್ರೊಬೇಷನರಿ ತಹಶೀಲ್ದಾರರ ಪೈಕಿ 20 ಜನ ಪ್ರೊಬೇಷನರಿ ತಹಶೀಲ್ದಾರರು ಇಲಾಖಾ ಪರೀಕ್ಷೆ ಪಾಸಾಗಿದ್ದು ಮತ್ತು ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರಲಿಲ್ಲವಾದ್ದರಿಂದ ಹಾಗೂ ಅವರುಗಳ ಕಾರ್ಯ ನಿರ್ವಹಣಾ ವರದಿಗಳು ಸಮರ್ಪಕವಾಗಿದ್ದರಿಂದ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) 1977ರ ನಿಯಮ 5(1) ರನ್ವಯ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಲಾಗಿತ್ತು.

ಉಳಿದ ತಹಶೀಲ್ದಾರರುಗಳ ಪ್ರೊಬೇಷನ್ ಅವಧಿಯನ್ನು ಘೋಷಿಸುವ ಕುರಿತು ಜಿಲ್ಲಾಧಿಕಾರಿಗಳಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಲಾಗಿದೆ. ಈ ಮಾಹಿತಿ ಪ್ರಕಾರ ಪ್ರೊಬೇಷನ್ ಅವಧಿಯಲ್ಲಿನ ತೃಪ್ತಿಕರ ಕಾರ್ಯ ನಿರ್ವಹಣಾ ವರದಿಗಳು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಪಾಸಾಗಿರುವ ಬಗ್ಗೆ ದೃಢೀಕೃತ ಸರ್ಟಿಫಿಕೇಟ್, ತರಬೇತಿ ತೃಪ್ತಿಕರವಾಗಿರುವ ಬಗ್ಗೆ ಮೇಲಧಿಕಾರಿಗಳು ಶಿಫಾರಸ್ಸು ಮಾಡಿರುವ ವಿವರ ಮತ್ತು ಪ್ರೊಬೇಷನ್ ಅವಧಿಯಲ್ಲಿ ಯಾವುದೇ ಇಲಾಖಾ ವಿಚಾರಣೆ ಬಾಕಿ ಇಲ್ಲದೇ ಇರುವ ಈ ಕೆಳಕಂಡ 11 ಜನ ಪ್ರೊಬೇಷನರ್ ತಹಶೀಲ್ದಾರರುಗಳ ಬಗ್ಗೆ ಮಾತ್ರ ಸಂಪೂರ್ಣ ಮಾಹಿತಿ ಬಂದಿದ್ದು, ಇವರುಗಳ ಪ್ರೊಬೇಷನರಿ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಗಳು 1977ರ ಉಪ ನಿಯಮ 5(1) ರನ್ವಯ ಪ್ರೊಬೇಷನರ್ ತಹಶೀಲ್ದಾರರು ತೃಪ್ತಿಕರವಾಗಿ ಪ್ರೊಬೇಷನ್ ಅವಧಿಯನ್ನು ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 462 ಎಎಸ್‌ಡಿ 2010, ಬೆಂಗಳೂರು ದಿನಾಂಕ : 22ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಈ ಕೆಳಕಂಡ 11 ಪ್ರೊಬೇಷನರ್ ತಹಶೀಲ್ದಾರರುಗಳು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) 1977ರ ನಿಯಮ 5(1) ರನ್ವಯ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

ಕ್ರ. ಸಂ.	ಪ್ರೊಬೇಷನರ್ ತಹಶೀಲ್ದಾರರ ಹೆಸರು (ಶ್ರೀಮತಿ/ಶ್ರೀ)	ಪ್ರೊಬೇಷನ್ ಅವಧಿ ಪ್ರಾರಂಭವಾದ ದಿನಾಂಕ	ಪ್ರೊಬೇಷನ್ ಅವಧಿ ಮುಕ್ತಾಯವಾದ ದಿನಾಂಕ
1	ರಮೇಶ್ ಪಿ. ಕೋನರೆಡ್ಡಿ	31–05–2008	30–05–2010
2	ಜಗದೀಶ್ ಬಿ.ಎ.	09–06–2008	08–06–2010
3	ರಂಜಿತ ಎಂ.ಪಿ	09–06–2008	08–06–2010
4	ಪ್ರಿಯದರ್ಶಿನಿ ವಿ.	09–06–2008	08–06–2010
5	ಉಮೇಶ್ ಚಂದ್ರ ಎನ್.ಆರ್.	29–05–2008	28–05–2010
6	ಅನಿಲ್‌ಕುಮಾರ್ ಆರ್.	09–06–2008	08–06–2010
7	ಗಂಗಪ್ಪ	02–06–2008	01–06–2010
8	ಮಂಜುನಾಥ್ ವಿ.	30–05–2008	29–05–2010
9	ಶಿವಪ್ಪ ಹೆಚ್. ಲಮಾಣಿ	07–06–2008	06–06–2010
10	ಪ್ರೀತಮ್ ನಸ್ಲಾಪುರೆ	02–06–2008	01–06–2010
11	ವಿ. ಹನುಮಂತರಾಯಪ್ಪ	03–06–2008	02–06–2010

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. ನಂ. 1619

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಕಾರ್ಯಕ್ರಮ ಅಧಿಕಾರಿ, ಸುವರ್ಣ ಕರ್ನಾಟಕ ವಿಶೇಷ ಘಟಕ–ಇವರ ವೇತನ ತಾರತಮ್ಯ ಸರಿಪಡಿಸುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ದಿನಾಂಕ : 14–01–2011 ರಂದು ಕೊನೆಗೊಂಡ ಪತ್ರ ಸಂಖ್ಯೆ ಕಸನಿ 23 ಸಿಬ್ಬಂದಿ 2010–11.

ಪ್ರಸ್ತಾವನೆ :

ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಕಾರ್ಯಕ್ರಮ ಅಧಿಕಾರಿ, ಸುವರ್ಣ ಕರ್ನಾಟಕ ವಿಶೇಷ ಘಟಕ, ಕೇಂದ್ರ ಕಛೇರಿ, ಬೆಂಗಳೂರು ಇವರ ವೇತನವು ರೂ. 15,200/– ಇದ್ದು, ಇವರಿಗಿಂತ ಕಿರಿಯ ನೌಕರರಾಗಿ ಇತ್ತೀಚೆಗೆ ಬಡ್ತಿ ಪಡೆದಿರುವ ಶ್ರೀಮತಿ ಹೆಚ್.ಜಿ. ವಿಜಯಲಕ್ಷ್ಮಿ, ರಿಜಿಸ್ಟ್ರಾರ್, ಕರ್ನಾಟಕ ಲಲಿತಾ ಕಲಾ ಅಕಾಡೆಮಿ, ಬೆಂಗಳೂರು ಇವರ ಮೂಲ ವೇತನವು ರೂ. 16,000/– ಗಳಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 8 ಎಸ್‌ಆರ್‌ಪಿ 2007, ದಿನಾಂಕ : 16–05–2007ರ ಕಂಡಿಕೆ 7(8)ಬಿ ಆದೇಶದಂತೆ ಬಡ್ತಿಗೆ ಮುನ್ನ ಇಬ್ಬರು ನೌಕರರು ಧಾರಣೆ ಮಾಡಿರುವ ಹುದ್ದೆ ಒಂದೇ ಪದವೃಂದಕ್ಕೆ ಸೇರಿರುತ್ತದೆ. ಹಾಗೂ ಈ ಇಬ್ಬರು ನೌಕರರು ಬಡ್ತಿ ಹೊಂದಿದ ಹುದ್ದೆಗಳು ಸಹ ಒಂದೇ ಪದವೃಂದಕ್ಕೆ ಸೇರಿರುತ್ತದೆ. ಆದ್ದರಿಂದ ಜೇಷ್ಠತೆಯಲ್ಲಿ ಹಿರಿಯ ನೌಕರರಾಗಿರುವ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ರವರಿಗೆ ಜೇಷ್ಠತೆಯಲ್ಲಿ ಕಿರಿಯ ನೌಕರರಾಗಿರುವ ಶ್ರೀಮತಿ ಹೆಚ್.ಜಿ. ವಿಜಯಲಕ್ಷ್ಮಿ ರವರ ವೇತನಕ್ಕೆ ಸಮನಾದ ವೇತನವನ್ನು ನಿಗಧಿ ಪಡಿಸಿ ವೇತನ ತಾರತಮ್ಯವನ್ನು ಸರಿಪಡಿಸಬೇಕೆಂದು ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರು ಕೋರಿರುತ್ತಾರೆ.

ಪ್ರಸ್ತಾವನೆ ಬಗ್ಗೆ ಪರಿಶೀಲಿಸಲಾಗಿ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿಯವರು ಭಾಷಾಂತರಕಾರರ ಹುದ್ದೆಯಲ್ಲಿ 15 ವರ್ಷಗಳ ಸೇವೆಯನ್ನು ಪೂರೈಸುವುದಕ್ಕೂ ಮೊದಲೇ ದಿನಾಂಕ : 29–12–2004 ರಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ಪಡೆದಿರುತ್ತಾರೆ. ಅವರ ಪದೋನ್ನತಿಯ ಮೇರೆಗೆ ಅವರು ಹಿರಿಯ ವೇತನ ಶ್ರೇಣಿ ಸೌಲಭ್ಯ ಪಡೆಯಲು ದಿನಾಂಕ : 04–01–1993ರ ಜ್ಞಾಪನ ಸಂಖ್ಯೆ ಎಫ್‌ಡಿ 25 ಎಸ್‌ಆರ್‌ಪಿ 91ರನ್ವಯ ನೇಮಕಾತಿ ಪ್ರಾಧಿಕಾರಕ್ಕೆ ಸೂಕ್ತ ಅಭಿಮತ ಸಲ್ಲಿಸದೆ ಇರುವುದರಿಂದ ಅವರಿಗೆ ಈ ಸೌಲಭ್ಯ ದೊರಕಿರುವುದಿಲ್ಲ. ಅವರಿಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯವರಾದ ಶ್ರೀಮತಿ ಹೆಚ್.ಜಿ. ವಿಜಯಲಕ್ಷ್ಮಿಯವರಿಗೆ ಭಾಷಾಂತರಕಾರರ ಹುದ್ದೆಯಲ್ಲಿ 15 ವರ್ಷಗಳ ಸತತ ಸೇವೆಗಾಗಿ ದಿನಾಂಕ : 01–10–2005 ರಲ್ಲಿ ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿ ಸೌಲಭ್ಯ ಮಂಜೂರು ಮಾಡಿದ್ದರಿಂದ ಇವರ ವೇತನವು ಹಿರಿಯ ವೇತನಕ್ಕಿಂತ ಹೆಚ್ಚಾಗಿರುತ್ತದೆ. ಈ ಹೆಚ್ಚಳವು ಕಿರಿಯವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ದೊರಕಿದ್ದರಿಂದ ಮತ್ತಷ್ಟು ಜಾಸ್ತಿಯಾಗಿರುತ್ತದೆ. ಆದುದರಿಂದ, ಇದನ್ನು ಹಿರಿಯ ಮತ್ತು ಕಿರಿಯ ನೌಕರರ ನಡುವೆ ಉಂಟಾಗಿರುವ ವೇತನ ತಾರತಮ್ಯವೆಂದು ಪರಿಗಣಿಸಲು ಬರುವುದಿಲ್ಲ. ಆದಕಾರಣ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿಯವರ ವೇತನವನ್ನು ಅವರಿಗಿಂತ ಸೇವೆಯಲ್ಲಿ ಕಿರಿಯವರಾದ ಶ್ರೀಮತಿ ಹೆಚ್.ಜಿ. ವಿಜಯಲಕ್ಷ್ಮಿಯವರ ವೇತನದ ಸಮಕ್ಕೆ ಉನ್ನತೀಕರಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ.

ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರ ವೇತನವನ್ನು ಕರ್ನಾಟಕ ನಾಗರೀಕ ಸೇವಾ (ಪರಿಷ್ಕೃತ ವೇತನ) ನಿಯಮಗಳು 2007 ರಲ್ಲಿ ನಿಗಧಿಪಡಿಸಿರುವುದು ಕ್ರಮಬದ್ಧವಾಗಿಲ್ಲವಾದ್ದರಿಂದ ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಅದರಂತೆ ಈ ಕೆಳಕಂಡ ಆದೇಶ ಘೋಷಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 130 ಕಸನಿ 2010, ಬೆಂಗಳೂರು ದಿನಾಂಕ : 27ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಗೊಳಿಸಿದೆ.

01–08–2004	ರೂ. 6,900/– ಭಾಷಾಂತರಕಾರ ಹುದ್ದೆಯಲ್ಲಿ ವಾರ್ಷಿಕ ವೇತನ ಬಡ್ತಿ (ರೂ. 5,575–10,620).
29–12–2004	ರೂ. 7,050/– ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ಹೊಂದಿದ್ದರಿಂದ ವೇತನ ಶ್ರೇಣಿ ರೂ. 6,000–11,200/–ನ್ನು ನೀಡಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 42ಬಿ(1) ರನ್ವಯ ವೇತನ ನಿಗದಿ.
01–07–2005	ರೂ. 13,350/– ಸಹಾಯಕ ನಿರ್ದೇಶಕರ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿ ರೂ. 6000–11,200/– ರಲ್ಲಿ ಪಡೆಯುತ್ತಿದ್ದ ಮೂಲ ವೇತನ ರೂ. 7,050/–ನ್ನು ಆಧರಿಸಿ ಕಾಲ್ಪನಿಕವಾಗಿ 2007ರ ಸಂವಾದಿ ಪರಿಷ್ಕೃತ ವೇತನ ಶ್ರೇಣಿ ರೂ. 11,400–21,600 ರಲ್ಲಿ ವೇತನ ನಿಗದಿ.
01–08–2005	ರೂ. 13,700/– ಪರಿಷ್ಕೃತ ವೇತನ ಶ್ರೇಣಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ನೀಡಿ ವೇತನ ನಿಗದಿ.
01–08–2005	ರೂ. 14,050/– ಸಹಾಯಕ ನಿರ್ದೇಶಕರ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ ರೂ. 11,400–21,600ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 42ಬಿ(2) ರನ್ವಯ ಪುನರ್ ನಿಗದಿಪಡಿಸಬೇಕಾದ ವೇತನ.
01–08–2006 ರಿಂದ	ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಕಾಲಕಾಲಕ್ಕೆ ನಿಯತಗೊಳಿಸುವುದು.

ಈ ಆದೇಶವನ್ನು ದಿನಾಂಕ : 09–06–2011ರ ಟಿಪ್ಪಣಿ ಸಂಖ್ಯೆ ಆಇ 72 ಸೇ. 2/2010 ರಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. **ಗೀತಾಕುಮಾರಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ.ಆರ್. ನಂ. 1620

ಕಂದಾಯ ಸಚಿವಾಲಯ

ವಿಷಯ : ಶ್ರೀ ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್ ಇವರ ಜನ್ಮ ದಿನಾಂಕದ ತಿದ್ದುಪಡಿ ಕುರಿತು.

ಓದಲಾಗಿದೆ :
1. ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಪತ್ರ ಸಂ: ಸಿಬ್ಬದಿ(1):ಸಿಆರ್:70/07–08, ದಿನಾಂಕ: 12/03/2008 ಮತ್ತು ದಿನಾಂಕ: 27/08/2007.
2. ಸರ್ಕಾರದ ಆದೇಶ ಸಂ: ಆರ್‌ಡಿ 147 ಎಎಸ್‌ಡಿ 2007, ದಿನಾಂಕ: 08/04/2009.
3. ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ:ಲಾ 14 ವಾದೇಕ್ಷಕರು 2010, ದಿನಾಂಕ: 09/03/2010.
4. ಸರ್ಕಾರದ ಆದೇಶ ಸಂ: ಆರ್‌ಡಿ 147 ಎಎಸ್‌ಡಿ 2007, ದಿನಾಂಕ: 19/08/2010.
5. ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ದಿನಾಂಕ: 25/01/2011ರ ಟಿಪ್ಪಣಿ.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (3) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಇವರ ಪ್ರಸ್ತಾವನೆಯಲ್ಲಿ ಶ್ರೀ ಸಿ.ಜೆ. ಕೃಷ್ಣಕುಮಾರ್, ತಹಶೀಲ್ದಾರ್ 1999ನೇ ತಂಡ, ಪ್ರಸ್ತುತ ಪುರಸಭಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗರವರು ಅರ್ಜಿ ಸಲ್ಲಿಸಿ, ಕರ್ನಾಟಕ ಉಚ್ಛ ನ್ಯಾಯಾಲಯದ ಆರ್‌ಎಸ್‌ಎಸಂ: 407/98, ದಿನಾಂಕ: 25/05/99ರ ಆದೇಶದನ್ವಯ ಸದರಿ ತಹಶೀಲ್ದಾರ್‌ರವರ ಜನ್ಮ ದಿನಾಂಕ: 31/12/1965ರ ಬದಲಿಗೆ ದಿನಾಂಕ: 30/11/1966 ಎಂದು ಸೇವಾ ದಾಖಲೆಗಳಲ್ಲಿ ತಿದ್ದುಪಡಿ ಮಾಡಿಕೊಡುವಂತೆ ಕೋರಿದುದನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯಸ್ಸು ನಿರ್ಧರಣೆ) ಕಾಯ್ದೆ 1974ರ ನಿಗದಿತ ಅವಧಿಯೊಳಗೆ ಜನ್ಮ ದಿನಾಂಕ ಬದಲಾವಣೆಗೆ ಅರ್ಜಿ ಸಲ್ಲಿಸಿರುವುದರಿಂದ ಅದೇ ಕಾಯ್ದೆಯ ಸೆಕ್ಷನ್ 5(3)ರಡಿ ವಿಶೇಷ ಅಧಿಕಾರಿಯನ್ನು ನೇಮಕಾತಿ ಮಾಡಿ ವಿಚಾರಣೆಯನ್ನು ಜರುಗಿಸಲು ನಿರ್ಧರಿಸಿ, ಮೇಲೆ ಓದಲಾದ ಕ್ರ.ಸಂ.(2)ರಲ್ಲಿ ಸರ್ಕಾರವು ಶ್ರೀ ಜಿ.ಎ.ಮೂಲಿಮನಿ, ಸಹಾಯಕ ವಾದೇಕ್ಷಕರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ.(3)ರಲ್ಲಿ ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇವರು ಸದರಿ ಪ್ರಕರಣದ ಮಂಡನಾಧಿಕಾರಿಯಾದ ಶ್ರೀ ಜಿ.ಎ. ಮೂಲಿಮನಿ, ಸಹಾಯಕ ವಾದೇಕ್ಷಕರು, ಕಾನೂನು ಇಲಾಖೆ ಇವರು ವರ್ಗಾವಣೆಗೊಂಡಿರುವುದರಿಂದ ಬೇರೊಬ್ಬ ಅಧಿಕಾರಿಯನ್ನು ಮಂಡನಾಧಿಕಾರಿಯನ್ನಾಗಿ ನೇಮಿಸುವಂತೆ ಕೋರಿದ್ದರು. ಸದರಿಯವರ ಕೋರಿಕೆಯನ್ನು ಸರ್ಕಾರ ಪರಿಶೀಲಿಸಿ, ಶ್ರೀ ಶ್ರೀಧರ ಗೋಪಾಲಕೃಷ್ಣ ಭಟ್, ಅಧೀನ ಕಾರ್ಯದರ್ಶಿಗಳು (ವ್ಯಾಜ್ಯ) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಇವರನ್ನು ಮಂಡನಾಧಿಕಾರಿಯನ್ನಾಗಿ ಮೇಲೆ ಓದಲಾದ ಕ್ರ.ಸಂ.(4)ರ ದಿನಾಂಕ: 19/08/2010ರ ಆದೇಶದಲ್ಲಿ ನೇಮಿಸಿ ಆದೇಶಿಸಲಾಗಿತ್ತು.

ಆದರೆ, ಮೇಲೆ ಓದಲಾದ ಕ್ರ.ಸಂ.(5)ರ ದಿನಾಂಕ: 25/01/2011ರ ಕಾನೂನು ಮತ್ತು ಮಾನವ ಹಕ್ಕುಗಳ ಇಲಾಖೆಯ ಟಿಪ್ಪಣಿಯಲ್ಲಿ ಉಪ ಕಾರ್ಯದರ್ಶಿ–1 (ಅಭಿಪ್ರಾಯ), ಕಾನೂನು ಮತ್ತು ಮಾನವ ಹಕ್ಕುಗಳ ಇಲಾಖೆ ರವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸುವಂತೆ ಕೋರಿರುತ್ತಾರೆ. ಇದನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 147 ಎಎಸ್‌ಡಿ 2007 ಬೆಂಗಳೂರು, ದಿನಾಂಕ: 27/06/2011.

ಪ್ರಸ್ತಾವನೆಯನ್ನು ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಸಿ.ಜೆ ಕೃಷ್ಣಕುಮಾರ್, ತಹಶೀಲ್ದಾರ್ ಇವರ ಜನ್ಮ ದಿನಾಂಕದ ತಿದ್ದುಪಡಿ ಕುರಿತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಕಾಯ್ದೆ 1974ರ ಸೆಕ್ಷನ್ 5(3)ರನ್ವಯ ಶ್ರೀ ಈ ಪ್ರಕರಣದ ವಿಚಾರಣೆಯನ್ನು ಜರುಗಿಸಲು ಶ್ರೀ ಮೊಹಮದ್ ಇಸ್ಮಾಯಿಲ್, ಉಪ ಕಾರ್ಯದರ್ಶಿ (ಅಭಿಪ್ರಾಯ-1) ಕಾನೂನು ಮತ್ತು ಮಾನವ ಹಕ್ಕುಗಳ ಇಲಾಖೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 1621

ಕಂದಾಯ ಸಚಿವಾಲಯ

ವಿಷಯ : ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ, ಎ.ಎಂ. ಕಾವಲ್ ಹಾಗೂ ಇತರೆ ಗ್ರಾಮಗಳಲ್ಲಿ ಸರ್ಕಾರಿ ಜಮೀನುಗಳಿಗೆ ನಕಲು ಸಾಗುವಳಿ ಚೀಟಿ ನೀಡಿರುವ ಪ್ರಕರಣವನ್ನು ಲೋಕಾಯುಕ್ತರ ತನಿಖೆಗೆ ವಹಿಸುವ ಬಗ್ಗೆ.

ಓದಲಾಗಿದೆ : ಉಪ ವಿಭಾಗಾಧಿಕಾರಿ ಮಧುಗಿರಿ ಉಪ ವಿಭಾಗ ರವರ ಅ.ಸ.ಪತ್ರ ಸಂಖ್ಯೆ: ಎಲ್ಎನ್‌ಡಿ/ಸಿಆರ್/ಸಜಾಓತೆ/01/2010-11, ದಿನಾಂಕ: 19/03/2011.

ಪ್ರಸ್ತಾವನೆ :

ಮೇಲೆ ಓದಲಾದ ಮಧುಗಿರಿ ಉಪ ವಿಭಾಗಾಧಿಕಾರಿಗಳ ಪತ್ರದಲ್ಲಿ, ಈ ಕೆಳಕಂಡ ಮೂರು ಪ್ರವರ್ಗಗಳಲ್ಲಿ ಒಟ್ಟು 245 ವ್ಯಕ್ತಿಗಳಿಗೆ 1005-00 ಎಕರೆ ಜಮೀನನ್ನು ಅನಧಿಕೃತವಾಗಿ / ಅಕ್ರಮವಾಗಿ ಮಂಜೂರು ಮಾಡಿ ಸಾಗುವಳಿ ಚೀಟಿ ವಿತರಿಸುವುದು ಕಂಡುಬಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ.

1. ನಮೂನೆ 50, 53ನ್ನು ಸಲ್ಲಿಸದೆ ಅನಧಿಕೃತವಾಗಿ ಆರ್‌ಯುಸಿ ಸ್ವೀಕೃತಿ ವಹಿಯಲ್ಲಿ ದಾಖಲಿಸಿರುವ ವಿವರ: ಅರ್ಜಿದಾರರ ಸಂಖ್ಯೆ:197, ವಿಸ್ತೀರ್ಣ:821-00 ಎಕರೆಯನ್ನು ಠರಾವು ಹೊರಡಿಸಿ ಸಮಿತಿಯಲ್ಲಿ ಶಿಫಾರಸ್ಸು ಮಾಡಿರುವುದು ಕಂಡುಬಂದಿರುತ್ತದೆ.
2. ಅಧಿಕೃತ ಅಧಿಕಾರಿಗಳ ಆದೇಶವಿಲ್ಲದೆ ಅಕ್ರಮ ಸಕ್ರಮ ಸಮಿತಿಯಲ್ಲಿ ಠರಾವು ಹೊರಡಿಸಿ ಮಂಜೂರಿ ಮಾಡಿರುವುದು: 25 ವ್ಯಕ್ತಿಗಳಿಗೆ 89-00 ಎಕರೆ ಜಮೀನು.
3. ಭೂ ಮಂಜೂರಾತಿ ಸಮಿತಿಯ ಶಿಫಾರಸ್ಸು ಇಲ್ಲದೆ ಮಂಜೂರಿ ಮಾಡಿರುವುದು: 23 ವ್ಯಕ್ತಿಗಳಿಗೆ 95-00 ಎಕರೆ ಜಮೀನು.

ಈ ಮೇಲಿನ ಮೂರು ವರ್ಗಗಳ ಜಮೀನುಗಳಿಗೆ ಅಕ್ರಮವಾಗಿ ಸಾಗುವಳಿ ಚೀಟಿ ವಿತರಿಸಿ, ಮ್ಯುಟೇಷನ್ ಮಾಡಿ ಖಾತೆ ಪಹಣಿಗೆ ದಾಖಲು ಮಾಡಿರುವುದಾಗಿದೆ. ಈ ಪ್ರಕರಣಗಳಲ್ಲಿ ಸಂಬಂಧಪಟ್ಟ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಂತಹ ಅಧಿಕಾರಿ/ಸಿಬ್ಬಂದಿಗಳು ಮೇಲ್ವಿಚಾರಣೆ ಮಾಡದೇ ಶಾಮೀಲಾಗಿರುವುದಲ್ಲದೆ ಸಂಬಂಧಪಟ್ಟಂತಹ ಅಧಿಕಾರಿ/ಸಿಬ್ಬಂದಿಯು ಖಾಸಗಿ ವ್ಯಕ್ತಿಗಳೊಂದಿಗೆ ಜೊತೆಗೂಡಿ ಜಮೀನನ್ನು ಕಬಳಿಸಿ ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ಸಾಲ ಪಡೆದಿದ್ದು ಮತ್ತು ಭೂ ಸುಧಾರಣೆ ಕಾಯ್ದೆಯ 79ಎ ಬಿ ಯನ್ನು ಉಲ್ಲಂಘಿಸಿರುವುದಾಗಿದೆ.

ಒಟ್ಟಾರೆಯಾಗಿ, ಸಾಗುವಳಿಚೀಟಿಯನ್ನು ನೀಡುವ ಹಂತದ ಪ್ರಾರಂಭದಿಂದ ಕೊನೆಯ ಹಂತದವರೆಗೂ ಪ್ರಕರಣದಲ್ಲಿ ಅಧಿಕಾರಿ ನೌಕರರು ಶಾಮೀಲಾಗಿ, ಅಕ್ರಮವಾಗಿ ಸಾಗುವಳಿ ಚೀಟಿ ನೀಡಿರುವುದು ಮತ್ತು ಇದರಿಂದ ಸರ್ಕಾರಿ ಭೂಮಿಯನ್ನು ದುರ್ಬಳಕೆ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಈ ಅಕ್ರಮ ವ್ಯವಹಾರದಲ್ಲಿ ಅನೇಕ ರೀತಿಯ ವಿಧಿ ವಿಧಾನಗಳನ್ನು ಗಾಳಿಗೆ ತೂರಿ ಸ್ವೇಚ್ಛಾನುಸಾರವಾಗಿ ಅಕ್ರಮಗಳನ್ನು ಎಸಗಿರುವುದು ಹಾಗೂ ಮಂಜೂರಾತಿ ಮಾಡಿರುವುದು ಉಪ ವಿಭಾಗಾಧಿಕಾರಿಗಳ ತನಿಖೆಯಿಂದ ದೃಢಪಟ್ಟಿರುತ್ತದೆ. ಈ ಎಲ್ಲಾ ಅಂಶಗಳಿಂದಾಗಿ, ಪ್ರಕರಣವನ್ನು ಹೆಚ್ಚಿನ ಮತ್ತು ಉನ್ನತ ಮಟ್ಟದ ತನಿಖೆಗಾಗಿ ವಹಿಸುವಂತೆ ಉಪ ವಿಭಾಗಾಧಿಕಾರಿ, ಮಧುಗಿರಿ ರವರು ಸರ್ಕಾರವನ್ನು ಕೋರಿರುತ್ತಾರೆ.

ಮಧುಗಿರಿ ಉಪವಿಭಾಗಾಧಿಕಾರಿಗಳ ತನಿಖಾ ವರದಿಯನ್ನು ಪರಿಶೀಲಿಸಿದ ಸರ್ಕಾರವು ಅದರಲ್ಲಿ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆಗಾಗಿ ಪ್ರಸ್ತಾಪಿಸಿರುವ ಅಂಶಗಳಲ್ಲಿ ಮೇಲ್ನೋಟದ ಸಮರ್ಥನೆ ಹೊಂದಿದ್ದು, ಲೋಕಾಯುಕ್ತದ ತನಿಖೆಗೆ (Investigation) ವಹಿಸಲು ಇದೊಂದು ಯೋಗ್ಯ ಪ್ರಕರಣವಾಗಿರುತ್ತದೆ. ಆದುದರಿಂದ ಉಪ ವಿಭಾಗಾಧಿಕಾರಿ ಮಧುಗಿರಿ ರವರ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 21 ಎಡಿಇ 2011 ಬೆಂಗಳೂರು, ದಿನಾಂಕ 25-06-2011

ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ, ಎ.ಎಂ. ಕಾವಲ್ ಹಾಗೂ ಇತರೆ ಗ್ರಾಮಗಳಲ್ಲಿ ಸರ್ಕಾರಿ ಜಮೀನುಗಳಿಗೆ ನಕಲು ಸಾಗುವಳಿ ಚೀಟಿ ನೀಡಿರುವ ಬಗ್ಗೆ ಹಾಗೂ ಈ ಸಂಬಂಧ ಎಸಗಿದ ಇನ್ನಿತರೆ ಅಕ್ರಮ ಅವ್ಯವಹಾರಗಳ ಬಗ್ಗೆ ಹಾಗೂ ಅದರಲ್ಲಿ ಭಾಗಿಯಾಗಿರುವ ಕಂದಾಯ ಇಲಾಖೆಯ ಅಧಿಕಾರಿ ಸಿಬ್ಬಂದಿಯ ಬಗ್ಗೆಯು ತನಿಖೆ ನಡೆಸಲು ಸರ್ಕಾರವು ಪ್ರಕರಣವನ್ನು ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 7(2)(ಎ) ರನ್ವಯ ಲೋಕಾಯುಕ್ತಕ್ಕೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 1622

ಶಿಕ್ಷಣ ಸಚಿವಾಲಯ

ವಿಷಯ : 2011–12ನೇ ಸಾಲಿಗೆ ಸರ್ಕಾರಿ / ವಿಶ್ವವಿದ್ಯಾಲಯ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ ಆದೇಶ.

ಪ್ರಸ್ತಾವನೆ :

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳ) ಅಧಿನಿಯಮ, 2006 ದಿನಾಂಕ: 01/07/2006 ರಿಂದ ಜಾರಿಗೆ ಬಂದಿದ್ದು ಅದರಂತೆ 2011–12ನೇ ಸಾಲಿಗೆ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ನಿಗದಿ ಕುರಿತಂತೆ ಕರ್ನಾಟಕ ಸರ್ಕಾರ ಮತ್ತು Consortium of Medical, Engineering and Dental Colleges of Karnataka (Comed-K) ಮತ್ತು The Karnataka Religions and Linguistic Minority Professional Colleges Association ನಡುವೆ ಆದ ಒಮ್ಮತಾಭಿಪ್ರಾಯದ ಒಪ್ಪಂದದಂತೆ ಕರ್ನಾಟಕದಲ್ಲಿರುವ ಖಾಸಗಿ ಅನುದಾನರಹಿತ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಸರ್ಕಾರದ ಪಾಲಿನ ಒಟ್ಟು ಸೀಟುಗಳ ಪೈಕಿ ಶೇ.45ರಷ್ಟು ಸೀಟುಗಳನ್ನು ಪ್ರತಿ ಕಾಲೇಜಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಎರಡು ಹಂತದ ಅಂದರೆ ರೂ. 30,000/– ಮತ್ತು ರೂ. 35,000/– ಶುಲ್ಕದಂತೆ ನಿಗದಿಪಡಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ 25,000 ಒಳಗಡೆ ರ್‍ಯಾಂಕ್ ಪಡೆದ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷದೊಳಗಿರುವ ವಿದ್ಯಾರ್ಥಿಗಳು ರೂ. 35,000/– ಶುಲ್ಕದಡಿ ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯುವ ಪ್ರತಿ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗ ಪೂರ್ಣಗೊಳ್ಳುವವರೆಗೆ ಅಂದರೆ 4 ವರ್ಷಗಳವರೆಗೆ ರೂ. 5,000/– ಗಳ ವರ್ಷ ಪೂರ್ಣಗೊಳ್ಳುವ ಮುನ್ನ ಈ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಟಿಇಸಿ 2011 ಬೆಂಗಳೂರು, ದಿನಾಂಕ: 22/06/2011

2011–12ನೇ ಸಾಲಿಗೆ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ/ವಿಶ್ವವಿದ್ಯಾಲಯ/ಖಾಸಗಿ ಅನುದಾನಿತ/ಖಾಸತಿ ಅನುದಾನರಹಿತ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿಯು ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಇರುತ್ತದೆ. ಸರ್ಕಾರಿ ವಿಶ್ವವಿದ್ಯಾಲಯ ಮತ್ತು ಖಾಸಗಿ/ಅನುದಾನಿತ ಅಲ್ಪಸಂಖ್ಯಾತ ಹಾಗೂ ಅಲ್ಪಸಂಖ್ಯಾತವಲ್ಲದ ಶಿಕ್ಷಣ ಸಂಸ್ಥೆಗಳ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ನಿಬಂಧನೆಗಳು:–

1. ಎಲ್ಲಾ ಸರ್ಕಾರಿ/ವಿಶ್ವವಿದ್ಯಾಲಯ/ಅನುದಾನಿತ/ಖಾಸಗಿ ಅನುದಾನರಹಿತ (ಅಲ್ಪಸಂಖ್ಯಾತ ಹಾಗೂ ಅಲ್ಪಸಂಖ್ಯಾತವಲ್ಲದ) ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಐಸಿಟಿಇಯು ನಿಗದಿಪಡಿಸಬಹುದಾದ ಪ್ರತಿ ಕೋರ್ಸುಗಳ ಒಟ್ಟು ಪ್ರವೇಶ ಮಿತಿಯ ಮೇಲೆ ಶೇ. 5ರಷ್ಟು ಸಂಖ್ಯಾಧಿಕ ಸೀಟುಗಳನ್ನು (supernumerary) ಬೋಧನಾ ಶುಲ್ಕವಿಲ್ಲದೆ (without fees) ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷದ ಮಿತಿಯೊಳಗಿರುವ ಫಲಾನುಭವಿಗಳಿಗೆ ಸೀಟನ್ನು ಹಂಚಿಕೆ ಮಾಡಲಾಗುವುದು.

(ಅ) ರಾಜ್ಯ ಸರ್ಕಾರವು ನಿಗದಿಪಡಿಸಿರುವ ಬೋಧನಾ ಶುಲ್ಕವನ್ನು ಈ ಫಲಾನುಭವಿಯು ಭರಿಸತಕ್ಕದ್ದಲ್ಲ. ಆದರೆ ಈ ಅಭ್ಯರ್ಥಿಯು ವಿಶ್ವವಿದ್ಯಾಲಯ ಶುಲ್ಕವಾಗಿ ರೂ. 3,090/– ಗಳನ್ನು ಮಾತ್ರ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮಾತ್ರ ವಿಶ್ವವಿದ್ಯಾಲಯದ ಶುಲ್ಕವನ್ನು ಪಾವತಿಸುವಂತಿಲ್ಲ.

(ಆ) ಎಐಸಿಟಿಇಯ ಈ ಯೋಜನೆಯ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರತಿ ಕೋರ್ಸುಗಳಲ್ಲೂ ಶೇ. 5ರಷ್ಟನ್ನು ಸಂಖ್ಯಾಧಿಕವಾಗಿ ಹಂಚಿಕೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದವರಿಂದ ಮಾತ್ರ ಭರ್ತಿ ಮಾಡತಕ್ಕದ್ದು.

(ಇ) ಈ ಸೀಟುಗಳನ್ನು ಅರ್ಹ ಅಭ್ಯರ್ಥಿಗಳಿಗೆ ಅವರು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ರ್‍ಯಾಂಕ್ ಆಧಾರದ ಮೇಲೆ ಹಂಚಿಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸರ್ಕಾರವು ಅಧಿಕಾರವನ್ನು ನೀಡಲಾಗಿದೆ.

(ಈ) ಸಂಖ್ಯಾಧಿಕ ಸೀಟುಗಳಿಗೆ (supernumerary seats) ವಿದ್ಯಾರ್ಥಿಗಳ ಲಭ್ಯತೆ ಇಲ್ಲದಿದ್ದಲ್ಲಿ ಅದನ್ನು ಸರ್ಕಾರಿ ಅಥವಾ ಕಾಮೆಡ್–ಕೆ/ಕೆಆರ್‌ಎಲ್‌ಎಂಪಿ ಆಡಳಿತ ಮಂಡಳಿ ಕೋಟಾ ಸೀಟುಗಳಾಗಿ ಪರಿವರ್ತಿಸತಕ್ಕದ್ದಲ್ಲ.

(ಉ) ಈ ವರ್ಗದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ವಿವರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನೀಡತಕ್ಕದ್ದು.

(ಊ) ಈ ವರ್ಗದಡಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಯಾವುದೇ ಕಾರಣದಿಂದ ಶಿಕ್ಷಣ ಸಂಸ್ಥೆಗಳು/ಕೋರ್ಸುಗಳ ಬದಲಾವಣೆಗೆ ಅವಕಾಶ ಇರತಕ್ಕದ್ದಲ್ಲ.

(ಋ) ಈ ವರ್ಗದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ಶಿಕ್ಷಣ ಸಂಸ್ಥೆಗಳ ಅಂತರಜಾಲದಲ್ಲಿ ಪ್ರಕಟಿಸತಕ್ಕದ್ದು.

2. ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಅನುದಾನರಹಿತ ಕೋರ್ಸುಗಳು/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ರೂ. 30,000/– ಶುಲ್ಕ ಹಾಗೂ ರೂ. 3,090/– ವಿಶ್ವವಿದ್ಯಾಲಯದ ಶುಲ್ಕವನ್ನೊಳಗೊಂಡಂತೆ ರೂ. 33,090/– ಶುಲ್ಕದಡಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಯಾವುದೇ ಸಹಾಯಧನವನ್ನು ಸರ್ಕಾರದಿಂದ ನೀಡಲಾಗುವುದಿಲ್ಲ. (ಕಾಲೇಜುಗಳ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ).

3. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ 25,000 ಒಳಗಡೆ ರ್‍ಯಾಂಕ್ ಪಡೆದ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಸಹಾಯಧನವನ್ನು ನೀಡುವ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು. (ಕಾಲೇಜುಗಳ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ).

4. ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳು ರೂ. 15,000/– ಶುಲ್ಕ ಹಾಗೂ ರೂ. 3,090/– ವಿಶ್ವವಿದ್ಯಾಲಯ ಶುಲ್ಕವನ್ನೊಳಗೊಂಡಂತೆ ರೂ. 18,090/– ಶುಲ್ಕವನ್ನು ಪಾವತಿಸತಕ್ಕದ್ದು.

5. ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಅನುದಾನಿತ ಕೋರ್ಸುಗಳಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳು ರೂ. 15,000/- ಶುಲ್ಕ ಹಾಗೂ ರೂ.3,090/- ವಿಶ್ವವಿದ್ಯಾಲಯ ಶುಲ್ಕವನ್ನೊಳಗೊಂಡಂತೆ ರೂ. 18,090/- ಶುಲ್ಕವನ್ನು ಪಾವತಿಸತಕ್ಕದ್ದು.

6. ಸಾಂದರ್ಭಿಕ ಸುತ್ತಿನ (casual round of counseling) ನಂತರ ಬಾಕಿ ಉಳಿಯುವ ಸೀಟುಗಳನ್ನು ಪೂರಕ ಪರೀಕ್ಷೆ (supplementary examination) ಉತ್ತೀರ್ಣರಾಗಿ ಅರ್ಹರಾದಂತಹ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡತಕ್ಕದ್ದು. ತದನಂತರ ಉಳಿಯುವ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದೊಂದಿಗೆ reconciliation ಆದ ಬಳಿಕ ಆಡಳಿತ ಮಂಡಳಿಗಳಿಗೆ / ಶಿಕ್ಷಣ ಸಂಸ್ಥೆಗಳಿಗೆ ಹಿಂದಿರುಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಅನುಬಂಧ-1

ಸರ್ಕಾರಿ ಆದೇಶ ಸಂಖ್ಯೆ: ಇಡಿ 128 ಟಿಇಸಿ 2011, ಬೆಂಗಳೂರು, ದಿನಾಂಕ: 22ನೇ ಜೂನ್ 2011

ಸರ್ಕಾರಿ ವಿಶ್ವವಿದ್ಯಾಲಯ ಮತ್ತು ಖಾಸಗಿ / ಅನುದಾನಿತ ವೈದ್ಯಕೀಯ, ದಂತ ಮತ್ತು ಇಂಜಿನಿಯರಿಂಗ್ ಕಾಲೇಜುಗಳು

(ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ)

	ಸರ್ಕಾರಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು (ಶೇ. 100 ಸರ್ಕಾರಿ ಸೀಟುಗಳು) ಶುಲ್ಕ (ರೂ.ಗಳಲ್ಲಿ-ವಿವಿ ಶುಲ್ಕ ಸೇರಿ)	ಖಾಸಗಿ ಅನುದಾನಿತ ಕಾಲೇಜುಗಳು (ಶೇ.95 ಸರ್ಕಾರಿ ಸೀಟುಗಳು) ಶುಲ್ಕ (ರೂ.ಗಳಲ್ಲಿ-ವಿ.ವಿ ಶುಲ್ಕ ಸೇರಿ)	
		ಶೇಕಡ 95 ಸರ್ಕಾರಿ 'ಸೀಟುಗಳು ** (ಕರ್ನಾಟಕ ಪರೀಕ್ಷೆ ಪ್ರಾಧಿಕಾರದ ಮೂಲಕ)	ಶೇಕಡ 5 ಆಡಳಿತ ಮಂಡಳಿ ಸೀಟುಗಳು**
ವೈದ್ಯಕೀಯ	16,400	--	--
ದಂತ	14,400	--	--
ಇಂಜಿನಿಯರಿಂಗ್/ಟೆಕ್ನಾಲಜಿ /ಆರ್ಕಿಟೆಕ್ಚರ್	18,090	18,090	1,00,000 ಅಥವಾ 1,25,000ಗಳ ಮಿತಿಗೆ ಒಳಪಟ್ಟು

ಸರ್ಕಾರದ ಆದೇಶ ಸಂಖ್ಯೆ: ಇಡಿ 50 ಟಿಇಸಿ 2002, ದಿನಾಂಕ: 22/06/2002 ರನ್ವಯ ನಿಗದಿಪಡಿಸಿದೆ.

ಬಿ.ಎನ್. ಜಗದೀಶ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಖಾಸಗಿ ವೈದ್ಯಕೀಯ ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳು (ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳು)

(ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ) (ವಿಶ್ವವಿದ್ಯಾಲಯ ಶುಲ್ಕ ಹೊರತುಪಡಿಸಿ)

	ವೈದ್ಯಕೀಯ			**ದಂತ**			**ಇಂಜಿಇಯರಿಂಗ್/ಟೆಕ್ನಾಲಜಿ/ಆರ್ಕಿಟೆಕ್ಚರ್**			
	ಸರ್ಕಾರ	**ಆಡಳಿತ ಮಂಡಳಿ**		**ಸರ್ಕಾರ**	**ಆಡಳಿತ ಮಂಡಳಿ**		**ಸರ್ಕಾರ**		**ಆಡಳಿತ ಮಂಡಳಿ**	
ಸೀಟು ಹಂಚಿಕೆ ಶೇಕಡವಾರು	40%	40%	20% (15+5)	35%	45%	20% (15+5)	45%	5%	30%	25% (15+10)
ಶುಲ್ಕ ರೂ.ಗಳಲ್ಲಿ (ಪ್ರತಿ ವರ್ಷಕ್ಕೆ)	35,000	3,25,000ಗಳ ಮಿತಿಗೊಳ ಪಟ್ಟು	--	25,000	2,30,000ಗಳ ಮಿತಿಗೊಳ ಪಟ್ಟು	--	**ಭಾಗ-1** 30,000 ಅಥವಾ 35,000	**ಭಾಗ-2** ಸಂಖ್ಯಾಧಿಕ ಸೀಟುಗಳು ಎಐಸಿಟಿಇ ಮಾರ್ಗಸೂಚಿ ಯಂತೆ (supernumerary seats) ಅವಿಶ್ವವಿದ್ಯಾಲ ಯದ ಶುಲ್ಕ ರೂ. 3,090/- ಗಳು ಮಾತ್ರ	1,00,000 ಅಥವಾ 1,25,000 ಗಳ ಮಿತಿಗೊಳ ಪಟ್ಟು	--

ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಖಾಸಗಿ ವೈದ್ಯಕೀಯ ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳು (ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳು)
(ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ) (ವಿಶ್ವವಿದ್ಯಾಲಯ ಶುಲ್ಕ ಹೊರತುಪಡಿಸಿ)

	ವೈದ್ಯಕೀಯ			ದಂತ			ಇಂಜಿನಿಯರಿಂಗ್/ಟೆಕ್ನಾಲಜಿ/ಆರ್ಕಿಟೆಕ್ಚರ್			
	ಸರ್ಕಾರ	ಆಡಳಿತ ಮಂಡಳಿ		ಸರ್ಕಾರ	ಆಡಳಿತ ಮಂಡಳಿ		ಸರ್ಕಾರ		ಆಡಳಿತ ಮಂಡಳಿ	
ಸೀಟು ಹಂಚಿಕೆ ಶೇಕಡ ವಾರು	25%	55%	20%	25%	55%	20%	**ಭಾಗ–1** 40%	**ಭಾಗ–2** ಸಂಖ್ಯಾಧಿಕ ಸೀಟುಗಳು (supernumerary seats)	30%	30% (20+10)
ಶುಲ್ಕ ರೂ. ಗಳಲ್ಲಿ	35,000	3,25,000ಗಳ ಮಿತಿಗೊಳಪಟ್ಟು	--	25,000	2,30,000ಗಳ ಮಿತಿಗೊಳಪಟ್ಟು	--	30,000 ಅಥವಾ 35,000	ವಿಶ್ವವಿದ್ಯಾಲಯದ ಶುಲ್ಕ ರೂ. 3,090/–ಗಳು ಮಾತ್ರ	1,00,000 ಅಥವಾ 1,25,000ಗಳ ಮಿತಿಗೊಳಪಟ್ಟು	--

ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಟಿಇಸಿ 2011, ದಿನಾಂಕ: 22/06/2011ರ
ಅನುಬಂಧ–2

Sl. No	Name of the Colleges	Place	Govt. Fees (Rs.)	COMEDK/KRLMPA Fees (Rs.)
1.	AMC Engineering College	Bangalore	30000	125000
2.	Acharya Institute of Technology	Bangalore	30000	125000
3.	Acharya's NRV School of Architecture	Bangalore	30000	125000
4.	APS College of Enginneering	Bangalore	30000	125000
5.	Atria Institute of Technology	Bangalore	30000	125000
6.	B.N.M Institute of Technology	Bangalore	30000	125000
7.	B.V. Bhoomaradi College of Engineering & Technology	Hubli	30000	125000
8.	Bangalore Institute of Technology	Bangalore	30000	125000
9.	Bapuji Institute of Technology	Davanagere	30000	125000
10.	BMS College of Engineering	Bangalore	30000	125000
11.	BMS Institute of Technology	Bangalore	30000	125000
12.	BMS School of Architecture	Bangalore	30000	125000
13.	C.M.R Institute of Technology	Bangalore	30000	125000
14.	Dayananda Sagar College of Engineering	Bangalore	30000	125000
15.	Don Bosco Institute of Technology	Bangalore	30000	125000
16.	Dr. Ambedkar Institute of Technology	Bangalore	30000	125000
17.	East West Institute of Technology	Bangalore	30000	125000
18.	Global Academy of Technolgy	Bangalore	30000	125000
19.	Golapan College of Engineering & Management	Bangalore	30000	125000
20.	HKBK Colleges of Engineering	Bangalore	30000	125000
21.	JNN College of Engineering	Shimoga	30000	125000
22.	J.S.S Academy of Technical Education	Bangalore	30000	125000
23.	JSS Mahavidyapeetha Sri Jayachamarajendra College of Engineering	Msyore	30000	125000
24.	K.L.E Society's College of Engineering & Technology	Belgaum	30000	125000
25.	K.S School of Engineering and Management	Bangalore	30000	125000

26.	K.S Institute of Technology	Bangalore	30000	125000
27.	Karavali Institute of Technology	Mangalore	30000	125000
28.	K.L. E Society K.L.E Institute of Engineering	Hubli	30000	125000
29.	KLS Gogte Institute of Technology	Belgaum	30000	125000
30.	KLS's Vishwanath Rao Deshpande Rural Institute of Technology	Haliyal	30000	125000
31.	M.S Engineering College	Bangalore	30000	125000
32.	M.S Ramaiah Institute of Technology	Bangalore	30000	125000
33.	MVJ College of Engineering	Bangalore	30000	125000
34.	Nagarjuna College of Engineering and Technology	Bangalore	30000	125000
35.	NITTE Meenakshi Institute of Technology	Bangalore	30000	125000
36.	NMAM Institute of Technology	Nitte	30000	125000
37.	New Horizen College Engineering	Bangalore	30000	125000
38.	PES Institute of Technology	Bangalore	30000	125000
39.	PES School of Engineering	Bangalore	30000	125000
40.	PNS Women's Institute of Technology	Bangalore	30000	125000
41.	R.V College of Engineering	Bangalore	30000	125000
42.	RTE Society Rural Engineering College	Hulkoti	30000	125000
43.	Rajiv Gandhi Institute of Technology	Bangalore	30000	125000
44.	Reva Institute of Technology and Management	Bangalore	30000	125000
45.	RNS Institute of Technology	Bangalore	30000	125000
46.	SJB Institute of Technology	Bangalore	30000	125000
47.	Sapthagiri College of Engineering	Bangalore	30000	125000
48.	SDM College of Engineering and Technology	Dharwad	30000	125000
49.	SDM Institute of Technology	Ujire	30000	125000
50.	Siddaganga Institute of Technology	Tumkur	30000	125000
51.	Sir M. Visvesvaraya Institute of Technology	Bangalore	30000	125000
52.	Sri Revana Siddeshwara Institute of Technology	Bangalore	30000	125000
53.	Sri Siddartha Institute of Technology	Tumkur	30000	125000
54.	Sri Venkateshwara College of Engineering	Bangalore	30000	125000
55.	Srinivasa Institute of Technology	Mangalore	30000	125000
56.	Srinivas School of Engineering	Mangalore	30000	125000
57.	Sri Jayachamarajendra College of Engineering	Mysore	30000	125000
58.	T. John Institute of Technology	Bangalore	30000	125000
59.	The National Institute of Engineering	Mysore	30000	125000
60.	The Oxford College of Engineering	Bangalore	30000	125000
61.	T. John Institute of Technology	Bangalore	30000	125000
62.	Vidya Vikas Institute of Engineering and Technology	Mysore	30000	125000
63.	Vidyavardhaka College of Engineering	Mysore	30000	125000

ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಸರ್ಕಾರದ ಆದೇಶ ಸಂಖ್ಯೆ: ಇಡಿ 128 ಟಿಇಸಿ 2011, ದಿನಾಂಕ: 22/06/2011ರ
ಅನುಬಂಧ–3

Sl. No	Name of the Colleges	Place	Govt. Fees (Rs.)	COMEDK/KRLMPA Fees (Rs.)
1.	ACS College Engineering	Bangalore	35000	100000
2.	Adichunchanagiri Institute of Technology	Chickmangalore	35000	100000
3.	Alpha College of Engineering	Bangalore	35000	100000
4.	Alva's Institute of Engineering and Techology	Moodabidri	35000	100000
5.	Amruta Institute of Engineering and Management Sciences	Bangalore	35000	100000
6.	Angadi Institute of Technology and Management	Belgaum	35000	100000
7.	Appa Institute of Technology	Gulbarga	35000	100000
8.	Audden Technology and Management Academy	Bangalore	35000	100000
9.	Academy for Technical and Management Excellence	Mysore	35000	100000
10.	Anjuman Engineering College	Bhatkal	35000	100000
11.	Akshaya Institute of Technology	Tumkur	35000	100000
12.	BGS Institute of Technology	Mandya	35000	100000
13.	Ballari Institute of Technology and Management	Bellary	35000	100000
14.	Banglaore College of Engineering and Technology	Bangalore	35000	100000
15.	Bangalore Technology Institute	Bangalore	35000	100000
16.	Basavakalyana Engineering College	Bidar Dist	35000	100000
17.	Basaveshwar Engineering College	Bagalkote	35000	100000
18.	Bearys Institute of Technology	Mangalore	35000	100000
19.	BLDEA's V.P. Dr. P.G. Halkatte College of Engineering and Technology	Bijapur	35000	100000
20.	Brindavan College of Engineering	Bangalore	35000	100000
21.	BTL Institute of Technology	Bangalore	35000	100000
22.	Bahubali College of Engineering	Shravanabelgola	35000	100000
23.	C. Byregowda Institute of Technology	Kolar	35000	100000
24.	Cambridge Institute of Technology	Bangalore	35000	100000
25.	Canara Engineering College	Bantwal	35000	100000
26.	Channabasaveshwara Institute of Technology	Tumkur	35000	100000
27.	City Engineering College	Bangalore	35000	100000
28.	Coorg Institute of Technology	South Kodagu	35000	100000
29.	Dr. M.V Shetty Institute of Technology	Moodbidri	35000	100000
30.	Dr. Sri Sri Sri Shivakumara Mahaswamy College of Engineering	Bangalore (R)	35000	100000
31.	Dr. T. Thimmaiah Institute of Technology	K.G.F	35000	100000
32.	East point College of Engineering and Technology	Bangalore	35000	100000
33.	East Point College of Engineering for Women	Bangalore	35000	100000
34.	Ekalavya Institute of Technology	Ummathur	35000	100000
35.	GM Institute of Technology	Davanagere	35000	100000
36.	Godutai Engineering College for Women	Gulbarga	35000	100000
37.	GSS Institute of Technology	Bangalore	35000	100000
38.	GSSS Institute of Engineering and Technology for Women	Mysore	35000	100000

39.	Ghousia Engineering College	Ramanagar	35000	100000
40.	Gurunanak Dev Engineering College	Bidar	35000	100000
41.	H.K.E. Society's P.D.A. College of Engineering	Gulbarga	35000	100000
42.	H.K.E. Society's SLN College of Engineering	Raichur	35000	100000
43.	HMS Institute of Technology	Tumkur	35000	100000
44.	Impact Colleges of Engineering and Applied Science	Bangalore	35000	100000
45.	Isamia Inst of Technology	Bangalore	35000	100000
46.	Jain College of Engineering	Belgaum	35000	100000
47.	Jnana Vikas Institute of Technology	Bangalore (R)	35000	100000
48.	JSS Academy of Technical Education	Bangalore	35000	100000
49.	Jyothy Institute of Technology	Bangalore	35000	100000
50.	JSS Academy of Technical Education	Mauritius	35000	100000
51.	K.L.E Society's K.L.E. College of Engineering	Chikodi	35000	100000
52.	K.V.G. College of Engineering	Sullia	35000	100000
53.	Kalpataru Institute of Technology	Tiptur	35000	100000
54.	KNS Institute of Technology	Bangalore	35000	100000
55.	Khaja Banda Nawaz College of Engineering	Gulbaga	35000	100000
56.	KCT Engineering College	Gulbarga	35000	100000
57.	Maharaja Institute Technology	Mysore	35000	100000
58.	Malnad College of Engineering	Hassan	35000	100000
59.	Mangalore Institute of Technology and Engineering	Moodabidri	35000	100000
60.	Maratha Mandal's Engineering College	Belgaum	35000	100000
61.	Moodlakatte Institute of Technology	Kundapur	35000	100000
62.	NIE Institute of Technology	Mysore	35000	100000
63.	Navodya Institute of Technology	Raichur	35000	100000
64.	PES College of Engineering	Mandya	35000	100000
65.	PES Institute of Technology and Management	Shivamoga	35000	100000
66.	Prasanna College of Engineering and Technology	Belthangadi	35000	100000
67.	Proudhadeveraya Institute of Technology	Hospet	35000	100000
68.	P.A. College of Engineering	Mangalore	35000	100000
69.	R.L. Jalappa Institute of Technology	Doddaballapur	35000	100000
70.	R.R. Institute of Technology	Bangalore	35000	100000
71.	Rajarajeshwari College of Engineering	Bangalore	35000	100000
72.	Rajiv Institute of Technology	Bangalore	35000	100000
73.	Rao Bahadur Y. Mahadevappa Engineering College	Bellary	35000	100000
74.	Rural Engineering College	Bhalki	35000	100000
75.	Rajarajeshwari College of Engineering	Bangalore	35000	100000
76.	SJC Institute of Technology	Chickkaballapur	35000	100000
77.	SEA College of Engineering and Technology	Bangalore	35000	100000
78.	S.J.P.N. Trust's Hirasugar Institute of Technology	Nidasoshi Belgaum	35000	100000
79.	Sahyadri College of Engineering and Management	Mangalore	35000	100000
80.	Sai Vidya Institute of Technology	Bangalore	35000	100000
81.	Sambhram Institute of Technology	Bangalore	35000	100000
82.	Sambhram Group of Institutions	Channapatna	35000	100000
83.	SECAB Institute of Engineering and Technology	Bijapur	35000	100000

84.	Shalkh College of Engineering and Technology	Belgaum	35000	100000
85.	Shirdi Sai Engineering College	Bangalore	35000	100000
86.	Shree Devi Institute of Technology	Mangalore	35000	100000
87.	Shree Devi Institute of Technology	Tumkur	35000	100000
88.	SJM Institute of Technology	Chitradurga	35000	100000
89.	Smt. Kamala and Sri Venkappa M. Agadi College of Engineering and Technology	Laxmeshwar	35000	100000
90.	Sri Basaveshwara Institute of Technology	Tiptur	35000	100000
91.	Sri Bhagawan Mahaveer Jain College of Engineering	Bangalore (R)	35000	100000
92.	S.G. Balekumdri Institute of Technology	Belgaum	35000	100000
9.	Shashib College of Engineering	Chikballapur	35000	100000
94.	Sri Krishna Institute of Technology	Bangalore	35000	100000
95.	Sri Krishna School of Engineering and Management	Bangalore	35000	100000
96.	Sri Taralabalu Jagadguru Institute of Technology	Ranebennur	35000	100000
97.	St. Joseph Engineering College	Mangalore	35000	100000
98.	Sri Madhwa Vadiraja Institute of Technology	Bantwal Udup	35000	100000
99.	Tontadaraya College of Engineering	Gadag	35000	100000
100.	Veerappa Nisty Engineering College	Yadgir	35000	100000
101.	Vemana Institute of Technology	Bangalore	35000	100000
102.	Vijaya Vittala Institute of Technology	Bangalore	35000	100000
103.	Vivekananda Institute of Technology	Bangalore	35000	100000
104.	Vivekananda College of Engineering and Techology	Puttur	35000	100000
105.	Yagachi Institute of Technology	Hassan	35000	100000
106.	Yellamma Dasappa Institute of Technology	Bangalore	35000	100000

ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಪಿ.ಆರ್. 1623

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂ.: ಸಿಆಸುಇ 72 ಶಿಸನೇ 2009, ದಿನಾಂಕ: 03-07-2009.
2. ಸರ್ಕಾರಿ ಆದೇಶ ಸಂ.: ಸಿಆಸುಇ 59 ಶಿಸನೇ 2010, ದಿನಾಂಕ: 17-06-2010.
3. 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆಯ ಪತ್ರ ದಿನಾಂಕ: 02-06-2011.
4. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ.: ಪಿಎಸ್.ಸಿಎಂ/1481/2011, ದಿನಾಂಕ: 03-06-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯಪಡೆಯನ್ನು ರಚಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರ ಆದೇಶದಲ್ಲಿ 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆ ಅವರು 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಲಾಗಿರುವ ಕಾರ್ಯಪಡೆಯ ಅವಧಿಯನ್ನು 01-07-2010 ರಿಂದ ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಅಧ್ಯಕ್ಷರು, 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆ ಅವರು 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಲಾಗಿರುವ ಕಾರ್ಯಪಡೆಯ ಅವಧಿಯನ್ನು 30-06-2011 ರಿಂದ ಒಂದು ವರ್ಷದ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ ಅವರು 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆಯ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಲು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 68 ಶಿಸನೇ 2011, ಬೆಂಗಳೂರು, ದಿನಾಂಕ: 24-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆದೇಶ ಸಂ.: ಸಿಆಸುಇ 72 ಶಿಸನೇ 2009, ದಿನಾಂಕ: 03-07-2009 ರ ಆದೇಶದನ್ವಯ ರಚಿಸಲಾಗಿರುವ ಕಾರ್ಯಪಡೆಯ ಅವಧಿಯನ್ನು ದಿನಾಂಕ: 01-07-2011 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 577 ವೆಚ್ಚ-12 2011, ದಿನಾಂಕ: 23-06-2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಹೆಚ್. ಚಂದ್ರಯ್ಯ

ಪಿಆರ್.ನಂ. 1631

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ರಾಜ್ಯ ಶಿಷ್ಟಾಚಾರ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆ, ಕೂಡ್ಲಗಿ ತಾಲೂಕಿನ ಮಹದೇವಪುರ ಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಭೂಸ್ವಾಪ್ರ/2009-10/7369, ದಿನಾಂಕ: 19-12-2009.

ಪ್ರಸ್ತಾವನೆ:

ಬಳ್ಳಾರಿ ಜಿಲ್ಲೆ, ಕೂಡ್ಲಗಿ ತಾಲ್ಲೂಕಿನ ಮಹದೇವಪುರ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಅಪ್ಪೇನಹಳ್ಳಿ ಗ್ರಾಮದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗೆ ಅವಾರ್ಡ್ ಪೂರ್ವ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 19-12-2009ರ ಪತ್ರದಲ್ಲಿ ಕೋರಿದ್ದಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಕಂಇ 42 ಭೂಸ್ವಾಹಾ 2000, ದಿನಾಂಕ: 08-10-2001 ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆಗಾಗಿ ಸಂಭವನೀಯ ವೆಚ್ಚದ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ.

ಈ ಪ್ರಕರಣದಲ್ಲಿ ಭೂಸ್ವಾಧೀನ ಸಂಭವನೀಯ ಠೇವಣಿ ರೂ. 11,58,662-00ಗಳಲ್ಲಿ ರೂ. 5,10,000-00ಗಳನ್ನು ಈಗಾಗಲೇ ಠೇವಣಿ ಇರಿಸಿದೆ. ಇನ್ನುಳಿದ ಮೊತ್ತ ರೂ. 6,48,662-00ಗಳನ್ನು ಠೇವಣಿ ಮಾಡಬೇಕಾಗಿದೆ.

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 178 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 23-06-2011

ಬಳ್ಳಾರಿ ಜಿಲ್ಲೆ, ಕೂಡ್ಲಗಿ ತಾಲ್ಲೂಕಿನ ಮಹದೇವಪುರ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಅಪ್ಪೇನಹಳ್ಳಿ ಗ್ರಾಮದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ರೂ. 6,48,662-00ಗಳನ್ನು (ಆರು ಲಕ್ಷದ ನಲವತ್ತೆಂಟು ಸಾವಿರದ ಆರುನೂರ ಅರವತ್ತೆರಡು ರೂ.ಗಳು ಮಾತ್ರ) ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡುವ ಸಲುವಾಗಿ ಬಿಡುಗಡೆ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4702-0-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 6,48,662-00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ: 20-10-2010 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿಆರ್.ನಂ. 1632

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕು ಧುತ್ತರಗಾಂವ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010–11/1104, ದಿನಾಂಕ: 28–02–2011.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕು ಧುತ್ತರಗಾಂವ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಗುಲ್ಬರ್ಗಾದ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಪರಿಹಾರ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ಮೇಲೆ ಓದಲಾದ ದಿನಾಂಕ: 28–02–2011ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ: 24–12–1993ರಂದು ಹೊರಡಿಸಿದೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ದಿನಾಂಕ: 28–04–1995 ರಂದು ರಚಿಸಿದ ಐತೀರ್ಪಿನಂತೆ ಪರಿಹಾರ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯದಲ್ಲಿ ಎಲ್.ಎ.ಸಿ. ಸಂಖ್ಯೆ: 836/96ನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ: 18–06–2001 ರಂದು ನೀಡಿರುವ ಆದೇಶದಲ್ಲಿ ಈ ಕೆಳಕಂಡ ಜಮೀನಿಗೆ ಪ್ರತಿ ಎಕರೆಗೆ ರೂ. 23,600/–ಗಳ ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಿ, ಈ ಮೊತ್ತದ ಮೇಲೆ ಶಾಸನಬದ್ಧ ಇತರೆ ಸವಲತ್ತುಗಳೊಂದಿಗೆ ಪಾವತಿಸಲು ಆದೇಶಿಸಿದೆ.

ಕ್ರಮ ಸಂಖ್ಯೆ	ಎಲ್‌ಎಸಿ	ಲಾಡ್‌ಚಿಂಚೋಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ. ಗಳಲ್ಲಿ)
1	836/96	186/2	1–35	1,53,626
		ಒಟ್ಟು		**1,53,626**

ಈ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ: ಎಸ್‌ಎಲ್‌ಪಿ/ಸಿಸಿ 9386/08ನ್ನು ದಿನಾಂಕ: 21–07–2008 ರಂದು ವಜಾ ಮಾಡಿದೆ.

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 37 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ: 25ನೇ ಜೂನ್ 2011

ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕು ಧುತ್ತರಗಾಂವ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಧುತ್ತರಗಾಂವ್ ಗ್ರಾಮಕ್ಕೆ ಸೇರಿದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಪರಿಹಾರ ಪಾವತಿಸಲು ರೂ. 1,53,626–00ಗಳನ್ನು (ಒಂದು ಲಕ್ಷದ ಐವತ್ತ್ಮೂರು ಸಾವಿರದ ಆರುನೂರ ಇಪ್ಪತ್ತಾರು ರೂ.ಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702–00–800–1–00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 1,53,626–00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20–10–2010 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿಆರ್.ನಂ. 1633

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಹುಲಿಯಾಪುರ ಗ್ರಾಮದ ಕೆರೆ ಮುಳುಗಡೆ ಮತ್ತು ಒಡ್ಡಿಗಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಭೂಸ್ವಾ/2010-11/1260, ದಿನಾಂಕ: 08-03-11.

ಪ್ರಸ್ತಾವನೆ:

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಹುಲಿಯಾಪುರ ಗ್ರಾಮದ ಕೆರೆ ಮುಳುಗಡೆ ಮತ್ತು ಒಡ್ಡಿಗಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಅವಾರ್ಡ್ ಪೂರ್ವ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ರೂ. 15,38,854/-ಗಳ ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ: 08-03-11ರ ಪತ್ರದಲ್ಲಿ ಕೋರಿದ್ದಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಕಂಇ 42 ಭೂಸ್ವಾಹಾ 2000, ದಿನಾಂಕ: 08-10-2001ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ವೆಚ್ಚದ ಶೇ. 50ರಷ್ಟು ಮುಂಗಡ ಹಣ ಅಂದರೆ ರೂ. 15,38,584/-ಗಳನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ.

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 36 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ: 24-06-2011

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಹುಲಿಯಾಪುರ ಗ್ರಾಮದ ಕೆರೆ ಮುಳುಗಡೆ ಮತ್ತು ಒಡ್ಡಿಗಾಗಿ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ಮೊತ್ತದ ಶೇ. 50ರಷ್ಟು ರೂ. 15,38,584-00ಗಳ (ಹದಿನೈದು ಲಕ್ಷದ ಮೂವತ್ತೆಂಟು ಸಾವಿರದ ಐನೂರ ಎಂಭತ್ತ್ನಾಲ್ಕು ರೂ.ಗಳು ಮಾತ್ರ) ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 15,38,584-00ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ: 20-10-2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿಆರ್.ನಂ. 1634

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಒಳಾಡಳಿತ ಮತ್ತು ಸಾರಿಗೆ ಸಚಿವಾಲಯ

ವಿಷಯ : ಉತ್ತರ ಹಾಗೂ ಈಶಾನ್ಯ ಕರ್ನಾಟಕ ಕಾರಾಗೃಹಗಳಿಗೆ ಒಂದು ಕಾರಾಗೃಹಗಳ ಉಪ ಮಹಾನಿರೀಕ್ಷಕರ (ಉತ್ತರ) ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಇ4/ಸಿಆರ್-67/2010-11 ದಿನಾಂಕ: 30-12-2010 ಮತ್ತು 21-03-2011.

ಪ್ರಸ್ತಾವನೆ:

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕರು ಬೆಂಗಳೂರು, ಇವರು ಮೇಲೆ ಓದಲಾದ ಪತ್ರಗಳಲ್ಲಿ ಕಾರಾಗೃಹಗಳ ಇಲಾಖೆಯಲ್ಲಿ ಹೆಚ್ಚುತ್ತಿರುವ ಆಡಳಿತಾತ್ಮಕ ಸಮಸ್ಯೆಗಳ ನಿವಾರಣೆ, ಬಂದಿಗಳಿಗೆ ಉತ್ತಮ ಆಹಾರ ವಿತರಣೆ, ಬಂದಿಗಳ ಸುಧಾರಣೆ, ಹಾಗೂ ಬಂದಿಗಳಲ್ಲಿ ಶಿಸ್ತನ್ನು ಕಾಪಾಡಲು ಆಡಳಿತ ವಿಕೇಂದ್ರಿಕರಣಗೊಳಿಸುವುದು ಅತ್ಯಾವಶ್ಯಕವಾಗಿದೆ. ರಾಜ್ಯದ ಉತ್ತರ ಭಾಗದಲ್ಲಿ ಬೆಳಗಾವಿ, ಬಿಜಾಪುರ, ಬಳ್ಳಾರಿ, ಗುಲ್ಬರ್ಗಾ ಈ ನಾಲ್ಕು ಕೇಂದ್ರ ಕಾರಾಗೃಹಗಳು ಉಳಿದ 12 ಜಿಲ್ಲಾ ಕಾರಾಗೃಹಗಳಿದ್ದು, ಕೇಂದ್ರ ಕಾರಾಗೃಹಗಳಲ್ಲಿ ಮರಣದಂಡನೆ ಎದುರಿಸುತ್ತಿರುವ ಬಂದಿಗಳು, ಕುಖ್ಯಾತ ರೌಡಿಗಳು ಹಾಗೂ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಂದಿಗಳು ದಾಖಲಾಗಿರುತ್ತಾರೆ. ಆದುದರಿಂದ ರಾಜ್ಯದ ಉತ್ತರ ಮತ್ತು ಈಶಾನ್ಯ ಭಾಗದ ಕಾರಾಗೃಹಗಳ ಮೇಲ್ವಿಚಾರಣೆಗಾಗಿ ಬೆಳಗಾವಿಯನ್ನು ಕೇಂದ್ರ ಸ್ಥಾನವಾಗಿಟ್ಟು ಒಬ್ಬ ಕಾರಾಗೃಹ ಉಪ ಮಹಾನಿರೀಕ್ಷಕರ ಹುದ್ದೆಯ ಅಧಿಕಾರಿಯನ್ನು ನೇಮಕ ಮಾಡಿದಲ್ಲಿ ಇಲಾಖೆಯ ಆಡಳಿತವನ್ನು ಸಮರ್ಪಕವಾಗಿ ನಡೆಸಲು ಮತ್ತು ರಾಜ್ಯದ ಉತ್ತರ ಭಾಗದಲ್ಲಿ ಇರುವ ಕಾರಾಗೃಹಗಳ ಪರಿವೀಕ್ಷಣೆ, ಆಡಳಿತ ಇತ್ಯಾದಿಗಳಿಗೆ ಅನುಕೂಲವಾಗುತ್ತದೆಂದು ತಿಳಿಸಿರುತ್ತಾರೆ.

1978ರ ಕರ್ನಾಟಕ ಕಾರಾಗೃಹಗಳ ಕೈಪಿಡಿಯ 18, 19, 20 ಹಾಗೂ 21ನೇ ಕಂಡಿಕೆಗಳಲ್ಲಿ ಕಾರಾಗೃಹಗಳ ಉಪ ಮಹಾನಿರೀಕ್ಷಕರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ನಮೂದಿಸಲಾಗಿದೆ. ಅದರಂತೆ ಕಾರಾಗೃಹಗಳ ಉಪ ಮಹಾನಿರೀಕ್ಷಕರು ಪ್ರತಿ ವರ್ಷ ಶೇಕಡ 50ರಷ್ಟು ಜಿಲ್ಲಾ ಕಾರಾಗೃಹಗಳನ್ನು ಹಾಗೂ ಕನಿಷ್ಠ ಮೂರರ ಒಂದು ಭಾಗದಷ್ಟು ತಾಲ್ಲೂಕು ಉಪ ಕಾರಾಗೃಹಗಳನ್ನು ಪರಿಶೀಲಿಸಬೇಕು, ಮೂರು ವರ್ಷಗಳ ಅವಧಿಯಲ್ಲಿ ಎಲ್ಲಾ ಉಪ ಕಾರಾಗೃಹಗಳ ಪರಿಶೀಲನೆಯನ್ನು ಪೂರ್ತಿಗೊಳಿಸಬೇಕಾಗಿರುತ್ತದೆ. ಇದಲ್ಲದೆ, ಬಂದಿಗಳ ಅಸಹಜ ಮರಣ ಅಥವಾ ಅಪಘಾತದಿಂದಾಗುವ ತೀವ್ರ ಗಾಯ ಅಥವಾ ಕಾರಾಗೃಹದಲ್ಲಿ ಯಾವುದೇ ಹಿಂಸಾಕೃತ್ಯದ ಬಗ್ಗೆ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿ ಸರ್ಕಾರಕ್ಕೆ

ವರದಿ ಮಾಡುವುದು ಕಾರಾಗೃಹಗಳ ಉಪ ಮಹಾನಿರೀಕ್ಷಕರ ಕರ್ತವ್ಯವಾಗಿದೆ. ರಾಜ್ಯದ ಉತ್ತರ ಮತ್ತು ಈಶಾನ್ಯ ಭಾಗದ ಕಾರಾಗೃಹಗಳ ಉಪ ಮಹಾನಿರೀಕ್ಷಕರು ನಿರ್ವಹಿಸಬೇಕಾದ ಕಾರ್ಯವ್ಯಾಪ್ತಿಯ ಕರ್ತವ್ಯ ಹಾಗೂ ವಿವರಗಳನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರು ನೀಡಿರುತ್ತಾರೆ. ಅವು ಇಂತಿವೆ.

(1) ಈ ಕೆಳಕಂಡ ಜಿಲ್ಲೆಗಳು ಹಾಗೂ ಅದರ ವ್ಯಾಪ್ತಿಗೊಳಪಡುವ ಎಲ್ಲ ಕಾರಾಗೃಹ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಕರ್ನಾಟಕ ಕಾರಾಗೃಹಗಳ ಕೈಪಿಡಿಯ ಕಂಡಿಕೆ 18ರ ಅನ್ವಯ ನಿರ್ವಹಿಸತಕ್ಕದ್ದು:–

(1) ಬೆಳಗಾವಿ (2) ಬಿಜಾಪುರ (3) ಬಾಗಲಕೋಟೆ (4) ಕಾರವಾರ (5) ಬಳ್ಳಾರಿ (6) ರಾಯಚೂರು (7) ಕೊಪ್ಪಳ (8) ಗುಲ್ಬರ್ಗಾ (9) ಬೀದರ್ (10) ಧಾರವಾಡ (11) ಗದಗ (12) ಹಾವೇರಿ (13) ಚಿತ್ರದುರ್ಗ (14) ದಾವಣಗೆರೆ (15) ಶಿವಮೊಗ್ಗ (16) ಯಾದಗಿರಿ

(2) ಕರ್ನಾಟಕ ಕಾರಾಗೃಹಗಳ ಕೈಪಿಡಿಯ 19ರಲ್ಲಿ ಸೂಚಿಸಿರುವಂತೆ, ಕಾರಾಗೃಹಗಳ ಮಹಾನಿರೀಕ್ಷಕರು ಪರಿಶೀಲಿಸಿದವುಗಳನ್ನು ಬಿಟ್ಟು ಅವರ ವ್ಯಾಪ್ತಿಯೊಳಗೆ ಬರುವ ಜಿಲ್ಲಾ ಕಾರಾಗೃಹಗಳ ಪೈಕಿ ಶೇಕಡಾ 50ರಷ್ಟು ಜಿಲ್ಲಾ ಕಾರಾಗೃಹಗಳನ್ನು ಹಾಗೂ ಕನಿಷ್ಠ 1/3 ರಷ್ಟು ಉಪ ಕಾರಾಗೃಹಗಳನ್ನು ಪ್ರತಿ ವರ್ಷವು ಪರಿಶೀಲಿಸುವುದು. ಗರಿಷ್ಠ 3 ವರ್ಷಗಳ ಅವಧಿಯಲ್ಲಿ ಎಲ್ಲಾ ಕಾರಾಗೃಹಗಳ ಪರಿಶೀಲನೆಯನ್ನು ಪೂರ್ತಿಗೊಳಿಸುವುದು.

(3) ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈಲುಗಳಲ್ಲಿ ಸ್ವಾಭಾವಿಕ ಕಾರಣಗಳಿಲ್ಲದೆ ಬೇರೆ ಕಾರಣಗಳಿಂದಾಗಿ ಮೃತಪಟ್ಟ ಬಂದಿಗಳ ಎಲ್ಲಾ ಪ್ರಕರಣಗಳ ಬಗ್ಗೆ ಖುದ್ದಾಗಿ ತನಿಖೆ ನಡೆಸುವುದು.

(4) ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈಲುಗಳಲ್ಲಿ ಬಂದಿಗಳ ಆಕಸ್ಮಿಕ ಅಥವಾ ಅಸ್ವಾಭಾವಿಕ ಮರಣದ ಅಥವಾ ತೀವ್ರ ಗಾಯ ಅಥವಾ ಯಾವುದೇ ಹಿಂಸಾಕೃತ್ಯದ ಅಥವಾ ಕಾರಾಗೃಹ ಸಿಬ್ಬಂದಿಯ ಕರ್ತವ್ಯ ನಿರ್ಲಕ್ಷ್ಯತೆ ಮತ್ತು ಅಧೀಕ್ಷಕರು ಕಾರಾಗೃಹದ ಮೇಲ್ವಿಚಾರಣಾಧಿಕಾರಿಯಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಲಕ್ಷ್ಯದಿಂದ ವರ್ತಿಸಿದ್ದಾನೆಯೇ? ಎಂಬುದನ್ನು ಕಂಡು ಹಿಡಿಯಲು ಸ್ಥಳದಲ್ಲಿಯೇ ವಿಚಾರಣೆ ನಡೆಸಿ ತೀರ್ಮಾನಗಳನ್ನು ಕಾರಾಗೃಹಗಳ ಮಹಾನಿರೀಕ್ಷಕರ ಮೂಲಕ ಸರ್ಕಾರಕ್ಕೆ ತಿಳಿಸುವುದು.

(5) ಸರ್ಕಾರವು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಪ್ರತ್ಯಾಯೋಜಿಸಿದ ಆಡಳಿತಾತ್ಮಕ ಹಾಗೂ ಹಣಕಾಸಿನ ಅಧಿಕಾರಗಳನ್ನು ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈಲುಗಳಿಗೆ ಸಂಬಂಧಿಸಿದಂತೆ ನಿರ್ವಹಿಸುವುದು.

(6) ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಕಾರಾಗೃಹ ಸಂಸ್ಥೆಗಳ ಆಡಳಿತ ನಿರ್ವಹಣೆಯಲ್ಲಿ ಕಾರಾಗೃಹಗಳ ಮಹಾನಿರೀಕ್ಷಕರಿಗೆ ನೆರವಾಗುವುದು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು ಗೊತ್ತುಪಡಿಸಿದ/ಗೊತ್ತುಪಡಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

(7) ಸರ್ಕಾರ ಹಾಗೂ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು ಆದೇಶಿಸಿದ ಯಾವುದೇ ಕರ್ತವ್ಯ ನಿರ್ವಹಿಸುವುದು ಹಾಗೂ ಸೂಚನೆಗಳನ್ನು ಪಾಲಿಸುವುದು.

ಮುಂದುವರೆದು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು, ಸದರಿ ಹುದ್ದೆಯನ್ನು ಸೃಜಿಸಿದಲ್ಲಿ ಪ್ರತ್ಯೇಕವಾದ ಕಛೇರಿ ಕಟ್ಟಡ, ವಾಹನ ಮತ್ತು ಸಹಾಯಕ ಸಿಬ್ಬಂದಿಗಳ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ಇದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆ ಬೀಳದೆ ಇರುವುದರಿಂದ ಉತ್ತರ ಹಾಗೂ ಈಶಾನ್ಯ ಭಾಗದ ಕಾರಾಗೃಹಗಳ ಉಪ ಮಹಾನಿರೀಕ್ಷಕರ ಒಂದು ಹುದ್ದೆಯನ್ನು ಸೃಜಿಸಬೇಕೆಂದು ಕೋರಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 4 ಪಿಆರ್‌ಇ 2011, ಬೆಂಗಳೂರು, ದಿನಾಂಕ: 25ನೇ ಜೂನ್ 2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಉತ್ತರ ಹಾಗೂ ಈಶಾನ್ಯ ಭಾಗದ ಕಾರಾಗೃಹಗಳಿಗೆ ರೂ. 20025–525–22650–600–26250–675–28275ರ ವೇತನ ಶ್ರೇಣಿಯಲ್ಲಿ ಒಂದು ಕಾರಾಗೃಹಗಳ ಉಪ ಮಹಾನಿರೀಕ್ಷಕರು (ಉತ್ತರ) ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಪ್ರಸ್ತುತ ಜಾರಿಯಲ್ಲಿರುವ ಮಿತವ್ಯಯ ಆದೇಶವನ್ನು ಸಡಿಲಿಸಿ ಸೃಜನೆ ಮಾಡಿ ಆದೇಶಿಸಿದೆ. ಈ ಹುದ್ದೆಯ ಕೇಂದ್ರ ಸ್ಥಾನವು ಬೆಳಗಾವಿ ನಗರವಾಗಿರುತ್ತದೆ.

ಈ ಆದೇಶದಲ್ಲಿ ಸೃಜಿಸಿದ ಒಂದು ಕಾರಾಗೃಹಗಳ ಉಪ ಮಹಾನಿರೀಕ್ಷಕರು (ಉತ್ತರ) ಈ ಹುದ್ದೆಯ ಕಾರ್ಯವ್ಯಾಪ್ತಿ ಮತ್ತು ಕರ್ತವ್ಯಗಳನ್ನು ಅನುಬಂಧದಲ್ಲಿ ನೀಡಿದ್ದು, ಅದರಂತೆ ನಿರ್ವಹಿಸಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 123 ವೆಚ್ಚ–11/2011 ದಿನಾಂಕ: 04–05–2011ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಮತ್ತು ಸಾರಿಗೆ ಇಲಾಖೆ

(ಸೆರೆಮನೆ ಮತ್ತು ಸಿನಿಮಾ)

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 4 ಪಿಆರ್‌ಇ 2011, ಬೆಂಗಳೂರು, ದಿನಾಂಕ: 25ನೇ ಜೂನ್ 2011ಕ್ಕೆ ಅನುಬಂಧ

(1) ಈ ಕೆಳಕಂಡ ಜಿಲ್ಲೆಗಳು ಹಾಗೂ ಅದರ ವ್ಯಾಪ್ತಿಗೊಳಪಡುವ ಎಲ್ಲಾ ಕಾರಾಗೃಹ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಕರ್ನಾಟಕ ಕಾರಾಗೃಹಗಳ ಕೈಪಿಡಿಯ ಕಂಡಿಕೆ 18ರ ಅನ್ವಯ ನಿರ್ವಹಿಸತಕ್ಕದ್ದು:–

(1) ಬೆಳಗಾವಿ (2) ಬಿಜಾಪುರ (3) ಬಾಗಲಕೋಟೆ (4) ಕಾರವಾರ (5) ಬಳ್ಳಾರಿ (6) ರಾಯಚೂರು (7) ಕೊಪ್ಪಳ (8) ಗುಲ್ಬರ್ಗಾ (9) ಬೀದರ್ (10) ಧಾರವಾಡ (11) ಗದಗ (12) ಹಾವೇರಿ (13) ಚಿತ್ರದುರ್ಗ (14) ದಾವಣಗೆರೆ (15) ಶಿವಮೊಗ್ಗ (16) ಯಾದಗಿರಿ

(2) ಕರ್ನಾಟಕ ಕಾರಾಗೃಹಗಳ ಕೈಪಿಡಿಯ 19ರಲ್ಲಿ ಸೂಚಿಸಿರುವಂತೆ, ಕಾರಾಗೃಹಗಳ ಮಹಾನಿರೀಕ್ಷಕರು ಪರಿಶೀಲಿಸಿದವುಗಳನ್ನು ಬಿಟ್ಟು ಅವರ ವ್ಯಾಪ್ತಿಗೊಳಗೆ ಬರುವ ಜಿಲ್ಲಾ ಕಾರಾಗೃಹಗಳ ಪೈಕಿ ಶೇಕಡಾ 50ರಷ್ಟು ಜಿಲ್ಲಾ ಕಾರಾಗೃಹಗಳನ್ನು ಹಾಗೂ ಕನಿಷ್ಠ 1/3ರಷ್ಟು ಉಪ ಕಾರಾಗೃಹಗಳನ್ನು ಪ್ರತಿ ವರ್ಷವು ಪರಿಶೀಲಿಸುವುದು. ಗರಿಷ್ಟ 3 ವರ್ಷಗಳ ಅವಧಿಯಲ್ಲಿ ಎಲ್ಲ ಕಾರಾಗೃಹಗಳ ಪರಿಶೀಲನೆಯನ್ನು ಪೂರ್ತಿಗೊಳಿಸುವುದು.

(3) ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈಲುಗಳಲ್ಲಿ ಸ್ವಾಭಾವಿಕ ಕಾರಣಗಳಲ್ಲದೆ ಬೇರೆ ಕಾರಣಗಳಿಂದಾಗಿ ಮೃತಪಟ್ಟ ಬಂದಿಗಳ ಎಲ್ಲ ಪ್ರಕರಣಗಳ ಬಗ್ಗೆ ಖುದ್ದಾಗಿ ತನಿಖೆ ನಡೆಸುವುದು.

(4) ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈಲುಗಳಲ್ಲಿ ಬಂದಿಗಳ ಆಕಸ್ಮಿಕ ಅಥವಾ ಅಸ್ವಾಭಾವಿಕ ಮರಣದ ಅಥವಾ ತೀವ್ರ ಗಾಯ ಅಥವಾ ಯಾವುದೇ ಹಿಂಸಾಕೃತ್ಯದ ಅಥವಾ ಕಾರಾಗೃಹ ಸಿಬ್ಬಂದಿಯ ಕರ್ತವ್ಯ ನಿರ್ಲಕ್ಷ್ಯತೆ ಮತ್ತು ಅಧೀಕ್ಷಕರು ಕಾರಾಗೃಹದ ಮೇಲ್ವಿಚಾರಣಾಧಿಕಾರಿಯಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಲಕ್ಷ್ಯದಿಂದ ವರ್ತಿಸಿದ್ದಾನೆಯೇ? ಎಂಬುದನ್ನು ಕಂಡು ಹಿಡಿಯಲು ಸ್ಥಳದಲ್ಲಿಯೇ ವಿಚಾರಣೆ ನಡೆಸಿ ತೀರ್ಮಾನಗಳನ್ನು ಕಾರಾಗೃಹಗಳ ಮಹಾನಿರೀಕ್ಷಕರ ಮೂಲಕ ಸರ್ಕಾರಕ್ಕೆ ತಿಳಿಸುವುದು.

(5) ಸರ್ಕಾರವು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಪ್ರತ್ಯಾಯೋಜಿಸಿದ ಆಡಳಿತಾತ್ಮಕ ಹಾಗೂ ಹಣಕಾಸಿನ ಅಧಿಕಾರಗಳನ್ನು ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈಲುಗಳಿಗೆ ಸಂಬಂಧಿಸಿದಂತೆ ನಿರ್ವಹಿಸುವುದು.

(6) ಅವರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಕಾರಾಗೃಹ ಸಂಸ್ಥೆಗಳ ಆಡಳಿತ ನಿರ್ವಹಣೆಯಲ್ಲಿ ಕಾರಾಗೃಹಗಳ ಮಹಾನಿರೀಕ್ಷಕರಿಗೆ ನೆರವಾಗುವುದು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು ಗೊತ್ತುಪಡಿಸಿದ/ಗೊತ್ತುಪಡಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

(7) ಸರ್ಕಾರ ಹಾಗೂ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು ಆದೇಶಿಸಿದ ಯಾವುದೇ ಕರ್ತವ್ಯ ನಿರ್ವಹಿಸುವುದು ಹಾಗೂ ಸೂಚನೆಗಳನ್ನು ಪಾಲಿಸುವುದು.

ಟಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. ನಂ. 1635

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉತ್ತರ ಕನ್ನಡ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಯೋಇ 309 ಪಿಟಿಪಿ 94, ದಿನಾಂಕ 07–08–1995.
2. ಮುಖ್ಯಮಂತ್ರಿಯವರ ಕಛೇರಿ ಟಿಪ್ಪಣಿ ಪತ್ರ ಸಂ: ಮುಮಂಆಕಾ/1392/2011–12 ದಿನಾಂಕ: 25.05.2011.
3. ಸರ್ಕಾರಿ ಆದೇಶ ಸಂಖ್ಯೆ:ಯೋಇ 65 ಯೋವಿವಿ 2008 ದಿನಾಂಕ: 16–07–2009.

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ: 07–08–1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ ಶ್ರೀ ಗುರು ಮೋಹನ್ ಭಟ್, ಸಾ: ಹೊನ್ನಳ್ಳಿ, ಅಂಚೆ ಹಾಸಣಗಿ, ತಾ: ಯಲ್ಲಾಪುರ, ಸಾಮಾನ್ಯ ವರ್ಗ ಇವರನ್ನು ಸದಸ್ಯರಾಗಿ ನೇಮಿಸಲಾಗಿತ್ತು. ಮುಖ್ಯಮಂತ್ರಿಯವರು ಮೇಲೆ ಓದಲಾದ (2)ರ ಪತ್ರದಲ್ಲಿ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಇವರ ಬದಲಾಗಿ ಶ್ರೀ ಉಮಾಮಹೇಶ್ವರ ಈಶ್ವರ ಭಾಗ್ವತ, ಸಾ–ಕಳಚೆ, ತಾ–ಯಲ್ಲಾಪುರ ಇವರನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಯೋಇ 84 ಯೋವಿವಿ 2009 (ಭಾ–2) ಬೆಂಗಳೂರು, ದಿನಾಂಕ: 22ನೇ ಜೂನ್ 2011.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಸದಸ್ಯರನ್ನು ಬದಲಾವಣೆ ಮಾಡಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕ್ರ. ಸಂ.	ತಾಲ್ಲೂಕು	ದಿನಾಂಕ: 16–07–2009ರ ಆದೇಶದಲ್ಲಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ್ದ ಸದಸ್ಯರ ಹೆಸರು	ಬದಲಾವಣೆ ಮಾಡಿ ನಾಮನಿರ್ದೇಶನ ಮಾಡಿರುವ ಸದಸ್ಯರ ಹೆಸರು
1.	ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕು	ಶ್ರೀ ಗುರು ಮೋಹನ್ ಭಟ್, ಸಾ: ಹೊನ್ನಳ್ಳಿ ಅಂಚೆ ಹಾಸಣಗಿ ತಾ: ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ	ಶ್ರೀ ಉಮಾಮಹೇಶ್ವರ ಈಶ್ವರ ಭಾಗ್ವತ, ಸಾ–ಕಳಚೆ, ತಾ–ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್ 1636

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಪಿಲಿಕುಳದ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಕಾರ್ಯಕ್ಷೇತ್ರವನ್ನು ನಿಗದಿಪಡಿಸುವ ಕುರಿತು.

ಓದಲಾಗಿದೆ:

1) ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27–04–2011ರಂದು ಜರುಗಿದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿ.
2) ಸದಸ್ಯ ಕಾರ್ಯದರ್ಶಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರರವರ ದಿನಾಂಕ 27–04–2011ರ ಪತ್ರ.
3) ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆರವರ ಟಿಪ್ಪಣಿ ದಿನಾಂಕ: 09–06–2011.

ಪ್ರಸ್ತಾವನೆ:

ಮೇಲಿನ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27–04–2011ರಂದು ಜರುಗಿದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಡವಳಿ ಕ್ರಮ ಸಂಖ್ಯೆ 13ರಲ್ಲಿ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಾರ್ಯಕ್ಷೇತ್ರವನ್ನು ನಿಗದಿಪಡಿಸಲು ನಿರ್ಣಯಿಸಲಾಗಿದೆ.

ಮೇಲಿನ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸದಸ್ಯ–ಕಾರ್ಯದರ್ಶಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರರವರು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಾರ್ಯಕ್ಷೇತ್ರವನ್ನು ನಿಗದಿಪಡಿಸಬೇಕೆಂದು ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲಿನ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ನಿರ್ದೇಶಕರು (ತಾಂತ್ರಿಕ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆರವರು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ದಕ್ಷಿಣ ಕರ್ನಾಟಕ ವ್ಯಾಪ್ತಿಗೆ ಬರುವ ಜಿಲ್ಲೆಗಳನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಶಿವಮೊಗ್ಗ, ತುಮಕೂರು, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮಂಡ್ಯ, ಮೈಸೂರು ಮತ್ತು ಉಡುಪಿ ಜಿಲ್ಲೆಗಳನ್ನು ಕಾರ್ಯಕ್ಷೇತ್ರವಾಗಿ ನಿಗದಿಪಡಿಸಬಹುದೆಂದು ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಉತ್ತರ ಕರ್ನಾಟಕ ವ್ಯಾಪ್ತಿಗೆ ಬರುವ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬಿಜಾಪುರ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ, ಬಳ್ಳಾರಿ, ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು, ಯಾದಗಿರಿ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳನ್ನು ನಿಗದಿಪಡಿಸಬಹುದೆಂದು ಹಾಗೂ ಮೈಸೂರಿನಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ಕಾರ್ಯವ್ಯಾಪ್ತಿಯನ್ನು ಬದಲಾಯಿಸಬಹುದಾಗಿದೆ ಎಂದು ಶಿಫಾರಸ್ಸು /ಅಭಿಪ್ರಾಯ ನೀಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 75 ವಿತ್ರಮ 2011, ಬೆಂಗಳೂರು, ದಿನಾಂಕ: 22–06–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ, ದಕ್ಷಿಣ ಕರ್ನಾಟಕ ವ್ಯಾಪ್ತಿಗೆ ಬರುವ ಜಿಲ್ಲೆಗಳು ಹಾಗೂ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ, ಉತ್ತರ ಕರ್ನಾಟಕ ವ್ಯಾಪ್ತಿಗೆ ಬರುವ ಈ ಕೆಳಕಂಡ ಜಿಲ್ಲೆಗಳನ್ನು ಕಾರ್ಯವ್ಯಾಪ್ತಿಯನ್ನಾಗಿ ನಿಗದಿಪಡಿಸಿ ಅನುಮೋದನೆ ನೀಡಲಾಗಿದೆ.

- ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ, ದಕ್ಷಿಣ ಕರ್ನಾಟಕ ವ್ಯಾಪ್ತಿಗೆ ಬರುವ ಈ ಕೆಳಕಂಡ ಜಿಲ್ಲೆಗಳನ್ನು ನಿಗದಿಪಡಿಸಲಾಗಿದೆ.

ಬೆಂಗಳೂರು ನಗರ ಚಿಕ್ಕಮಗಳೂರು
ಬೆಂಗಳೂರು ಗ್ರಾಮಾಂತರ ದಕ್ಷಿಣ ಕನ್ನಡ
ಚಿಕ್ಕಬಳ್ಳಾಪುರ ಹಾಸನ
ಕೋಲಾರ ಕೊಡಗು
ರಾಮನಗರ ಮಂಡ್ಯ
ಶಿವಮೊಗ್ಗ ಮೈಸೂರು
ತುಮಕೂರು ಉಡುಪಿ
ಚಾಮರಾಜನಗರ

- ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ, ಉತ್ತರ ಕರ್ನಾಟಕ ವ್ಯಾಪ್ತಿಗೆ ಬರುವ ಈ ಕೆಳಕಂಡ ಜಿಲ್ಲೆಗಳನ್ನು ನಿಗದಿಪಡಿಸಲಾಗಿದೆ.

ಬಾಗಲಕೋಟೆ ಬೀದರ್
ಬೆಳಗಾಂ ಗುಲ್ಬರ್ಗಾ
ಬಿಜಾಪುರ ಕೊಪ್ಪಳ
ಧಾರವಾಡ ರಾಯಚೂರು

ಗದಗ ಯಾದಗಿರಿ
ಹಾವೇರಿ ಚಿತ್ರದುರ್ಗ
ಉತ್ತರ ಕನ್ನಡ ದಾವಣಗೆರೆ
ಬಳ್ಳಾರಿ
ಮೈಸೂರು ಪ್ರಾದೇಶಿಕ ವಿಜ್ಞಾನ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ಮತ್ತೆ ಕಾರ್ಯವ್ಯಾಪ್ತಿಯನ್ನು ಬದಲಾಯಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪ್ರಕಾಶ್‌ರಾವ್ ಕೇಸರಕರ್
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್ 1637

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾII ಗಿರಿಜಾ ಬುರ್ಲಿ, ವೈದ್ಯಾಧಿಕಾರಿ, ಸ.ಆ.ಕೇಂದ್ರ, ಕಲಘಟಗಿ, ಧಾರವಾಡ ಜಿಲ್ಲೆ ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಕುರಿತು.

ಓದಲಾಗಿದೆ: ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಓ (3)/133/2010–11 ದಿನಾಂಕ: 29/4/2011

ಪ್ರಸ್ತಾವನೆ:

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಡಾ: ಗಿರಿಜಾ ಬುರ್ಲಿ, ಇವರು ವಿಶೇಷ ನೇಮಕಾತಿ ಮೂಲಕ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡು, ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ/122/ಹೆಚ್‌ಎಸ್‌ಹೆಚ್/2007 ದಿನಾಂಕ: 08/02/2008 ರಲ್ಲಿ ಸಮುದಾಯ ಆರೋಗ್ಯ ಕೇಂದ್ರ, ಕಲಘಟಗಿ, ಧಾರವಾಡ ಜಿಲ್ಲೆಗೆ ನೇಮಕಾತಿ ಮಾಡಲಾಗಿ ದಿನಾಂಕ: 05/03/2008ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ನಂತರ ದಿನಾಂಕ: 01/08/2008 ರಿಂದ ಅನಧಿಕೃತ ಗೈರು ಹಾಜರಾಗಿರುತ್ತಾರೆ. ತದನಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಧಾರವಾಡ ಇವರು ದಿನಾಂಕ: 01/09/2008 ಮತ್ತು 03/12/2008 ರಲ್ಲಿ ಕೇಳಲಾದ ಸಮಜಾಯಿಷಿಗೆ ವೈದ್ಯರು ಸಮಂಜಸವಾದ ಉತ್ತರ ನೀಡದೇ ತುಂಬಾ ವಿಳಂಬವಾಗಿ ದಿನಾಂಕ: 16–08–2010ರ ಪತ್ರದ ಮೂಲಕ ಅನಾರೋಗ್ಯದ ಕಾರಣಗಳಿಂದ ರಾಜೀನಾಮೆ ಅಂಗೀಕರಿಸುವಂತೆ ಕೋರಿರುತ್ತಾರೆ. ವೈದ್ಯರು ಖಾಯಂಪೂರ್ವ ಸೇವಾವಧಿಯಲ್ಲಿರುವಾಗಲೇ ದಿನಾಂಕ: 01/08/2008ರಿಂದ ದೀರ್ಘಕಾಲ ಸೇವೆಗೆ ಅನಧಿಕೃತ ಗೈರುಹಾಜರಾಗಿರುವುದರಿಂದ ಸದರಿ ವೈದ್ಯರನ್ನು ಸೇವೆಯಿಂದ ವಿಮೋಚನೆಗೊಳಿಸುವಂತೆ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 158 ಹೆಚ್‌ಎಸ್‌ಹೆಚ್ 2011 ಬೆಂಗಳೂರು, ದಿನಾಂಕ: 24–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾII ಗಿರಿಜಾ ಬುರ್ಲಿ, ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ಕಲಘಟಗಿ, ಧಾರವಾಡ ಜಿಲ್ಲೆ ಇವರು ಖಾಯಂಪೂರ್ವ ಸೇವಾವಧಿಯಲ್ಲಿ ದಿನಾಂಕ: 01/08/2008 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಇಲಾಖೆಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತರಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6ರಡಿಯಲ್ಲಿ ಸದರಿಯವರನ್ನು ದಿನಾಂಕ: 01/08/2008ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಸೇವೆಗಳು–1).

ಪಿ.ಆರ್ 1638

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ರಾಘವೇಂದ್ರ., ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಇವರು ಅನಧಿಕೃತ ಗೈರುಹಾಜರಾಗಿದ್ದು, ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಓ (ಎಂ) 39/2010–11 ದಿನಾಂಕ: 29/04/2011

ಪ್ರಸ್ತಾವನೆ:

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಡಾ: ರಾಘವೇಂದ್ರ., ಇವರು ಸರ್ಕಾರದ ಆದೇಶ ಸಂಖ್ಯೆ: ಆಕುಕ/739/ಹೆಚ್‌ಎಸ್‌ಹೆಚ್ 2008 ದಿನಾಂಕ: 27/01/2009 ರಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ನೇಮಕಗೊಂಡು ಪ್ರಾ. ಆ. ಕೇಂದ್ರ ಕವಲೂರು, ಕೊಪ್ಪಳ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 17/06/2010 ರಿಂದ ಸೇವೆಗೆ ಅನಧಿಕೃತ ಗೈರುಹಾಜರಾಗಿದ್ದು, ಸ್ನಾತಕೋತ್ತರ ವ್ಯಾಸಂಗಕ್ಕೆ ಹಾಜರಾಗಿರುವುದು ತಿಳಿದುಬಂದಿರುತ್ತದೆ. ಸದರಿ ವೈದ್ಯರು ಖಾಯಂಪೂರ್ವ ಸೇವಾವಧಿಯಲ್ಲಿ

ಅನಧಿಕೃತ ಗೈರುಹಾಜರಾಗಿರುವುದರಿಂದ ಪ್ರೊಬೇಷನರಿ ನಿಯಮಗಳ ಪ್ರಕಾರ ಸೇವೆಯಿಂದ ವಿಮೋಚನೆಗೊಳಿಸುವಂತೆ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 154 ಹೆಚ್‌ಎಸ್‌ಹೆಚ್ 2011 ಬೆಂಗಳೂರು, ದಿನಾಂಕ: 24-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾII ರಾಘವೇಂದ್ರ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಕವಲೂರು, ಕೊಪ್ಪಳ ಜಿಲ್ಲೆ ಇವರು ಖಾಯಂಪೂರ್ವ ಸೇವಾವಧಿಯಲ್ಲಿ ದಿನಾಂಕ: 17/06/2010 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತರಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6ರಡಿಯಲ್ಲಿ ಸದರಿಯವರನ್ನು ದಿನಾಂಕ:17/06/2010 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು-1).

ಪಿ.ಆರ್ 1639

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಜುಲೈ 1 ರಂದು ವೈದ್ಯರ ದಿನಾಚರಣೆಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಆಶಿತ-ಮಾಆ/04/2011-12 ದಿನಾಂಕ: 01-06-2011.

ಪ್ರಸ್ತಾವನೆ:

ವೈದ್ಯಕೀಯ ಕ್ಷೇತ್ರದ ಅಪ್ರತಿಮ ವೈದ್ಯರಾಗಿದ್ದಂತಹ ದಿವಂಗತ ಡಾ: ಬಿ.ಸಿ. ರಾಯ್ ರವರ ಜನ್ಮ ದಿನವನ್ನು ಪ್ರತೀ ವರ್ಷ ಜುಲೈ 1ನೇ ತಾರೀಖಿನಂದು ದೇಶದಾದ್ಯಂತ ವೈದ್ಯರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಈ ದಿನಾಚರಣೆಯಂದು ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವವರನ್ನು ಗುರುತಿಸಿ ಸನ್ಮಾನಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಸಹ ಸದರಿ ದಿನಾಂಕದಂದು ಅರ್ಹ ವೈದ್ಯರಿಗೆ ಡಾ: ಬಿ.ಸಿ.ರಾಯ್ ಪುರಸ್ಕಾರವನ್ನು ನೀಡಿ ವೈದ್ಯರ ದಿನಾಚರಣೆಯನ್ನು ಆಚರಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಪ್ರತೀ ವರ್ಷ ಜುಲೈ 1 ರಂದು ವೈದ್ಯರ ದಿನಾಚರಣೆಯನ್ನು ಆಚರಿಸುತ್ತಾ ಬಂದಿದೆ. ಕಳೆದ ವರ್ಷ ದಿನಾಂಕ: 1-7-2010ರಂದು ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸದರಿ ದಿನಾಚರಣೆಯನ್ನು ಒಂದು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸೋಣ ಎಂದು ಸೂಚಿಸಿದ್ದರ ಮೇರೆಗೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ 2011ನೇ ಸಾಲಿನಿಂದ ಈ ದಿನಾಚರಣೆಯನ್ನು ಪ್ರತಿ ವರ್ಷ ಜುಲೈ 1ನೇ ತಾರೀಖಿನಂದು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸಲು ಹಾಗೂ ಸದರಿ ಸಮಾರಂಭದ ವೆಚ್ಚಕ್ಕಾಗಿ ಅನುದಾನವನ್ನು 2012-13ನೇ ಆರ್ಥಿಕ ವರ್ಷದಿಂದ ಯಾವುದಾದರೂ ಸೂಕ್ತ ಲೆಕ್ಕ ಶೀರ್ಷಿಕೆಯಡಿ ಒದಗಿಸಿಕೊಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಆದೇಶ,

ಸರ್ಕಾರದ ಆದೇಶ ಸಂಖ್ಯೆ: ಆಕುಕ 207 ಸಿಜಿಎಂ 2011 ಬೆಂಗಳೂರು, ದಿನಾಂಕ: 25-06-2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಜುಲೈ 1 ರಂದು ಆಚರಿಸಲಾಗುತ್ತಿರುವ ದಿವಂಗತ ಡಾ: ಬಿ.ಸಿ.ರಾಯ್ ಇವರ ಜನ್ಮ ದಿನಾಚರಣೆಯನ್ನು ಇನ್ನು ಮುಂದೆ ಪ್ರತೀ ವರ್ಷ ಜುಲೈ 1ನೇ ತಾರೀಖಿನಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸಬೇಕೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಪಿ. ಚಂದ್ರಹಾಸ
ಸರ್ಕಾರದ ಅಧೀನ ಕಾರ್ಯದರ್ಶಿ, (ಆರೋಗ್ಯ 1&2)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್ 1640

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಬಿಜಾಪುರ ವಿಮಾನ ನಿಲ್ದಾಣದ ನಿವೇಶನದಲ್ಲಿ ವಿದ್ಯುತ್ ಕಂಬಗಳ ಸ್ಥಳಾಂತರ ಮತ್ತು ಹೊಸದಾಗಿ ವಿದ್ಯುತ್ ಪೂರೈಕೆಗಾಗಿ ವಿದ್ಯುತ್ ಕಂಬಗಳ ಜೋಡಣೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿಗಳು, ಬಿಜಾಪುರ, ಇವರ ಪತ್ರ ಸಂಖ್ಯೆ: ಕಂಇ/ಎಲ್‌ಎನ್‌ಡಿ/ಸಿಆರ್/237/2009-10 ದಿನಾಂಕ 10-06-2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬಿಜಾಪುರ, ಇವರು ಬಿಜಾಪುರ ವಿಮಾನ ನಿಲ್ದಾಣದ ಜಮೀನು ಮಧ್ಯದಲ್ಲಿ ಬರುವ ವಿದ್ಯುತ್ ಕಂಬಗಳ ಸ್ಥಳಾಂತರ ಹಾಗೂ ಬಿಜಾಪುರ ವಿಮಾನ ನಿಲ್ದಾಣ ಯೋಜನೆಗಾಗಿ 2 ಮೆಗಾ ವಾಟ್ ವಿದ್ಯುತ್ ಸ್ಥಾವರ ಒದಗಿಸಲು ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂ, ಬಿಜಾಪುರ, ಇವರು ನೀಡಿರುವ Self Execution WorkgÀr ಕೆಲಸ ಕೈಗೊಳ್ಳುವ ಕುರಿತು ತಯಾರಿಸಿರುವ ಅಂದಾಜು ವೆಚ್ಚ ಪಟ್ಟಿಯಂತೆ ರೂ.55,01,301.00ನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

2. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 56 ರಾಅವಿ 2011, ಬೆಂಗಳೂರು, ದಿನಾಂಕ: 25–06–2011.

ಬಿಜಾಪುರ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಧ್ಯದಲ್ಲಿ ಬರುವ ವಿದ್ಯುತ್ ಕಂಬಗಳ ಸ್ಥಳಾಂತರ ಹಾಗೂ ಬಿಜಾಪುರ ವಿಮಾನ ನಿಲ್ದಾಣ ಯೋಜನೆಗಾಗಿ 2 ಮೆಗಾ ವಾಟ್ ವಿದ್ಯುತ್ ಸ್ಥಾವರ ಒದಗಿಸಲು ತಗಲುವ ವೆಚ್ಚ ರೂ. 55,01,301.00 (ಐವತ್ತೈದು ಲಕ್ಷ ಒಂದು ಸಾವಿರ ಮೂರುನೂರು ಒಂದು ರೂಪಾಯಿ ಮಾತ್ರ) ಗಳನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

2. ಸದರಿ ಮೊತ್ತವನ್ನು 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 5465–01–190–1–05– ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ–133– ವಿಶೇಷ ಅಭಿವೃದ್ಧಿ ಯೋಜನೆ ಇದರಡಿ ಭರಿಸುವುದು.

3. "ಈ ಹಣವನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಬಿಜಾಪುರ, ಇವರು ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಇವರ ಮೇಲುರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಿ ಉಪಯೋಗಿತಾ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು ಸಲ್ಲಿಸತಕ್ಕದ್ದು."

4. ಈ ಆದೇಶವನ್ನು ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಇವರಿಗೆ ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ. 1 ಟಿಎಫ್‌ಪಿ 2008 ದಿನಾಂಕ 16.05.2008ರನ್ವಯ ಪ್ರದತ್ತವಾಗಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 1641

ಸಿ.ಎ. ಬಾಬು ರವೀಂದ್ರನಾಥ್ ಪಟೇಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಸಿ.ಎನ್. ನರಸಿಂಹಮೂರ್ತಿ, ಹಿಂದಿನ ಉಪ ನಿರ್ದೇಶಕರು, ಚಾಮರಾಜನಗರ ಜಿಲ್ಲೆ, ನಿವೃತ್ತ ಪ್ರಾಂಶುಪಾಲರು, ಡಯಟ್, ಮಂಡ್ಯ ಇವರ ಮೇಲೆ ಶಿಸ್ತು ಕ್ರಮ ಅಂತಿಮ ಆದೇಶ ಕುರಿತು.

ಓದಲಾಗಿದೆ:
1) ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರ ಪತ್ರ ಸಂಖ್ಯೆ: ಸಶಿಅ : ಸಿ2(ಸಿ1) ದೂರು 25/2006–2007 ದಿನಾಂಕ: 22/02/2010.
2) ಸರ್ಕಾರದ ನೋಟೀಸು ಸಂಖ್ಯೆ: ಇಡಿ 23 ಡಿಜಿಪಿ 2009 ದಿನಾಂಕ:22/03/2011.
3) ಶ್ರೀ ಸಿ.ಎನ್. ನರಸಿಂಹಮೂರ್ತಿ ಇವರ ಲಿಖಿತ ಹೇಳಿಕೆ ದಿನಾಂಕ: 02/04/2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1) ರಲ್ಲಿ ಶ್ರೀ ಸಿ.ಎನ್. ನರಸಿಂಹಮೂರ್ತಿ, ಹಿಂದಿನ ಪ್ರಾಂಶುಪಾಲರು, ಡಯಟ್, ಮಂಡ್ಯ ಇವರು 2005ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ರಜೆ ಸಲ್ಲಿಸದೇ ಕಛೇರಿಗೆ ಗೈರುಹಾಜರಾಗಿದ್ದರೆನ್ನಲಾದ ಆರೋಪಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮ ಸಂಖ್ಯೆ: (2)ರಲ್ಲಿ ಆರೋಪಿತ ಅಧಿಕಾರಿಯ ವಿರುದ್ಧ 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಗಳ ನಿಯಮ 12ರಡಿ ನೋಟೀಸು ಜಾರಿಗೊಳಿಸಲಾಗಿತ್ತು. ಕ್ರಮ ಸಂಖ್ಯೆ: (3)ರಲ್ಲಿ ಆರೋಪಿತ ಅಧಿಕಾರಿ ತಮ್ಮ ಸಮಜಾಯಿಷಿಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆಯುತ್ತಾ ತಾವು ನಿಯಮಾನುಸಾರ ವೈದ್ಯಕೀಯ ರಜೆ ಸಲ್ಲಿಸಿದ್ದು ರಜೆ ಮಂಜೂರಾಗಿರುವುದರಿಂದ ತಮ್ಮನ್ನು ಆರೋಪಮುಕ್ತಗೊಳಿಸುವಂತೆ ಮನವಿ ಮಾಡಿದ್ದರೂ ಈ ಪ್ರಕರಣದಲ್ಲಿ ಅಧಿಕಾರಿಯು ಸಲ್ಲಿಸಿದ್ದ ರಕ್ಷಣಾ ಹೇಳಿಕೆಯನ್ನು ಸರ್ಕಾರವು ಪರಿಗಣಿಸಿದ್ದು ಸದರಿಯವರು ಈಗಾಗಲೇ ವಯೋನಿವೃತ್ತಿ ಹೊಂದಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಇತ್ಯರ್ಥಪಡಿಸಲು ನಿರ್ಧರಿಸಿದ್ದು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಇಡಿ 23 ಡಿಜಿಪಿ 2009, ಬೆಂಗಳೂರು, ದಿನಾಂಕ: 18–06–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಸಿ.ಎನ್. ನರಸಿಂಹಮೂರ್ತಿ, ನಿವೃತ್ತ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ ಇವರು ಹಿಂದೆ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ರಜೆ ಸಲ್ಲಿಸದೇ ಕಛೇರಿಗೆ ಗೈರುಹಾಜರಾಗಿದ್ದರೆನ್ನಲಾದ ಆರೋಪಗಳಿಗೆ ಸಂಬಂಧಿಸಿದಂತೆ ಸದರಿಯವರು ಸಲ್ಲಿಸಿರುವ ರಕ್ಷಣಾ ಹೇಳಿಕೆಯನ್ನು ಒಪ್ಪಿ ಸದರಿಯವರಿಗೆ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಪಿ.ಆರ್ 1642

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಆಡಳಿತ)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಮೀನು/ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಯ ಹುದ್ದೆಗಳನ್ನು ಹೊಸ ಜಿಲ್ಲೆಗೆ ಸ್ಥಳಾಂತರಿಸುವ ಕುರಿತು.

ಓದಲಾಗಿದೆ : ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ : ಸಿಬ್ಬಂದಿ (2)/1/ 2000-01, ದಿನಾಂಕ 28-02-2011.

ಪ್ರಸ್ತಾವನೆ :

ರಾಜ್ಯದಲ್ಲಿ ಒಟ್ಟು 5.60 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶದಲ್ಲಿ 2.67 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ ಜಲಾಶಯಗಳಿದ್ದು, 2.93 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣವುಳ್ಳ ಕೆರೆ, ಕೊಳಗಳಿದ್ದು ಹಾಗೂ 5813. ಕಿ.ಮೀ. ಉದ್ದದ ನದಿಗಳು, ಒಳನಾಡು ಸಂಪನ್ಮೂಲಗಳಾಗಿದ್ದು, ಮೀನು ಉತ್ಪಾದನೆಗೆ ವಿಪುಲ ಅವಕಾಶವಿರುತ್ತದೆಂದು ತಿಳಿಸುತ್ತಾ, ಈ ಪೈಕಿ ಸಣ್ಣಕೆರೆ ಮತ್ತು ಕೊಳಗಳ ಮೀನುಗಾರಿಕೆ ಸಾಮರ್ಥ್ಯವನ್ನು ಉಪಯೋಗಿಸಲು ಕೇಂದ್ರದ ನೆರವಿನೊಂದಿಗೆ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ರಾಜ್ಯದ 13 ಜಿಲ್ಲೆಗಳಲ್ಲಿ ಹಂತ ಹಂತವಾಗಿ ಸ್ಥಾಪಿಸಲಾಗಿರುತ್ತದೆಂದು ತಿಳಿಸಿರುತ್ತಾರೆ. ಅದೇ ರೀತಿ ರಾಜ್ಯದಲ್ಲಿ ಸುಮಾರು 8000 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶವಿದ್ದು, ಅದರಲ್ಲಿ 4200 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶ ಸಿಗಡಿ ಕೃಷಿಗೆ ಯೋಗ್ಯವಾಗಿರುವ ಕಾರಣ ಉಪ್ಪುನೀರು ಸಿಗಡಿ ಕೃಷಿಯನ್ನು ಪ್ರೋತ್ಸಾಹಿಸಲು ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ಹೊಂದಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 02 ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಸ್ಥಾಪಿಸಲಾಗಿದೆ ಎಂದು ನಿರ್ದೇಶಕರು ತಿಳಿಸಿರುತ್ತಾರೆ.

ಈ ರೀತಿ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಸ್ಥಾಪನೆಯಾದ ನಂತರ ಸಂಸ್ಥೆಯ ವ್ಯಾಪ್ತಿಗೆ ಬರುವ ಜಿಲ್ಲೆ/ತಾಲ್ಲೂಕಿನಲ್ಲಿರುವ 10 ಹೆಕ್ಟೇರ್‌ಗಿಂತ ಕಡಿಮೆ ಜಲ ವಿಸ್ತೀರ್ಣವಿರುವ ಸಣ್ಣ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಸಂಬಂಧಿಸಿದ ಸಂಸ್ಥೆಗಳಿಗೆ ವರ್ಗಾಯಿಸಲಾಗಿತ್ತೆಂದು, ಈ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ಅಭಿವೃದ್ಧಿ ವೆಚ್ಚಗಳ ಮೇಲೆ ಮಾತ್ರ ಶೇ.75 ರಷ್ಟು ವೆಚ್ಚವನ್ನು ಭರಿಸುತ್ತಿದ್ದು, ಉಳಿದ ಶೇ. 25 ರಷ್ಟು ವೆಚ್ಚವನ್ನು ಹಾಗೂ ಸಿಬ್ಬಂದಿ ವೇತನ ಮತ್ತು ಇತರ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವೆಚ್ಚಗಳ ಶೇ. 100 ರಷ್ಟನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ ಎಂದು ತಿಳಿಸಿರುತ್ತಾರೆ. ಕೇಂದ್ರ ಸರ್ಕಾರವು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನಾ ಅನುಷ್ಠಾನದ ಮಾರ್ಗಸೂಚಿಗಳನ್ನು ಪರಿಷ್ಕರಿಸುತ್ತಾ ಸದರಿ ಯೋಜನೆಯಡಿ ತರಬೇತಿ ನೀಡುವ ಘಟಕವನ್ನು ಕೈಬಿಟ್ಟಿರುತ್ತಾರೆ. ಇದಲ್ಲದೆ, ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಪೈಕಿ 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದವರೆಗಿನ ಜಲಸಂಪನ್ಮೂಲಗಳನ್ನು ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯತಿಗಳಿಗೆ ವರ್ಗಾಯಿಸಲಾಗಿದ್ದು, ಈ ಎರಡು ಕಾರಣಗಳಿಂದ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖ್ಯ ಉದ್ದೇಶವಾದ ಗ್ರಾಮೀಣ ಯುವಕರಿಗೆ ತರಬೇತಿ ನೀಡುವುದು ಹಾಗೂ ಸಣ್ಣ ಕೆರೆಗಳನ್ನು ಗುತ್ತಿಗೆ ನೀಡುವ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲು ಸಾಧ್ಯವಾಗುತ್ತಿಲ್ಲವೆಂದು ವರದಿ ಮಾಡಿರುತ್ತಾರೆ.

ಮುಂದುವರೆದು, ಹೊಸದಾಗಿ ಸೃಜಿಸಲಾದ 7 ಜಿಲ್ಲೆಗಳಾದ ಹಾವೇರಿ, ಗದಗ, ಕೊಪ್ಪಳ, ದಾವಣಗೆರೆ, ಬಾಗಲಕೋಟೆ, ಚಾಮರಾಜನಗರ ಮತ್ತು ಉಡುಪಿಗೆ ಇದುವರೆವಿಗೂ ಇಲಾಖೆಯ ಜಿಲ್ಲಾ ಕಛೇರಿಯ ಹುದ್ದೆಗಳನ್ನು ಸೃಜಿಸಿರುವುದಿಲ್ಲವಾದ್ದರಿಂದ ಹಲವಾರು ತಾಲ್ಲೂಕುಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಸಂಪನ್ಮೂಲವಿದ್ದರೂ ಅಂತಹ ತಾಲ್ಲೂಕುಗಳಲ್ಲಿ ಮೀನುಗಾರಿಕೆ ಇಲಾಖೆಯ ಕಚೇರಿಗಳಿಲ್ಲದೆ ಮೀನುಗಾರಿಕೆ ಅಭಿವೃದ್ಧಿಗೆ ಹಿನ್ನೆಡೆಯಾಗಿರುವುದರಿಂದ, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಹುದ್ದೆಗಳನ್ನು ಮರುವಿನ್ಯಾಸಗೊಳಿಸಿದಲ್ಲಿ ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಕಚೇರಿ ಸ್ಥಾಪನೆ ಮಾಡಲು ಇಲಾಖಾ ಹುದ್ದೆಗಳು ದೊರಕಿದಂತಾಗುತ್ತದೆಂದು ಹಾಗೂ ಈ ಹೊಸ ಜಿಲ್ಲೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಮತ್ತು ಮೀನು ಉತ್ಪಾದನೆ ಹೆಚ್ಚಿಸಲು ಅನುಕೂಲವಾಗುತ್ತೆಂದು ತಿಳಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ / 210 / ಮೀಇಸೇ / 2010, ಬೆಂಗಳೂರು, ದಿನಾಂಕ 30ನೇ ಜೂನ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹೊಸದಾಗಿ ರಚಿಸಲಾಗಿರುವ 07 ಜಿಲ್ಲೆಗಳಾದ ದಾವಣಗೆರೆ, ಹಾವೇರಿ, ಚಾಮರಾಜನಗರ, ಬಾಗಲಕೋಟೆ, ಗದಗ, ಕೊಪ್ಪಳ, ಮತ್ತು ಉಡುಪಿ ಇವುಗಳಲ್ಲಿ ಮೀನುಗಾರಿಕೆ ಸಂಪನ್ಮೂಲ ಅಭಿವೃದ್ಧಿಗೆ ವಿಪುಲ ಅವಕಾಶ ಇರುವ ಕಾರಣ ಪ್ರಸ್ತುತ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಮೀನು/ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳಲ್ಲಿರುವ ಹುದ್ದೆಗಳಲ್ಲಿ 50 ಹುದ್ದೆಗಳನ್ನು ಸದರಿ ಸಂಸ್ಥೆಗಳಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಧಕ್ಕೆಯಾಗದಂತೆ ಎಂದಿನಂತೆ ಸಮರ್ಪಕವಾಗಿ ಕಾರ್ಯನಿರ್ವಹಣೆಯನ್ನು ಮುಂದುವರೆಸುವ ಉದ್ದೇಶದೊಂದಿಗೆ ಹೊಸದಾಗಿ ಸೃಜಿಸಿರುವ ಜಿಲ್ಲೆಗಳಿಗೆ ಜಿಲ್ಲಾ ಮಟ್ಟದ ಕಛೇರಿಯನ್ನು ಪ್ರಾರಂಭಿಸಿ ಅನುಬಂಧದಲ್ಲಿ ನಮೂದಿಸಿರುವಂತೆ ಹುದ್ದೆಗಳನ್ನು ಸ್ಥಳಾಂತರಿಸಿ ಆದೇಶಿಸಿದೆ.

ಈ ಸಂಬಂಧ 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2405-00-196-6-02 (ಯೋಜನೆ) ಅಡಿಯಲ್ಲಿ ಒದಗಿಸಿದ್ದ ರೂ. 336.25 ಲಕ್ಷಗಳಲ್ಲಿ ಅಭಿವೃದ್ಧಿ ಯೋಜನೆಗಳಿಗೆ ರೂ. 100.00 ಲಕ್ಷಗಳನ್ನು ಕಾಯ್ದಿರಿಸಿ ಉಳಿಕೆ ಹಣ ರೂ. 236.25 ಲಕ್ಷಗಳನ್ನು ಅಧ್ಯರ್ಪಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ/219/ವೆಚ್ಚ-4/2011, ದಿನಾಂಕ 27-06-2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ.ಎಂ. ರಾಜಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ).

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ 210 /ಮೀಇಸೇ/ 2010, ಬೆಂಗಳೂರು, ದಿನಾಂಕ 30–06–2011ರ

ಅನುಬಂಧ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು ಮತ್ತು ಸ್ಥಳ	ಮಂಜೂರಾದ ಹಾಗೂ ಹಾಲಿ ಮುಂದುವರೆಯುತ್ತಿರುವ ಹುದ್ದೆಗಳು	ಹೊಸ ಜಿಲ್ಲೆಗೆ ಸ್ಥಳಾಂತರಿಸಲಾದ ಹುದ್ದೆಗಳು ಹಾಗೂ ಕಛೇರಿ	ಸ್ಥಳಾಂತರಿಸಲಾದ ಹುದ್ದೆಗಳ ಸಂಖ್ಯೆ
1	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ತುಮಕೂರು	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ತುಮಕೂರು	(2) ಮೀನುಗಾರಿಕೆ ವಿಸ್ತರಣಾಧಿಕಾರಿ [ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)]	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ–2) ದಾವಣಗೆರೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ತುಮಕೂರು	(3) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ತುಮಕೂರು	(4) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ತುಮಕೂರು	(5) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ತುಮಕೂರು	(6) ಗ್ರೂಪ್–ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ	01
2	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಹಾಸನ	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಹಾಸನ	(2) ಮೀನುಗಾರಿಕೆ ವಿಸ್ತರಣಾಧಿಕಾರಿ [ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)]	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ–2) ಹಾವೇರಿ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಹಾಸನ	(3) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಕಾರವಾರ	(4) ದ್ವಿತೀಯ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಹಾಸನ	(5) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಹಾಸನ	(6) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಹಾಸನ	(7) ಗ್ರೂಪ್–ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾವೇರಿ	02
3	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮಂಡ್ಯ	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮೈಸೂರು	(2)) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ	02
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮೈಸೂರು	(3) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮೈಸೂರು	(4) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ	01

	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮೈಸೂರು	(5) ಗ್ರೂಪ್–ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ	02
4	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಚಿಕ್ಕಮಗಳೂರು	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಬಾಗಲಕೋಟೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಚಿಕ್ಕಮಗಳೂರು	(2) ಮೀನುಗಾರಿಕೆ ವಿಸ್ತರಣಾಧಿಕಾರಿ [ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)]	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ–2) ಬಾಗಲಕೋಟೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಶಿವಮೊಗ್ಗ	(3) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಬಾಗಲಕೋಟೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಶಿವಮೊಗ್ಗ	(4) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಬಾಗಲಕೋಟೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಶಿವಮೊಗ್ಗ	(5) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಬಾಗಲಕೋಟೆ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಶಿವಮೊಗ್ಗ	(6) ಗ್ರೂಪ್–ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಬಾಗಲಕೋಟೆ	02
5	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಕೋಲಾರ	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಗದಗ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಧಾರವಾಡ	(2) ಮೀನುಗಾರಿಕೆ ವಿಸ್ತರಣಾಧಿಕಾರಿ [ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)]	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ–2) ಗದಗ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಧಾರವಾಡ	(3) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಗದಗ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಧಾರವಾಡ	(4) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಗದಗ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಧಾರವಾಡ	(5) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಗದಗ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಧಾರವಾಡ	(6) ಗ್ರೂಪ್–ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಗದಗ	02
6	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ರಾಯಚೂರು	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಚಿಕ್ಕಮಗಳೂರು	(2) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮೈಸೂರು	(3) ದ್ವಿತೀಯ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಚಿಕ್ಕಮಗಳೂರು	(4) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ರಾಯಚೂರು	(5) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ	01
	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ರಾಯಚೂರು	(6) ಗ್ರೂಪ್–ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಕೊಪ್ಪಳ	02

7	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು)	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(2) ಮೀನುಗಾರಿಕೆ ವಿಸ್ತರಣಾಧಿಕಾರಿ [ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)]	ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಉಡುಪಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(3) ಪ್ರಥಮ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(4) ದ್ವಿತೀಯ ದರ್ಜೆ ಸಹಾಯಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(5) ಬೆರಳಚ್ಚುಗಾರರು	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(6) ವಾಹನ ಚಾಲಕ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ	01
	ಹಿನ್ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಉಡುಪಿ	(7) ಗ್ರೂಪ್-ಡಿ	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ	02

ಡಿ.ಎಂ. ರಾಜಣ್ಣ,

ಪಿ.ಆರ್. 1643

ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ).

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಪಿ.ವೈ. ಜಾಲಗಾರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ (ಸ್ವತಂತ್ರ ಪ್ರಭಾರ, ಹಾವೇರಿ – ಅಮಾನತ್ತಿನಲ್ಲಿರುವವರು) ಇವರನ್ನು ಸೇವೆಗೆ ಪುನರ್ ನಿಯುಕ್ತಿಗೊಳಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಒಇ 496 ಪಿಪಿಇ 2009, ದಿನಾಂಕ 21-01-2010.
2. ಸರ್ಕಾರದ ಆದೇಶ ಸಂಖ್ಯೆ : ಒಇ 231 ಪಿಪಿಇ 2010, ದಿನಾಂಕ 24-09-2010.
3. ಶ್ರೀ ಪಿ.ವೈ. ಜಾಲಗಾರ್, ಇವರ ಮನವಿ ದಿನಾಂಕ 14-06-2010.
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿಪಿಎನ್/ಸಿಶಾ-1/225/2009/10, ದಿನಾಂಕ 28-06-2010.

ಪ್ರಸ್ತಾವನೆ :

ಶ್ರೀ ಪಿ.ವೈ. ಜಾಲಗಾರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ (ಸ್ವತಂತ್ರ ಪ್ರಭಾರ, ಹಾವೇರಿ – ಅಮಾನತ್ತಿನಲ್ಲಿರುವವರು) ಇವರು ಹಾವೇರಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮೊ.ನಂ. 5/2009 ರಲ್ಲಿ ದಾಖಲಾದ ಪ್ರಕರಣದಲ್ಲಿ ಫಿರ್ಯಾದುದಾರರಾದ ಶ್ರೀ ಶಾಂತಪ್ಪ ಪಕ್ಕೀರಪ್ಪ ತಳವಾರ ಇವರಿಂದ ದಿನಾಂಕ 24.11.2009 ರಂದು ರೂ.1,500/- ಲಂಚವನ್ನು ಪಡೆಯುತ್ತಿದ್ದಾಗ ಹಾವೇರಿ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದರೆಂಬ ಆಧಾರದಿಂದ ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1)(ಎ)ರ ಅನುಸಾರ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ದಿನಾಂಕ 24-09-2010 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿ ಇರಿಸಲಾಗಿದೆ.

ಶ್ರೀ ಪಿ.ವೈ. ಜಾಲಗಾರ್, ಸರ್ಕಾರಿ ಅಭಿಯೋಜಕರು, ಹಾವೇರಿ ಇವರ ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2)ರ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಅನ್ವಯ ಮಂಜೂರಾತಿಯನ್ನು ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ನೀಡಲಾಗಿರುತ್ತದೆ.

ಶ್ರೀ ಪಿ.ವೈ. ಜಾಲಗಾರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ (ಸ್ವತಂತ್ರ ಪ್ರಭಾರ, ಹಾವೇರಿ – ಅಮಾನತ್ತಿನಲ್ಲಿರುವವರು) ಇವರು ತಮ್ಮ ಅಮಾನತ್ತನ್ನು ರದ್ದುಪಡಿಸಿ ಸೇವೆಗೆ ಪುನರ್ ನೇಮಕ ಮಾಡುವಂತೆ ಮೇಲೆ ಓದಲಾದ (3)ರ ಪತ್ರದಲ್ಲಿ ಕೋರಿರುತ್ತಾರೆ.

ಶ್ರೀ ಪಿ.ವೈ. ಜಾಲಗಾರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ (ಸ್ವತಂತ್ರ ಪ್ರಭಾರ, ಹಾವೇರಿ – ಅಮಾನತ್ತಿನಲ್ಲಿರುವವರು) ಇವರ ಅಮಾನತ್ತಿನ ಆದೇಶದ ಅಥವಾ ಅಮಾನತ್ತಿನ ಜಾರಿಯ ದಿನಾಂಕಗಳನ್ನು ಪರಿಗಣಿಸಿದ್ದಲ್ಲಿ ನ್ಯಾಯಾಲಯದಲ್ಲಿ ಅಧಿಕಾರಿಯವರ ವಿರುದ್ಧ ವಿಚಾರಣೆಯು ನಿಗದಿತ 03 ತಿಂಗಳ ಅವಧಿ ಅಥವಾ ಅವಧಿಯ ಒಳಗೆ ಪ್ರಾರಂಭವಾಗಿರುವುದಿಲ್ಲ. ಈ ಕಾರಣದಿಂದ ಅವರ

ಅಮಾನತ್ತನ್ನು ರದ್ದುಪಡಿಸಿ, ಪುನರ್ ನೇಮಕ ಮಾಡಬಹುದೆಂದು ಮೇಲೆ ಓದಲಾದ (4)ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 231 ಪಿಪಿಇ 2010, ಬೆಂಗಳೂರು, ದಿನಾಂಕ 27ನೇ ಜೂನ್ 2011

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಶ್ರೀ ಪಿ.ವೈ. ಜಾಲಗಾರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ (ಸ್ವತಂತ್ರ ಪ್ರಭಾರ, ಹಾವೇರಿ – ಅಮಾನತ್ತಿನಲ್ಲಿರುವವರು) ಇವರ ವಿರುದ್ಧ ಮೊಕದ್ದಮೆ/ಇಲಾಖಾ ವಿಚಾರಣೆ ಬಾಕಿ ಇರಿಸಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 10ನೇ ನಿಯಮದ 5ನೇ ಉಪ ನಿಯಮ (ಸಿ) ರನ್ವಯ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಇವರ ಅಮಾನತ್ತನ್ನು ರದ್ದುಪಡಿಸಿ, ಇವರನ್ನು ಅಭಿಯೋಗ ಉಪ ನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು ವರ್ಗಾವಣೆಯಾಗಿರುವ ಶ್ರೀಮತಿ ಲಲಿತಾ ಬಿ. ಸಂಗಣ್ಣವರ್ ಇವರ ಸ್ಥಳಕ್ಕೆ ಪುನರ್ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ನಿಂಗಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1644 ಒಳಾಡಳಿತ ಇಲಾಖೆ.

(ಪೊಲೀಸ್ ಸೇವೆಗಳು–ಬಿ).

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ.ಇ. ರಂಗೇಗೌಡ, ಪಿ.ಸಿ. ಐ.ಆರ್.ಬಿ., ಮುನಿರಾಬಾದ್, ಇವರು 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ : ಸಿಬ್ಬಂದಿ (3)/ಇವಿ–5/2008–09, ದಿನಾಂಕ 12–8–09.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (12)/2009–10, ದಿನಾಂಕ 30–12–09.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 06–04–10.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) /8/2010–11, ದಿನಾಂಕ 21–02–2011.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 53 ಸಿಎನ್‌ಎಸ್ 11, ದಿನಾಂಕ 17–6–2011.

ಪ್ರಸ್ತಾವನೆ :

ಶ್ರೀ ಕೆ.ಇ. ರಂಗೇಗೌಡ, ಪಿ.ಸಿ. ಐ.ಆರ್.ಬಿ., ಮುನಿರಾಬಾದ್, ಇವರು 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ದುರ್ವರ್ತನೆ, ಅಶಿಸ್ತು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ಕೆ.ಇ. ರಂಗೇಗೌಡ, ಪಿ.ಸಿ.–535, 'ಸಿ' ದಳ, 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಆದ ನಿಮ್ಮನ್ನು ದಿನಾಂಕ 22–7–2008ರ ಬೆಳಿಗ್ಗೆ 7–30 ಗಂಟೆಯಲ್ಲಿ ಶ್ರೀ ವಿ. ಆಂಜನೇಯ, ಆರ್.ಎಸ್.ಐ., ಇವರ ನೇತೃತ್ವದ ಸಿ–3 ತುಕಡಿಯೊಂದಿಗೆ 3ನೇ ಪಡೆಯ ವಾಹನ ಸಂಖ್ಯೆ : ಕೆಎ–01 ಜಿ–631 ದಲ್ಲಿ ಕೆ.ಎ.ಆರ್.ಪಿ., ನಿಯಂತ್ರಣ ಕೊಠಡಿ ಸಂಖ್ಯೆ : 60, ರಿಚ್‌ಮಂಡ್ ರಸ್ತೆ ಇಲ್ಲಿಗೆ ನಿಲುಗಡೆ ಕರ್ತವ್ಯಕ್ಕೆ ನೇಮಿಸಲಾಗಿದ್ದಿತು. ದಿನಾಂಕ 23–7–2008 ರಂದು ಸಮಯ 15–30 ಗಂಟೆಗೆ ನಿಮ್ಮ ಸಿ–3 ತುಕಡಿಯನ್ನು ದೊಡ್ಡಬಳ್ಳಾಪುರ ವಿಶೇಷ ಕರ್ತವ್ಯಕ್ಕೆ ತೆರಳುವಂತೆ ಕೆ.ಎಸ್.ಆರ್.ಪಿ. ನಿಯಂತ್ರಣ ಕೊಠಡಿಯಿಂದ ಸೂಚಿಸಲಾಗಿದ್ದಿತು. ಅದರಂತೆ ನೀವು ಇದ್ದ ಸಿ–3 ತುಕಡಿಯು ನಿಯಂತ್ರಣ ಕೊಠಡಿಯಿಂದ ಹೊರಟು ಸಮಯ 18.00 ಗಂಟೆಗೆ ದೊಡ್ಡಬಳ್ಳಾಪುರ ತಲುಪಿರುತ್ತದೆ. ಸದರಿ ತುಕಡಿಗೆ ದೊಡ್ಡಬಳ್ಳಾಪುರದ ನಂಜುಂಡೇಶ್ವರ ಕಲ್ಯಾಣ ಮಂಟಪದಲ್ಲಿ ತಂಗಲು ಅವಕಾಶ ಕಲ್ಪಿಸಲಾಗಿತ್ತು. ದಿನಾಂಕ 28.7.2008ರ ರಾತ್ರಿ ಸುಮಾರು 9–45 ಗಂಟೆಗೆ ಕರ್ತವ್ಯಕ್ಕೆ ನೀವು ಪಾನಮತ್ತರಾಗಿ ಹಾಜರಾಗುವುದಲ್ಲದೇ ತುಕಡಿಯ ಹವಲ್ದಾರ್ ಸಂಖ್ಯೆ : 103 ಎಂ. ಚಂದ್ರಪ್ಪ (ಮೆಸ್ ಕಮಾಂಡರ್) ಹಾಗೂ ನಾಗರಾಜಶೆಟ್ಟಿ ಪಿ.ಸಿ.–481 ಇವರುಗಳ ಜೊತೆ ಅನಾವಶ್ಯಕವಾಗಿ ಜಗಳ ತೆಗೆದು ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹವ–103 ಎಂ. ಚಂದ್ರಪ್ಪ ಇವರ ಕುತ್ತಿಗೆಪಟ್ಟಿ ಹಿಡಿದು ಚಪ್ಪಲಿಯಿಂದ ಹೊಡೆದು ತಮ್ಮ ಕರ್ತವ್ಯದಲ್ಲಿ ತೀವ್ರ ದುರ್ವರ್ತನೆ ಅಶಿಸ್ತು ಪ್ರದರ್ಶಿಸಿರುವುದು ನಿಮ್ಮ ಮೇಲಿನ ಆರೋಪವಾಗಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ.,

ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 12.8.09ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿದೆ ದಿನಾಂಕ 29–7–2008 ರಿಂದ 15.10.08 ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ 30–12–2009ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ ಇವರನ್ನು ಸೇವೆಗೆ ಪುನರ್ ನೇಮಕ ಮಾಡಲಾಗಿದೆ ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮೂರು ವರ್ಷಗಳ ಕಾಲ ತದನಂತರ ಗಳಿಸುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಿದ್ದಾರೆ. ಅಮಾನತ್ತಿನ ಅವಧಿ ದಿನಾಂಕ 29–7–08 ರಿಂದ 15–10–08 ನ್ನು ಅಮಾನತ್ತೆಂದೆ ಹಾಗೂ ಕಡ್ಡಾಯ ನಿವೃತ್ತಿ ಹೊಂದಿದ ದಿನಾಂಕದಿಂದ ಸೇವೆಗೆ ಪುನರ್ ನೇಮಕಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವವರೆಗಿನ ಅವಧಿಯನ್ನು ಸೇವೆಯಿಂದ ಹೊರಗುಳಿದ ಅವಧಿ ಎಂದು ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಯಿತು. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕನುಗುಣವಾಗಿಲ್ಲವೆಂದು ಪರಿಗಣಿಸಿ ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 54 ಪೊಸಿಅ 2010, ಬೆಂಗಳೂರು, ದಿನಾಂಕ 28ನೇ ಜೂನ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ.ಇ. ರಂಗೇಗೌಡ, ಪಿ.ಸಿ. ಐ.ಆರ್.ಬಿ., ಮುನಿರಾಬಾದ್, ಇವರ ಮೇಲ್ಮನವಿ ಪ್ರಾಧಿಕಾರವು ದಿನಾಂಕ 30–12–2009ರ ಆದೇಶದಲ್ಲಿ ಇವರಿಗೆ ವಿಧಿಸಿದ ದಂಡನೆಯನ್ನು ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಸಂಚಿತ ಪರಿಣಾಮ ರಹಿತವಾಗಿ ಮುಂದೂಡುವ ದಂಡನೆಯನ್ನು ವಿಧಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಹಾಗೂ ಇವರು ಸೇವೆಯಿಂದ ಕಡ್ಡಾಯ ನಿವೃತ್ತಿ ಹೊಂದಿದ ದಿನಾಂಕದಿಂದ ಸೇವೆಗೆ ಪುನರ್ ನೇಮಕಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies-non) ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.
(ಪೊಲೀಸ್ ಸೇವೆಗಳು).

ಪಿ.ಆರ್. 1645

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ನಂಜುಂಡೇಗೌಡ, ಪಿ.ಎಸ್.ಐ. ಬಾಣಾವರ ಪೊಲೀಸ್ ಠಾಣೆ, ಹಾಸನ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಇವಿ/01/2009–10 (ಓ.ಬಿ. ಸಂಖ್ಯೆ: 22/2009–10) ದಿನಾಂಕ:03–02–2010
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು (4)/11/2010–11 (ಓ.ಬಿ. ಸಂಖ್ಯೆ: 26/2010–11) ದಿನಾಂಕ:7–10–2010
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:16–11–2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/70/2010–11, ದಿನಾಂಕ:4–1–2011.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 36 ಸಿಎನ್‌ಎಸ್ 11, ದಿ:17–6–2011.

ಪ್ರಸ್ತಾವನೆ :

ಶ್ರೀ ನಂಜುಂಡೇಗೌಡ, ಪಿ.ಎಸ್.ಐ. ಇವರು ಬಾಣಾವರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಬೇಜವಾಬ್ದಾರಿತನ, ನಿರ್ಲಕ್ಷ್ಯತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ನಂಜುಂಡೇಗೌಡ, ಪಿ.ಎಸ್.ಐ. ಬಾಣಾವರ ಪೊಲೀಸ್ ಠಾಣೆ ಹಾಲಿ ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆ (ಅಪರಾಧ ವಿಭಾಗ) ಹಾಸನ ಆದ ನೀವು ಈ ಹಿಂದೆ ಬಾಣಾವರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 17–12–2008ರಂದು ಬೆಳಿಗ್ಗೆ ಸುಮಾರು 9:00 ಗಂಟೆಯಲ್ಲಿ ಶ್ರೀ ವೆಂಕಟರಮಣ ಬಿನ್ ಲೇಟ್ ಕಪ್ಪಣ್ಣ ನರಸೀಪುರ ಗ್ರಾಮ ಕಣಿಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕ್ ರವರ ಪತ್ನಿ ಶ್ರೀಮತಿ ಲತಾ ಮತ್ತು ಅವರ ಅಣ್ಣ ನಾರಾಯಣರವರೊಂದಿಗೆ ಠಾಣೆಗೆ ಹಾಜರಾಗಿ ಪರಿಶಿಷ್ಟ ಜಾತಿಗೆ ಸೇರಿದ ವೆಂಕಟರಮಣರವರಿಗೆ ದಿನಾಂಕ 16–12–2008ರಂದು ನರಸೀಪುರ ಗ್ರಾಮದಲ್ಲಿ ಸವರ್ಣೀಯ ಜನಾಂಗದ ಎನ್.ಸಿ. ಗವಿರಂಗಪ್ಪ ಮತ್ತು ಇತರರು ಜಾತಿ

ನಿಂದನೆ ಮಾಡಿ ಹಲ್ಲೆ ಮಾಡಿ ದೌರ್ಜನ್ಯವೆಸಗಿದ್ದ ಬಗ್ಗೆ ದೂರು ಕೊಡಲು ಬಂದಾಗ ಠಾಣೆಯಲ್ಲಿದ್ದ ನೀವು ಅವರ ದೂರನ್ನು ಪಡೆದು ದೌರ್ಜನ್ಯದ ಪ್ರಕರಣ ದಾಖಲಿಸದೆ ಠಾಣೆಯೊಳಗೆ ಬಂದಿದ್ದ ವೆಂಕಟರಮಣ ಮತ್ತು ಅವರ ಅಣ್ಣ ಎನ್.ಕೆ. ನಾರಾಯಣರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿದ್ದ ಆರೋಪಿತರ ಪರವಾಗಿ ಮಾತನಾಡಿ ದುರ್ನಡತೆಯನ್ನು ಪ್ರದರ್ಶಿಸಿ ಕರ್ತವ್ಯದಲ್ಲಿ ತೀವ್ರತರವಾದ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯತನ ತೋರ್ಪಡಿಸಿ ಕರ್ತವ್ಯಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 3-2-2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ 7-10-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣಾ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯನ್ನು ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 174 ಪೊಸಿಅ 2010 ಬೆಂಗಳೂರು, ದಿನಾಂಕ:28-6-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನಂಜುಂಡೇಗೌಡ, ಪಿ.ಎಸ್.ಐ. ಬಾಣಾವರ ಪೊಲೀಸ್ ಠಾಣೆ, ಹಾಸನ ಜಿಲ್ಲೆ, ಇವರಿಗೆ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ "ವಾಗ್ದಂಡನೆ"ಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಪಿ.ಆರ್.1646

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಟಿ. ಲಾರೆನ್ಸ್, ಸಿ.ಹೆಚ್.ಸಿ. 82, ಯಳಂದೂರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ, ಇವರ ಆದೇಶ **ಸಂಖ್ಯೆ:** ಚಾನ/ಡಿಇ/ಶಿಕ್ಷೆ/10/2004-05, ದಿ:2-2-2005.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರ ಆದೇಶ ಸಂಖ್ಯೆ: ಅಪೀಲು/04/2005-06, ದಿನಾಂಕ:3-9-2005.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:06-11-2009.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/57/2009-10, ದಿನಾಂಕ:24-8-2010.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 26 ಸಿಎನ್‌ಎಸ್ 11, ದಿ:17-6-2011.

ಪ್ರಸ್ತಾವನೆ :

ಶ್ರೀ ಟಿ. ಲಾರೆನ್ಸ್, ಸಿ.ಹೆಚ್.ಸಿ. 82, ಯಳಂದೂರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಈ ಹಿಂದೆ ಹನೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಲೋಪವೆಸಗಿ ಇಲಾಖೆಗೆ ತರವಲ್ಲದ ರೀತಿಯಲ್ಲಿ ವರ್ತಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ದಿನಾಂಕ 9-4-2004 ರಂದು ಸಾಯಂಕಾಲ ಆರೋಪಿತ ಪೊಲೀಸ್ ಅಧಿಕಾರಿಯಾದ ಶ್ರೀ ಟಿ. ಲಾರೆನ್ಸ್, ಸಿ.ಹೆಚ್.ಸಿ.-82, ಹನೂರು ಪೊಲೀಸ್ ಠಾಣೆ (ಹಾಲಿ ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ) ಆದ ನೀವು ಹನೂರು ಪಟ್ಟಣದ ತರಕಾರಿ ಮಹಾದೇವಮ್ಮಳ ಅಂಗಡಿ ಹತ್ತಿರ ನಿಂತು ಪರಿಮಳ ನಾಗಪ್ಪ ಬೋಳಿ ಮಗಳು ಈ ಬಾರಿ ಎಲೆಕ್ಷನ್‌ನಲ್ಲಿ ಸೋಲುವುದು ಗ್ಯಾರೆಂಟಿ. ರಾಜುಗೌಡರ ಮಗ ನರೇಂದ್ರರಿಗೆ ಓಟು ಹಾಕಿ ಎಂದು ಹೇಳುತ್ತಾ ಅವಾಚ್ಯ ಶಬ್ದಗಳಿಂದ ಬೈದು, ಅತೀ ಸೂಕ್ಷ್ಮ ಪ್ರದೇಶದ ಸರಹದ್ದಿನ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ನೀವು, ಚುನಾವಣೆ ಸಮೀಪಿಸಿರುವ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದ ನೀವು ಸಾರ್ವಜನಿಕ ಸ್ಥಳದಲ್ಲಿ ರಾಜಕೀಯ ವ್ಯಕ್ತಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಇಲಾಖಾ ನಿಯಮವನ್ನು ಉಲ್ಲಂಘಿಸಿ ಇಲಾಖೆಗೆ ತರವಲ್ಲದ ರೀತಿಯಲ್ಲಿ ಅಸಭ್ಯವಾಗಿ ವರ್ತಿಸಿ ಗುರುತರವಾದ ಕರ್ತವ್ಯಲೋಪವೆಸಗಿರುತ್ತೀರಿ. ಇತ್ಯಾದಿ".

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 2–2–2005ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ಮುಖ್ಯ ಪೇದೆಯ ವೇತನದ ಕನಿಷ್ಠ ಮಟ್ಟಕ್ಕೆ ಇಳಿಸಲಾಗಿದೆ ಹಾಗೂ ಇನ್ನು ಮುಂದೆ ವಾರ್ಷಿಕ ವೇತನ ಬಡ್ತಿಯನ್ನು ಹೊಸದಾಗಿ ಗಳಿಸುವುದು. ದಿನಾಂಕ 15–4–2004 ರಿಂದ 4–9–2004 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 3–9–2005ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 59(1)(ಬಿ)ಗೆ ವ್ಯತಿರಿಕ್ತವಾಗಿದ್ದು ಆದ್ದರಿಂದ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 193 ಪೊಸಿಅ 2009, ಬೆಂಗಳೂರು, ದಿನಾಂಕ: 28ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಟಿ. ಲಾರೆನ್ಸ್, ಸಿ.ಹೆಚ್.ಸಿ.82 ಯಳಂದೂರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರಿಗೆ ದಿನಾಂಕ 2–2–2005ರ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಈ ಕೆಳಕಂಡಂತೆ ಮಾರ್ಪಡಿಸಿದೆ.

i. ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಹುದ್ದೆಯ ಕಾಲಿಕ ವೇತನ ಶ್ರೇಣಿಯಲ್ಲಿ ಇವರ ವೇತನವನ್ನು ಸದರಿ ಹುದ್ದೆಯ ಕನಿಷ್ಠ ವೇತನಕ್ಕೆ ಐದು ವರ್ಷಗಳ ಕಾಲ ಸಂಚಿತ ಪರಿಣಾಮ ರಹಿತ (Without Cummulative Effect) ವಾಗಿ ಇಳಿಸಿದೆ. ದಂಡನೆಯ ಅವಧಿಯಲ್ಲಿ ಇವರು ಯಾವುದೇ ವಾರ್ಷಿಕ ವೇತನ ಬಡ್ತಿಯಾಗಲೀ ಅಥವಾ ಪದೋನ್ನತಿಯಾಗಲಿ ಪಡೆಯಲು ಅರ್ಹರಿರುವುದಿಲ್ಲ, ಇವರ ವೇತನವು ಸ್ಥಿರವಾಗಿರುತ್ತದೆ.

ii. ಶಿಸ್ತು ಪ್ರಾಧಿಕಾರವು ದಂಡನೆಯ ಆದೇಶ ಹೊರಡಿಸಿದ ತಿಂಗಳಿನ ಮುಂದಿನ ತಿಂಗಳು ಅಂದರೆ ದಿನಾಂಕ 1–3–2005 ರಿಂದ ಜಾರಿಗೆ ಬರುತ್ತದೆ (ದಂಡನಾದೇಶದ ದಿನಾಂಕ 2–2–2005 ಆಗಿರುವುದರಿಂದ) ಇವರ ದಂಡನೆಯು ದಿನಾಂಕ 1–3–2005 ರಿಂದ 31–3–2010ರ ವರೆಗೆ ಐದು ವರ್ಷಗಳು ಇರುತ್ತದೆ.

iii. ದಂಡನಾವಧಿಯಾದ ಐದು ವರ್ಷಗಳು ಪೂರ್ಣಗೊಂಡ ನಂತರ ಇವರ ವೇತನವನ್ನು ಇವರು ದಂಡನಾವಧಿಯ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನ ಹಾಗೂ ತಡೆಹಿಡಿಯಲಾಗಿದ್ದ ಐದು ವಾರ್ಷಿಕ ವೇತನ ಬಡ್ತಿಗಳನ್ನು ಸೇರಿಸಿ ಕಾಲ್ಪನಿಕವಾಗಿ ಮರುನಿಗಧಿಗೊಳಿಸುವುದು.

iv. ಇವರ ಅಮಾನತ್ತಿನ ಅವಧಿ ದಿನಾಂಕ 15–4–2004 ರಿಂದ 4–9–2004ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.1647

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ. ಪಾಪಣ್ಣ, ಪಿ.ಎಸ್.ಐ., ವಿಧಾನಸೌಧ ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಡೆಪ್ಯೂಟಿ ಪೊಲೀಸ್ ಕಮೀಷನರ್, ಸಂಚಾರ, ಪೂರ್ವ ವಿಭಾಗ, ಬೆಂಗಳೂರು, ಇವರ ಆದೇಶ ಸಂಖ್ಯೆ: 12 ಡಿಇ/ಆರ್/7/10 ದಿನಾಂಕ: 28–10–2010.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು, ಇವರ ಆದೇಶ ಸಂಖ್ಯೆ: 84/ಅಪೀಲು/1/2010, ದಿನಾಂಕ:18–12–2010
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:17–02–2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/89/2010–11, ದಿನಾಂಕ:13–4–2011.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 46 ಸಿಎನ್ಎಸ್ 11, ದಿ:17–6–2011.

ಪ್ರಸ್ತಾವನೆ :

ಶ್ರೀ ಎಂ. ಪಾಪಣ್ಣ, ಪಿ.ಎಸ್.ಐ., ಇವರು ಬೆಂಗಳೂರಿನ ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಎಂ. ಪಾಪಣ್ಣ, ಪಿ.ಎಸ್.ಐ., ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆ ಆದ ನಿಮಗೆ ಸಂಚಾರ ಉಲ್ಲಂಘನೆ ಮಾಡುವ ವಾಹನ/ ಚಾಲಕರ ವಿರುದ್ಧ ಕೇಸುಗಳನ್ನು ದಾಖಲಿಸಲು ಬ್ಲಾಕ್‌ಬೇರಿ ಯಂತ್ರ ಬಿಟಿ.ಪಿ. ಸಂಖ್ಯೆ ಸಿ/2/1005 ನೀಡಲಾಗಿರುತ್ತದೆ. ಸದರಿ ಯಂತ್ರದಲ್ಲಿ ದಿನಾಂಕ 27–10–2008 ರಂದು ಸಂಖ್ಯೆ: ಸಿ/2/1005/2459 ರಲ್ಲಿ ಸಿ.ಆರ್.ಆರ್. ನೀಡಿರುತ್ತೀರಿ, ನಂತರ ಏಪ್ರಿಲ್ 10ನೇ ಮಾಹೆಯಲ್ಲಿ ಇದೇ ಸಿ.ಆರ್.ಆರ್. ರಲ್ಲಿ 23 ರೀಪ್ರಿಂಟ್‌ಗಳನ್ನು ತೆಗೆದಿರುವುದು ಬ್ಲಾಕ್‌ಬೇರಿ ಡಾಟಾಬೇಸ್‌ನಲ್ಲಿ ಸಂಗ್ರಹವಾದ ಮಾಹಿತಿಯಿಂದ ತಿಳಿದು ಬಂದಿರುತ್ತದೆ. ನೀವು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿದ್ದು ಎಲೆಕ್ಟ್ರಾನಿಕ್ ಉಪಕರಣಗಳ ಉಪಯೋಗ ಹಾಗೂ ಪರಿಣಾಮಗಳ ಅರಿವಿದ್ದರೂ ಈ ರೀತಿ ರೀ–ಪ್ರಿಂಟ್‌ಗಳನ್ನು ತೆಗೆದಿರುವುದು ಸಂದೇಹಾಸ್ಪದ ಹಾಗೂ ದುರುದ್ದೇಶದಿಂದ ಕೂಡಿದ್ದು ನಿಮ್ಮ ಬೇಜವಾಬ್ದಾರಿ ಹಾಗೂ ದುರ್ನಡತೆಯನ್ನು ಎತ್ತಿ ತೋರಿಸುತ್ತದೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಡೆಪ್ಯೂಟಿ ಪೊಲೀಸ್ ಕಮೀಷನರ್, ಸಂಚಾರ, ಪೂರ್ವ ವಿಭಾಗ, ಬೆಂಗಳೂರು, ಇವರ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 28–10–2010ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು 6 ತಿಂಗಳ ಕಾಲ ಮುಂದಿನ ವೇತನ ಬಡ್ತಿಗೆ ಧಕ್ಕೆಯಾಗದಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 18–12–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಿ, ಪರಿಷ್ಕರಣ ಮೇಲ್ಮನವಿಯನ್ನು ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 16 ಪೊಸಿಅ 2011 ಬೆಂಗಳೂರು, ದಿನಾಂಕ:28ನೇ ಜೂನ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ. ಪಾಪಣ್ಣ, ಪಿ.ಎಸ್.ಐ., ವಿಧಾನಸೌಧ ಪೊಲೀಸ್ ಠಾಣೆ, ಬೆಂಗಳೂರು, ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನಾದೇಶವನ್ನು ಮಾರ್ಪಡಿಸಿ "ವಾಗ್ದಂಡನೆ"ಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.1648

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ. ಹೆಚ್. ಚಿಕ್ಕರೆಡ್ಡಿ, ಪಿ.ಐ., ಪೊಲೀಸ್ ತರಬೇತಿ ಶಾಲೆ, ಖಾನಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರ ಆದೇಶ ಸಂಖ್ಯೆ: ಸಿಬ್ಬಂದಿ(3)/ಪಿಆರ್/157/07 (ಓ.ಬಿ. 782/07) ದಿ:22–10–2007
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ: ಅಪೀಲು/11/ಈವ/2008/969, (ಓ.ಬಿ. ಸಂಖ್ಯೆ:136/ಈವ/2008) ದಿನಾಂಕ:25–02–2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:17–05–2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)/23/2010–11, ದಿನಾಂಕ:25–9–2010
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 49 ಸಿಎನ್‌ಎಸ್ 11, ದಿ:17–6–2011.

ಪ್ರಸ್ತಾವನೆ :

ಶ್ರೀ ಎಂ.ಹೆಚ್. ಚಿಕ್ಕರೆಡ್ಡಿ, ಪಿ.ಐ. ಖಾನಾಪುರ ಇವರು ಸಿಂಧನೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಲೋಪದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ದಿನಾಂಕ 17–6–2007ರಂದು ಸಿಂಧನೂರು–ಸಿರಗುಪ್ಪ ಮುಖ್ಯ ರಸ್ತೆಯಲ್ಲಿ ಸಾಸಲಮರಿ ಕ್ಯಾಂಪ್‌ದಲ್ಲಿ ವಿ.ಆರ್.ಎಸ್. ಬಸ್ ನಂ. ಕೆಎ–25/ಬಿ–5361 ನೇದ್ದರ ಚಾಲಕ ವಿಠಲ್ ಎಂಬಾತನು ಬಸ್ಸನ್ನು ಅಲಕ್ಷ್ಯತನದಿಂದ ನಡೆಸಿಕೊಂಡು ಬಂದು ಶ್ರೀ ಜಂಗ್ಲಿಸಾಬ ಈತನಿಗೆ ಟಕ್ಕರ್ ಕೊಟ್ಟು ತೀವ್ರ ಸ್ವರೂಪದ ಗಾಯಗಳನ್ನು ಮಾಡಿ ಅವರ ಮರಣಕ್ಕೆ ಕಾರಣರಾದ ಆರೋಪಿಯನ್ನು ಜಾಮೀನಿನ ಮೇಲೆ ಬಿಟ್ಟು ಮೇಲಾಧಿಕಾರಿಗಳು ನೀಡಿದ ಸೂಚನೆಗಳನ್ನು ಪಾಲನೆ ಮಾಡದೇ ಕರ್ತವ್ಯಲೋಪವೆಸಗಿದ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ:22–10–2007ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಮೂರು ತಿಂಗಳ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯು ಕಡಿಮೆಯಾಗಿರುವುದೆಂದು ಪರಿಗಣಿಸಿ ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ 25–02–2008ರ ಆದೇಶದಲ್ಲಿ ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಆರು ತಿಂಗಳ ಕಾಲ ಮುಂದೂಡಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಯಿತು. ಅರ್ಜಿದಾರರು ಕರ್ತವ್ಯಲೋಪವೆಸಗಿರುವುದು ಸಾಬೀತಾಗಿದೆ ಆದರೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 13(3)(ಸಿ)ರಡಿಯಲ್ಲಿ ಮೇಲ್ಮನವಿ ಪ್ರಾಧಿಕಾರವು ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು (Suo-moto) ಹೆಚ್ಚಿಸುವ ಅಧಿಕಾರವಿರುವುದಿಲ್ಲ. ಆದ್ದರಿಂದ ಮೇಲ್ಮನವಿ ಪ್ರಾಧಿಕಾರದ ಆದೇಶವನ್ನು ರದ್ದುಪಡಿಸಿ, ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಸ್ಥಿರೀಕರಿಸಲು ಸರ್ಕಾರವು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 78 ಪೊಸಿಅ 2010 ಬೆಂಗಳೂರು, ದಿನಾಂಕ:28ನೇ ಜೂನ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಹೆಚ್. ಚಿಕ್ಕರೆಡ್ಡಿ, ಪಿ.ಐ. ಪೊಲೀಸ್ ತರಬೇತಿ ಶಾಲೆ, ಖಾನಾಪುರ, ಇವರಿಗೆ ಮೇಲ್ಮನವಿ ಪ್ರಾಧಿಕಾರವು ದಿನಾಂಕ 25–02–2008ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ರದ್ದುಪಡಿಸಿ ದಿನಾಂಕ 22–10–2007ರಲ್ಲಿ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಸ್ಥಿರೀಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1649

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀಮತಿ ಕೆ.ಎಸ್. ಪುಟ್ಟಮ್ಮ, ಮ.ಪಿ.ಐ., ಸಿ.ಸಿ.ಬಿ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 37/ಡಿಇ/1/ಆರ್6/2008 ದಿನಾಂಕ: 03–10–2009.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ, ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)/118/2009–10 ದಿನಾಂಕ: 21–04–2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 02–06–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)/118–2009–10 ದಿನಾಂಕ: 26–08–2010.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 51 ಸಿಎನ್‌ಎಸ್ 11 ದಿನಾಂಕ: 17–06–2011.

ಪ್ರಸ್ತಾವನೆ :

ಶ್ರೀಮತಿ ಕೆ.ಎಸ್. ಪುಟ್ಟಮ್ಮ, ಮ.ಪಿ.ಐ., ಸಿ.ಸಿ.ಬಿ., ಬೆಂಗಳೂರು, ಇವರು ಈ ಹಿಂದೆ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀಮತಿ ಕೆ.ಎಸ್. ಪುಟ್ಟಮ್ಮ, ಮಹಿಳಾ ಪೊಲೀಸ್ ಇನ್‌ಸ್ಪೆಕ್ಟರ್, ಬಸವನಗುಡಿ ಮಹಿಳಾ ಪೊಲೀಸ್ ಠಾಣೆ, ದಕ್ಷಿಣ ಭಾಗ, ಬೆಂಗಳೂರು ನಗರ, ಆದ ನೀವು ಮಹಿಳಾ ಪೊಲೀಸ್ ಠಾಣೆ, ದಕ್ಷಿಣ ವಿಭಾಗದ ಠಾಣಾಧಿಕಾರಿಯಾಗಿದ್ದು, ಠಾಣೆಗೆ ಬರುವ ಸಂಜ್ಞೇಯ ಅಪರಾಧಗಳನ್ನು ಸ್ವತಃ ದಾಖಲು ಮಾಡಬೇಕು ಹಾಗೂ ಅನಿವಾರ್ಯ ಕಾರಣಗಳಿಂದ ನೀವು ಠಾಣೆಯಲ್ಲಿ ಲಭ್ಯವಿಲ್ಲದ ಸಮಯದಲ್ಲಿ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿ ಪ್ರಕರಣಗಳನ್ನು ದಾಖಲು ಮಾಡಬೇಕು. ಹಾಗೂ ಈ ಬಗ್ಗೆ ನೀವು ಸೂಕ್ತ ಮೇಲುಸ್ತುವಾರಿ ವಹಿಸಬೇಕು. ದಿನಾಂಕ: 20–12–2007 ರಂದು ಬಸವನಗುಡಿ ಮಹಿಳಾ ಪೊಲೀಸ್ ಠಾಣೆಗೆ ಶ್ರೀಮತಿ ಭಾರತಿ ಆರ್. ಎಂಬುವವರು ಸಂಜ್ಞೇಯ ಅಪರಾಧಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದು, ಆ ವೇಳೆಯಲ್ಲಿ ಠಾಣೆಯ ಪ್ರಭಾರದಲ್ಲಿದ್ದ ಶ್ರೀಮತಿ ಸರಸ್ವತಿ, ಮಹಿಳಾ ಎ.ಎಸ್.ಐ., ರವರು ನಿಮಗೆ ಪ್ರಕರಣದ ಬಗ್ಗೆ ದೂರವಾಣಿ ಮೂಲಕ ತಿಳಿಸಿದ್ದು, ನೀವು ನಿಮ್ಮ ಅಧೀನ ಸಿಬ್ಬಂದಿಗೆ ಪ್ರಕರಣ ದಾಖಲು ಮಾಡಿಕೊಳ್ಳಲು ಸೂಚಿಸಬೇಕಾಗಿದ್ದರೂ ಸಹ ಸೂಚಿಸದೆ ಸಂಜ್ಞೇಯ ಅಪರಾಧಗಳನ್ನು ಸಿಮೀಸ್‌ನಲ್ಲಿ ದಾಖಲು ಮಾಡುವಂತೆ ಸೂಚಿಸಿ, ತದನಂತರ ದಿನಾಂಕ: 24–12–2007 ರಂದು ಶ್ರೀಮತಿ ಭಾರತಿ ಆರ್. ರವರಿಂದ ಬೇರೊಂದು ದೂರನ್ನು ಪಡೆದು ಪ್ರಕರಣ ದಾಖಲು ಮಾಡಿಕೊಂಡು ಪ್ರಕರಣ ದಾಖಲಿಸುವಲ್ಲಿ ವಿಳಂಬವೆಸಗಿರುತ್ತೀರಿ. ಪ್ರಥಮ ವರ್ತಮಾನ ವರದಿಯಲ್ಲಿ ಫಿರ್ಯಾದಿ ಶ್ರೀಮತಿ ಆರ್. ಭಾರತಿ ಇವರು ಸದರಿ ಪೊಲೀಸ್ ಠಾಣೆಗೆ ದಿನಾಂಕ: 20–12–2007 ರಂದು ಸಲ್ಲಿಸಿದ ದೂರಿನ ಬಗ್ಗೆ ಯಾವುದೇ ಪ್ರಸ್ತಾಪ ಮಾಡದಿರುವುದರಿಂದ, ಅಂತಹ ಒಂದು ದೂರನ್ನು ಮುಚ್ಚಿ ಹಾಕುವ ಉದ್ದೇಶವಿತ್ತು ಎಂದು ಕಂಡು ಬರುತ್ತದೆ. ನೀವು ದಿನಾಂಕ: 24–12–2007ರಂದು ಮೊ.ಸಂಖ್ಯೆ: 79/2007 ಕಲಂ 498(ಎ), 506(ಬಿ) ಐಪಿಸಿ ಸಹಿತ 3 ಮತ್ತು 4 ಡಿ.ಪಿ. ಆಕ್ಟ್ ರಡಿಯಲ್ಲಿ ದಾಖಲಿಸಿರುವ ಮೊಕದ್ದಮೆಯ ಪ್ರಥಮ ವರ್ತಮಾನ ವರದಿಯಲ್ಲಿ ಅಪರಾಧ ನಡೆದ ದಿನಾಂಕ 20–12–2007 ರಂದು ಶ್ರೀಮತಿ ಆರ್. ಭಾರತಿರವರು ಸಲ್ಲಿಸಿದ ದೂರಿನ ಬಗ್ಗೆ ಯಾವುದೇ ರೀತಿಯ ಪ್ರಸ್ತಾಪ ಇಲ್ಲದೆ ಇರುವುದು ಹಾಗೂ ನ್ಯಾಯಾಲಯದ ಮುಂದೆ ಸಲ್ಲಿಸಿದ ಪ್ರಥಮ ವರ್ತಮಾನ ವರದಿಯಲ್ಲಿ ನಿಜ ಸಂಗತಿಯನ್ನು ತಿಳಿಸದಿರುವುದರಿಂದ ಶ್ರೀಮತಿ ಆರ್. ಭಾರತಿ ರವರು ದಿನಾಂಕ: 20–12–2007 ರಂದು ಸಲ್ಲಿಸಿದ ದೂರನ್ನು ನ್ಯಾಯಾಲಯದ ಗಮನಕ್ಕೆ ತರದೆ ಮುಚ್ಚಿಹಾಕಿರುತ್ತೀರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ನೀವು ಫಿರ್ಯಾದಿ ಶ್ರೀಮತಿ ಆರ್. ಭಾರತಿಯವರಿಗೆ ನ್ಯಾಯ ಸಮ್ಮತವಾಗಿರುವಂತಹ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುತ್ತೀರೆಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಅಭಿಪ್ರಾಯ ಪಟ್ಟು ನಿಮ್ಮ ಕರ್ತವ್ಯ ಚ್ಯುತಿ ಹಾಗೂ ನಿರ್ಲಕ್ಷತೆಗೆ ಸೂಕ್ತ ಕ್ರಮ ಜರುಗಿಸಲು ಸೂಚಿಸಿರುತ್ತದೆ. ಈ ಎಲ್ಲಾ ಕಾರಣಗಳಿಂದ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀಮತಿ ಕೆ.ಎಸ್. ಪುಟ್ಟಮ್ಮ ಆದ ನೀವು ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ ತೆ, ತೋರಿಸಿ ಕರ್ತವ್ಯದಲ್ಲಿ ಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 03–10–2009ರ ಆದೇಶದಲ್ಲಿ ಅರ್ಜಿದಾರರು ಪ್ರಸ್ತುತ ಪಡೆಯುತ್ತಿರುವ ವೇತನ ಶ್ರೇಣಿಯಲ್ಲಿನ ಎರಡು ಹಂತಗಳನ್ನು ಕೆಳಗಿಳಿಸಲಾಗಿದೆ. ಕೆಳಗಿಳಿಸಿದ ಹಂತದಿಂದ ತಮ್ಮ ವಾರ್ಷಿಕ ವೇತನ ಬಡ್ತಿಯನ್ನು ಹೊಸದಾಗಿ ಗಳಿಸುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 21–04–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿರುವುದಿಲ್ಲವೆಂದು ಕಂಡುಬಂದಿದ್ದು ಹಾಗೂ ಶಿಸ್ತು ಪ್ರಾಧಿಕಾರದ ದಂಡನಾದೇಶವು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ, 59(1)(ಬಿ)ಗೆ ವ್ಯತಿರಿಕ್ತವಾಗಿರುವುದನ್ನು ಗಮನಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಾಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 93 ಪೊಸಿಅ 2010, ಬೆಂಗಳೂರು, ದಿನಾಂಕ : 28–6–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಮತಿ ಕೆ.ಎಸ್. ಪುಟ್ಟಮ್ಮ, ಮ.ಪಿ.ಐ., ಸಿ.ಸಿ.ಬಿ., ಬೆಂಗಳೂರು, ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನಾದೇಶವನ್ನು ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1650

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)